Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 | ಸಂಚಿಕೆ–50 | ಡಿಸೆಂಬರ್ 11–17, 2023 | ಪುಟ 16 | ರೂ. 10/–
Volume-17 | Issue-50 | December 11-17, 2023 | Pages:16 | Price: 10/-

ಐದು ರಾಜ್ಯಗಳ ಚುನಾವಣಾ ಫಲಿತಾಂಶ

2024 ರ ಚುನಾವಣೆಗೆ ಎಚ್ಚರಿಕೆಯ ಗಂಟೆ



ಬೆಳಗಾವಿ ಅಧಿವೇಶನ: ಘೋಷಿತ ಉದ್ದೇಶದ ನಿರ್ಲಕ್ಷ್ಯ



ಬಹುತ್ವವೇ ನಮ್ಮ ನಾಡಿನ ಹೆಗ್ಗುರುತು

ಡಿಸೆಂಬರ್ 6: ಎರಡು ಸಿದ್ಧಾಂತಗಳಿಗೆ ಸಾಕ್ಷಿಯಾದ ದಿನ

ಮಹಾಪರಿನಿರ್ವಾಣ ದಿನ ಮತ್ತು ಸಂವಿಧಾನ ಸಂರಕ್ಷಣಾ ದಿನ

ಎರಡು ಸಿದ್ಧಾಂತಗಳ ಸಂಘರ್ಷಗಳಿಗೆ ಸಾಕ್ಷಿಯಾದ ಡಿಸೆಂಬರ್ 6ರ ದಿನ



ನಾಗರಾಜ ನಂಜುಂಡಯ್ಯ

ಡಿಸೆಂಬರ್ 6, 1956 ಬಾಬಾ ಸಾಹೇಬ್ ಅಂಬೇಡ್ಕರ್ ನಿಧನ ಹೊಂದಿದ ದಿನ. ಅಂದು ಮಹಾ ಪರಿನಿರ್ವಾಣ ದಿನವನ್ನಾಗಿ ಇಡೀ ದೇಶದಾದ್ಯಂತ ಆಚರಿಸಲಾಗುತ್ತದೆ. ದಲಿತ ಸಮುದಾಯವು ಆಚರಿಸುವ ವಿಶೇಷ ದಿನ ಇದಾಗಿದೆ. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಹರಡಿದ ಸಮಾನತೆಯ ಸಂದೇಶವನ್ನು ಮತ್ತು ಅವರ ಜಾತಿ ವಿನಾಶದ ಕೂಗನ್ನು ಅರಗಿಸಿಕೊಳ್ಳಲಾಗದ ಹಿಂದುತ್ವ ಸನಾತನ ಸಂಪ್ರದಾಯಸ್ಥರಾದ ಆರ್.ಎಸ್.ಎಸ್. ಪ್ರೇರಿತ ಸಂಘಪರಿವಾರದ ಕರಸೇವಕರ ಗುಂಪು, ಇದೇ ದಿನದಂದು 1992 ರಲ್ಲಿ, ಅಯೋಧ್ಯೆಯಲ್ಲಿನ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ ದಿನವು ಹೌದು. ಈ ಎರಡು ಘಟನೆಗಳ ಕಾರಣಗಳಿಗಾಗಿ ಈ ದಿನ ಮುಖ್ಯವಾಗಿದೆ.

ಆಧುನಿಕ ಭಾರತೀಯ ಇತಿಹಾಸದಲ್ಲಿ ಡಿಸೆಂಬರ್ 6ರ ದಿನಾಂಕವು ಈ ಎರಡು ಘಟನೆಗಳ ಕಾರಣಗಳಿಗಾಗಿ ಮುಖ್ಯವಾಗಿದೆ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ಅಲ್ಪಕಾಲದ ಅನಾರೋಗ್ಯದ ನಂತರ, 1956 ರಲ್ಲಿ ಈ ದಿನ ನಿಧನರಾದದ್ದು ಅಂಬೇಡ್ಕರರ ಅನುಯಾಯಿಗಳಿಗೆ ದುಃಖದ ದಿನವಾದರೂ, ಅದನ್ನು ಮಹಾಪರಿನಿರ್ವಾಣ ದಿನವನ್ನಾಗಿ ಅರ್ಥಪೂರ್ಣವಾಗಿಯೇ 'ಸಂವಿಧಾನ ಸಂರಕ್ಷಣಾ ದಿನ'ವನ್ನಾಗಿಯೂ ಹಲವು ಕಡೆ ಆಚರಿಸಲ್ಪಡುತ್ತದೆ.


(ಕಾಕತಾಳೀಯ ಎಂಬಂತೆ, ಡಿಸೆಂಬರ್ 6, 2013 ರಂದು, ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇದ ನೀತಿಗಳ ವಿರುದ್ದ ಹೋರಾಟ ನಡೆಸಿದ್ದ ನೆಲ್ಸನ್ ಮಂಡೇಲ ರವರು ಅಂದೇ ನಿಧನ ಹೊಂದಿದರು. ಅಂಬೇಡ್ಕರ್ ಮತ್ತು ನೆಲ್ಸನ್ ಮಂಡೇಲಾ ನಡುವಿನ ಸಾಮಾಜಿಕ ಹೋರಾಟ ಜೀವನದಲ್ಲಿ ಸಾಮ್ಯತೆ ಇರುವುದರಿಂದ ನಿಮ್ಮ ನೆನಪಿಗಾಗಿ ಮಾಹಿತಿ)

ಇತ್ತೀಚಿನ ವರ್ಷಗಳಲ್ಲಿ ಈ ದಿನದಂದು ದಲಿತರ ಓಟುಗಳಿಗೆ ಲಗ್ಗೆ ಹಾಕುವ ಉದ್ದೇಶದಿಂದ, ಅನೇಕ ರಾಜಕೀಯ ನೇತಾರರು ಈ ದಿನದಲ್ಲಿ ದಲಿತ ಕೇರಿಗಳಿಗೆ ಬೇಟಿ ನೀಡುವ, ಅವರ ಗುಡಿಸಲಿನಲ್ಲಿ ವಾಸ್ತವ್ಯ ಹೂಡುವ, ಊಟ ಮಾಡುವ ಪರಿಪಾಠವು ಬೆಳೆದು ಬಂದಿದೆ.

ಅಂಬೇಡ್ಕರ್ ರವರು ಭಾರತ ದೇಶದ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಕಾರಣ, ಸರ್ಕಾರವು ಅಧಿಕೃತವಾಗಿ ಈ ದಿನವನ್ನು ಆಚರಣೆ ಮಾಡುವ ಮೂಲಕ, ಅಂಬೇಡ್ಕರ್ ರವರ ಅಪಾರ ಕೊಡುಗೆಗೆ ಗೌರವ ಸಲ್ಲಿಸುತ್ತಾ ಬಂದಿದೆ. ಸಮಾನತೆ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯದಲ್ಲಿ ನಂಬಿಕೆಯಿಡುವ ಜನರಿಗೆ ಇದು ಸಂಭ್ರಮದ ದಿನ.

ಆದಾಗ್ಯೂ, ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಹರಡಿದ ಸಮಾನತೆಯ ಸಂದೇಶವನ್ನು, ಮತ್ತು ಅವರ ಜಾತಿ ವಿನಾಶದ ಕೂಗನ್ನು ಅರಗಿಸಿಕೊಳ್ಳಲಾಗದ ಆರ್‌ಎಸ್‌ಎಸ್ ಮತ್ತು ಹಿಂದುತ್ವ ಸನಾತನ ಸಂಪ್ರದಾಯಸ್ಥರು, ಸ್ವತಂತ್ರ ಭಾರತದ ಅತ್ಯಂತ ಘೋರ ಅಪರಾಧಗಳಲ್ಲಿ ಒಂದಾದ ಅಯೋಧ್ಯೆಯ ಬಾಬರಿ ಮಸೀದಿ ಧ್ವಂಸಕ್ಕೆ ಇದೇ ದಿನಾಂಕವನ್ನು ಆರಿಸಿಕೊಂಡಿದ್ದು, ಉದ್ದೇಶಪೂರ್ವಕವಾಗಿಯೇ ಹೊರತು ಕಾಕತಾಳೀಯವೇನಲ್ಲ. ಇವೆರಡು ತದ್ವಿರುದ್ಧ ಸೆಣಸಾಡುವ ಸಿದ್ಧಾಂತಗಳು. ಒಂದು ಸಿದ್ಧಾಂತ ಭಾರತ ದೇಶದ ಪರಿಕಲ್ಪನೆ, ಭಾರತ ದೇಶದ ಸಂವಿಧಾನದ ಆಶಯಗಳಾದ ಸಮಾನತೆಯ ಸಾಮಾಜಿಕ ನ್ಯಾಯದ ಪರಿಕಲ್ಪನೆ ಹೊಂದಿದ್ದರೆ, ಮತ್ತೊಂದು ಸಿದ್ಧಾಂತ ಸನಾತನ ಹಿಂದು ಸಂಪ್ರದಾಯ ಎತ್ತಿಹಿಡಿಯುವ ಜಾತಿ ವ್ಯವಸ್ಥೆಯ ಬೂನಾದಿ ಮನುವಾದವೇ ಭಾರತದ ಪರಿಕಲ್ಪನೆ. ಹೀಗೆ ಎರಡು ಸಿದ್ಧಾಂತದ ಸಂಘರ್ಷಕ್ಕೆ ಸಾಕ್ಷಿಯಾಗಿದೆ ಡಿಸೆಂಬರ್ 6.

ಬಾಬ್ರಿ ಮಸೀದಿ ಧ್ವಂಸಗೊಳಿಸಿದ ನಂತರ ನಡೆದ ಭೀಕರ ಕೋಮುಗಲಭೆಗಳು, ಅದರಲ್ಲಿ ನೂರಾರು ಜನರು ಸತ್ತದ್ದು, ಇದೊಂದು ಹಿಂದುತ್ವ ಶಕ್ತಿಗಳ ಘೋರ ವಿಧ್ವಂಶಕ ಕೃತ್ಯ ಎಂಬುದನ್ನು ಸ್ಪಷ್ಟವಾಗಿ ಸಾಬೀತು ಪಡಿಸಿತ್ತು.



1992 ರಲ್ಲಿ ಕರಸೇವಕರಿಂದ ಬಾಬ್ರಿಮಸೀದಿ ಧ್ವಂಸ

ಅಂಬೇಡ್ಕರ್ ಅನುಯಾಯಿಗಳಿಗೆ ಮಹಾಪರಿನಿರ್ವಾಣ ದಿನದ ಆಚರಣೆ ಮತ್ತು ಸಂವಿಧಾನದ ಆಶಯಗಳನ್ನು ದೇಶದ ಜನರಿಂದ ಮರೆಮಾಚಿಸಲು, ಸನಾತನ ಹಿಂದೂ ಪ್ರತಿಗಾಮಿ ಬಲಪಂಥೀಯರು ಇದಕ್ಕೆ ಪರ್ಯಾಯವಾಗಿ ಈ ದಿನವನ್ನು ಶೌರ್ಯ ದಿವಸ್ ಅಥವಾ ವಿಜಯ ದಿವಸ್ ಎಂದು ಆಚರಿಸುತ್ತಾರೆ.

ಅಂಬೇಡ್ಕರ್ ಸಿದ್ಧಾಂತದ ಮೇಲಿನ ದಾಳಿ

ಬಾಬರಿ ಮಸೀದಿ ಧ್ವಂಸವು, ಮುಸ್ಲಿಂ ಸಮುದಾಯದವರ ಅಥವಾ ಕೇವಲ ಹಳೆಯ ಮಸೀದಿಯ ಮೇಲಿನ ದಾಳಿಯಾಗಿರಲಿಲ್ಲ. ಅಥವಾ ಭಾರತದಲ್ಲಿ ಕೋಮು ಸೌಹಾರ್ದತೆಯನ್ನು ಕದಡುವ ಪ್ರಯತ್ನ ಮಾತ್ರವಾಗಿರಲಿಲ್ಲ. ಇದು ಅಂಬೇಡ್ಕರ್ ಅವರ ಬೋಧನೆಗಳು, ಬರಹಗಳು, ಸಂದೇಶಗಳು ಮತ್ತು ಅವರ ಸಂವಿಧಾನದ ಸಮಾನತೆಯ ಪರಿಕಲ್ಪನೆಯನ್ನು ಮರೆಮಾಚಿಸಲು, ಅಂಬೇಡ್ಕರ್ ಸಿದ್ಧಾಂತದ ಮೇಲೆ ನಡೆದ ಸ್ಪಷ್ಟವಾದ ದಾಳಿಯಾಗಿತ್ತು.

ನಮ್ಮ ಸಂವಿಧಾನ ಒದಗಿಸಿದ ಸಮಾನತೆಯ ಪರಿಕಲ್ಪನೆಯು ಕೋಟ್ಯಾಂತರ ದಲಿತರ ಹೃದಯ ಮತ್ತು ಮನಸ್ಸಿನಲ್ಲಿ ಹಾಸುಹೊಕ್ಕಾಗಿದೆ. ಆದರೆ, ಅಂಬೇಡ್ಕರ್ ಅವರನ್ನು ಸಂವಿಧಾನ ಶಿಲ್ಪಿ, ಸಮಾಜ ಸುಧಾರಕ ಮತ್ತು ನ್ಯಾಯಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ ಎಂದು ಅಷ್ಟಕ್ಕೆ ಸೀಮಿತಗೊಳಿಸಲಾಗಿದೆ. ಅವರ ವೈಚಾರಿಕತೆಯ ಚಿಂತನೆ ಮತ್ತು ಸಾಮಾಜಿಕ ಮತ್ತು ಕ್ರಾಂತಿಕಾರಿ ಬರಹಗಳು, ಜಾತಿ ವ್ಯವಸ್ಥೆಗೆ ಮೂಲ ಕಾರಣವಾಗಿರುವ, ಮನುಸ್ಮೃತಿಯ ದಹನದ ಚಳುವಳಿ, ಮಹಾಡ್ ಕೆರೆಯ ನೀರಿನ ಹೋರಾಟ, ಇಂತಹ ಹಲವು ಪ್ರಮುಖ ರಾಜಕೀಯ ಬಂಡಾಯ ಹೋರಾಟಗಳ ವ್ಯಕ್ತಿತ್ವವನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚಲಾಗಿದೆ.

ಬೌದ್ಧಧರ್ಮ ಸ್ವೀಕರಿಸಿದರು

ಅಂಬೇಡ್ಕರ್ ಅವರ ಸಾಮಾಜಿಕ, ಕ್ರಾಂತಿಕಾರಿ ಬರಹಗಳು ಆರ್‌ಎಸ್‌ಎಸ್ ಮತ್ತು ಹಿಂದೂ ಬಲಪಂಥೀಯರಿಗೆ ಜೀರ್ಣಿಸಿಕೊಳ್ಳಲು ಇಂದಿಗೂ ಸಾಧ್ಯವಾಗುತ್ತಿಲ್ಲ. ಅಷ್ಟೇ ಏಕೆ, ಸಂವಿಧಾನವನ್ನು ಸಹಾ ಅವರು ಒಪ್ಪುತ್ತಿಲ್ಲ. ವೇಧ ಉಪನಿಷತ್ತುಗಳಿಂದ ಪ್ರೇರಿತಗೊಂಡ ಅವರ ಗೊಡ್ಡು ಹಿಂದೂ ಸಂಪ್ರದಾಯಗಳು, ಜಾತಿ ಕಟ್ಟುಪಾಡುಗಳು, ಮೂಡನಂಬಿಕೆಗಳನ್ನು ಅಂಬೇಡ್ಕರ್ ರವರು ಹೋರಾಟಗಳ ಮೂಲಕ ಧಿಕ್ಕರಿಸಿದರು. ದೇಶದ ಜನರ ಮೇಲೆ ಹೇರುವ ಸಂಘಟಿತ ಹಿಂದೂ ಪಟ್ಟುಗಳನ್ನು ನಿರ್ಮೂಲನೆ ಮಾಡಲು ಜೀವನ ಪರ್ಯಂತ ಅಂಬೇಡ್ಕರ್ ಶ್ರಮಿಸಿದರು. ಕೊನೆಗೆ ಹಿಂದೂ ಧರ್ಮವನ್ನು ತೊರೆದು ಬೌದ್ಧಧರ್ಮವನ್ನು ಸ್ವೀಕರಿಸಿದರು. ಆ ಸಂದರ್ಭದಲ್ಲಿ ಆರ್‌ಎಸ್‌ಎಸ್‌ನ ಮುಖ್ಯ ಸಿದ್ಧಾಂತವಾದಿ ಎಂ.ಎಸ್. ಗೋಳ್ವಾಲ್ಕರ್ ಅವರು ಬೌದ್ಧ ಧರ್ಮವನ್ನು ಮತ್ತು ಜಾತಿರಹಿತ ಸಮಾಜವನ್ನು ಪ್ರತಿಪಾದಿಸುವ, ಅಂಬೇಡ್ಕರ್ ರವರ ಧೈರ್ಯವನ್ನು ಕಂಡು ದಂಗಾಗಿದ್ದರು, ಆ ಕ್ಷಣ ಅವರು ಆತಂಕಗೊಂಡಿದ್ದರು. ಏಕೆಂದರೆ, ಅಂಬೇಡ್ಕರ್ ಜೊತೆ ಸಾವಿರಾರು ದಲಿತರು ಭೌದ್ಧ ದರ್ಮ ಸ್ವೀಕರಿಸಿದ್ದರು. ಅ ಸಂದರ್ಭದಲ್ಲಿ ಗೋಳ್ವಲ್ಕರ್ 'ಹಿಂದೂ ಸಂಪ್ರದಾಯಬದ್ಧ ಜಾತಿ ಪದ್ದತಿಯನ್ನು ತೊಡೆದುಹಾಕುವ, ಸಮಾನತೆ ಸಾರುವ ಭೌದ್ಧಧರ್ಮದಪ್ರಭಾವದ ಪ್ರಯತ್ನಕ್ಕೆ ಅಡ್ಡಿವುಂಟು ಮಾಡಲು ಎಲ್ಲಾ ರೀತಿಯ ಪ್ರಯತ್ನ ನಡೆಸಿದರು. ಅವರ ಅನುಯಾಯಿಗಳು ಅದನ್ನೇ ಈಗಲೂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ದಲಿತರು ಈ ಸೈದ್ಧಾಂತಿಕ ಘರ್ಷಣೆಯನ್ನು ಅಂಬೇಡ್ಕರ್ ರವರ ದೃಷ್ಟಿಕೋನದಿಂದ ಅರ್ಥೈಸಿಕೊಂಡು, ಆರ್ಥಿಕ ಶೋಷಣೆ ವಿರುದ್ಧದ ಕಾರ್ಮಿಕ ವರ್ಗದ ಪ್ರಬಲ ಆಂದೋಲನದಲ್ಲಿ ಬೆರೆಯಬೇಕು. ಮನುವಾದ ಮತ್ತು ಜಾತಿ ಅಸ್ಪೃಶ್ಯತೆ ವ್ಯವಸ್ಥೆಯ ನಿರ್ಮೂಲನೆಯ ತಮ್ಮ ಹೋರಾಟವನ್ನು ಬಲಿಷ್ಟ ಚಳುವಳಿಯ ನೆಲೆಯೊಂದಿಗೆ ಸೇರಬೇಕು. ಇದೇ ಡಿಸೆಂಬರ್ 6 ರ ದಿನದ ಪ್ರತಿಜ್ಞೆಯಾಗಲಿ ಎಂದು ಆಶಿಸೋಣ.

ಅಂಬೇಡ್ಕರ್ ಸಿದ್ಧಾಂತಕ್ಕೆ ವಿರುದ್ಧವಾದ ಆರ್‌ಎಸ್‌ಎಸ್‌ನ ಕಾರ್ಯಸೂಚಿ

ಆರ್‌ಎಸ್‌ಎಸ್‌ನ ಕಾರ್ಯ ಸೂಚಿಯು ಅಂಬೇಡ್ಕರ್ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಅಂಬೇಡ್ಕರ್ ಅವರು ಅಂಚಿನಲ್ಲಿರುವ ಹಾಗೂ ಶೋಷಣೆಗೆ ತುತ್ತಾದ ಸಮುದಾಯಕ್ಕೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಒದಗಿಸಲು ತೀವ್ರವಾಗಿ ಹೋರಾಡಿದರು. ತಮ್ಮ ಪ್ರಸಿದ್ಧ ಪ್ರಬಂಧ "ಜಾತಿ ಪದ್ದತಿ ನಿರ್ಮೂಲನೆ" (ದಿ ಅನಿಹಿಲೇಷನ್ ಆಫ್ ಕ್ಯಾಸ್ಟ್‌ನಲ್ಲಿ) "ನನ್ನ ಆದರ್ಶ ಸಮಾಜದ ಪರಿಕಲ್ಪನೆಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ–ಸೋದರತ್ವದ ಆದಾರ ಸ್ತಂಭದ ಮೇಲೆ ನಿಲ್ಲುವ ಸಮಾಜವಾಗಿದೆ" ಎಂದು ಸಾರಾಸಗಟಾಗಿ ಪ್ರತಿಪಾದಿಸಿದರು. ಇದನ್ನು ಓದಿದ ಗೋಳ್ವಾಲ್ಕರ್ ಬೆದರಿದರು. ಅವರು "ಸಮಾನತೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸುವುದು ಮಿಥ್ಯೆ, ಅದು ಅಸಾಧ್ಯ ಎಂದು ಘಂಟಾಘೋಷವಾಗಿ ಘೋಷಿಸಿದರು. ಇದರ ಅರ್ಥವೆಂದರೆ, ಮನುವಾದ ಸಿದ್ಧಾಂತವು ಸಮಾನತೆಯ ಸಮಾಜ ನಿರ್ಮಾಣಕ್ಕೆ ಬಿಡುವುದಿಲ್ಲ. ಜಾತಿ ವಿನಾಶಕ್ಕೆ ನಾವು ಬದ್ದ ವೈರಿಗಳು ಎಂಬುದನ್ನು ಗೋಳ್ವಾಲ್ಕರ್ ಅಂದೇ ಸ್ಪಷ್ಟಗೊಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಆರ್‌ಎಸ್‌ಎಸ್ ಮತ್ತು ಹಿಂದೂ ಬಲಪಂಥೀಯರ ಈ ಒಳಮರ್ಮದ ಬಗ್ಗೆ ದಲಿತ ಸಮುದಾಯ ಎಚ್ಚರಿಕೆ ವಹಿಸಬೇಕಾಗಿದೆ.

ದಲಿತರ ನಡುವೆ ಪ್ರವೇಶಕ್ಕೆ ಪ್ರಯತ್ನ

ಆರ್.ಎಸ್.ಎಸ್. ಸಬಾಲ್ಟರ್ನ್ ಹಿಂದುತ್ವವನ್ನು ತನ್ನ ಸೈದ್ಧಾಂತಿಕ ಮಾರ್ಗವಾಗಿ ಬಿಂಬಿಸುವ ಮೂಲಕ ದಲಿತರ ನಡುವೆ ಪ್ರವೇಶ ಮಾಡಲು ಪ್ರಯತ್ನಿಸುತ್ತಿದೆ. ಹಿಂದೂ ಧರ್ಮವು ವೈವಿಧ್ಯಮಯ ಮತ್ತು ಏಕರೂಪದ ಸಂಪ್ರದಾಯಗಳಿಗೆ ಹೆಸರುವಾಸಿಯಾಗಿದೆ. ಹೀಗಾಗಿ ಆರ್‌ಎಸ್‌ಎಸ್ ಭಾರತದ ಜನಸಂಖ್ಯೆಯ ಮೇಲೆ ಏಕರೂಪದ ಹಿಂದೂ ಧರ್ಮದ ಆವೃತ್ತಿಯನ್ನು ಹೇರಲು ಪ್ರಯತ್ನಿಸುತ್ತದೆ. ಉತ್ತರ ಭಾರತದಾದ್ಯಂತ, ಕೆಳಜಾತಿಗಳ ಜನರು, ಪ್ರಮುಖವಾಗಿ ದಲಿತರು ಸಹಾ ಬ್ರಾಹ್ಮಣರ ಆಮಿಷಕ್ಕೆ ಒಳಗಾಗುತ್ತಿರುವುದನ್ನು ಸ್ಪಷ್ಟವಾಗಿ ಕಾಣಬಹುದು

ಇದು ಅಂಬೇಡ್ಕರ್ ಅನುಯಾಯಿಗಳನ್ನು ಸ್ವಾಧೀನ ಪಡಿಸಿಕೊಳ್ಳಲು ನಡೆಸುವ ಆರ್‌ಎಸ್‌ಎಸ್‌ನ ಹೊಸ ಕಾರ್ಯಯೋಜನೆಯ ಭಾಗವಾಗಿದೆ. ಒಂದು ದೇಶ, ಒಂದು ಧರ್ಮ ಎನ್ನುವುದು ಇವರ ಸಿದ್ಧಾಂತವೆಂಬುದನ್ನು ಮರೆಯಬಾರದು. (ಇತ್ತೀಚೆಗೆ ಒಂದು ದೇಶ, ಒಂದು ಚುನಾವಣೆ ಎಂಬ ಕೂಗನ್ನು ಎತ್ತಿರುವುದು ಮತ್ತೊಂದು ಉದಾಹರಣೆ)

ಹೀಗಾಗಿಯೇ ಸ್ಥಳೀಯ ದಲಿತ ಗ್ರಾಮ ದೇವತೆಗಳ ಆಚರಣೆಗಳನ್ನು ಅಳಿಸಿ ಹಾಕಿ, ಅವುಗಳಿಗೆ ಪರ್ಯಾಯವಾಗಿ ಹಿಂದೂ ಧರ್ಮದ ಹೊಸ ಸ್ವರೂಪದ ಆಚರಣೆಗಳ ಮೂಲಕ, ಆ ಸಮುದಾಯದ ಜನರನ್ನು ಭಯಭಕ್ತಿಯಿಂದ, ತಮ್ಮ ತೆಕ್ಕೆಗೆ ಸೆಳೆಯುವ ರಾಜಕೀಯ ಪ್ರಯತ್ನ ಹೆಚ್ಚಾಗಿದೆ. ಆದರೆ, ಮತ್ತೊಂದೆಡೆ, ಜಾತಿ ಶ್ರೇಣಿಗಳನ್ನು ನಿರ್ಮೂಲನೆ ಮಾಡದೆ, ವರ್ಣಾಶ್ರಮ ಪದ್ಧತಿಯನ್ನು ರಕ್ಷಿಸಿ ಕೊಳ್ಳಲು, 'ಹಿಂದು ನಾವೆಲ್ಲರೂ ಒಂದು' ಎಂಬ ಪರಿಕಲ್ಪನೆಯ ರಾಷ್ಟ್ರೀಯತೆಯನ್ನು ಹಿಂದೂ ಧರ್ಮದೊಂದಿಗೆ ಸಂಯೋಜಿಸುವ ಕೆಲಸವನ್ನು ವ್ಯವಸ್ಥಿತವಾಗಿ ನಡೆಸುತ್ತಿದೆ. ಈ ವೈರುದ್ಯಗಳನ್ನು ದಲಿತ ಸಮುದಾಯ ಜಾಗೃತವಾಗಿ ಅರ್ಥ

ಪುಟ 06 ಕ್ಕೆ

ಸಂಪಾದಕೀಯ

ಬೆಳಗಾವಿ ಅಧಿವೇಶನ: ಉತ್ತರ ಕರ್ನಾಟಕದ ಅಭಿವೃದ್ಧಿ ನಿರ್ಲಕ್ಷ್ಯ

ಬೆಳಗಾವಿಯಲ್ಲಿ 2023 ಡಿಸೆಂಬರ್4 ರಿಂದ ಆರಂಭಗೊಂಡಿರುವ ವಿಧಾನಸಭೆಯ ಚಳಿಗಾಲದ ಹತ್ತು ದಿನಗಳಅಧಿವೇಶನ ಐದು ದಿನಗಳನ್ನು ಪೂರೈಸಿದೆ. ವರ್ಷದಲ್ಲಿ ಒಂದು ಬಾರಿ ಸೇರುವ ಈ ಅಧಿವೇಶನ ಬೆಳಗಾವಿಯನ್ನು ಎರಡನೆಯ ರಾಜಧಾನಿಯನ್ನಾಗಿ ಪರಿಭಾವಿಸಬೇಕು, ಅದು ಕರ್ನಾಟಕದ ಭಾಗ ಎಂಬುದೂ ಧೃಡವಾಗಿ ಪ್ರತಿಪಾದಿತವಾಗ ಬೇಕು ಎಂಬ ಒತ್ತಾಸೆಯ ಹಿನ್ನೆಲೆಯಲ್ಲಿ ವಿಧಾನಸಭಾ ಸೌಧವೂ ನಿರ್ಮಾಣಗೊಂಡು ಕಲಾಪಗಳೂ ನಡೆಯುವುದು ಜನಜನಿತ. 2012 ಅಕ್ಟೋಬರ್ 11 ರಂದು ಬೆಳಗಾವಿಯಲ್ಲಿ ನೂತನ ವಿಧಾನಸೌಧದ ಕಟ್ಟಡ ಉದ್ಘಾಟನೆಗೊಂಡಾಗ ಇಲ್ಲಿ ನಡೆಯುವ ಅಧಿವೇಶನದಲ್ಲಿ ಪ್ರಮುಖವಾಗಿ ಉತ್ತರ ಕರ್ನಾಟಕದ, ಹೈದ್ರಾಬಾದ್ ಕರ್ನಾಟಕದ (ಕ.ಕರ್ನಾಟಕ) ಜ್ವಲಂತ ಪ್ರಶ್ನೆಗಳಿಗೆ ಪೂರ್ಣ ಒತ್ತು ಸಿಗಲಿದೆಯೆಂದೂ ಘೋಷಿಸಲಾಗಿತ್ತು. ಇನ್ನೊಂದು ರೀತಿಯಲ್ಲಿ ಉತ್ತರ ಕರ್ನಾಟಕವನ್ನು ಒಳಗೊಂಡ ಈ ಭಾಗದ ಅಭಿವೃದ್ಧಿಗೆ ಅತಿ ಹೆಚ್ಚಿನ ಮಹತ್ವ ಇದರಿಂದಾಗಿ ಸಿಗಲಿದೆ ಮತ್ತು ಇಲ್ಲಿ ಅದಕ್ಕೆ ಪ್ರಾಶಸ್ತ್ಯ ಎಂಬುದು ಅದರ ಸಾರಾಂಶವಾಗಿತ್ತು. ಅಂದಿನಿಂದ ಇಂದಿನವರೆಗೂ ಆದ ಮುಖ್ಯಮಂತ್ರಿಗಳು ಇದೇ ಮಾತುಗಳನ್ನು ಪುನರುಚ್ಚರಿಸುತ್ತಾ ಬರುತ್ತಿರುವುದು ಒಂದು ವಾಡಿಕೆಯಾಗಿದೆ.

ಕರ್ನಾಟಕದ ಉತ್ತರ ಭಾಗದ ಇನ್ನೊಂದು ಬದಿಯಲ್ಲಿರುವ ಬೆಳಗಾವಿಯಲ್ಲಿ ನಡೆಯುವ ಅಧಿವೇಶನವು ಈ ಭಾಗದ ಪ್ರಶ್ನೆಗಳಿಗೆ ಪರಿಹಾರ ಹುಡುಕುವ, ಪ್ರಾದೇಶಿಕ ಅಸಮಾನತೆಯಲ್ಲಿ ನಗುತ್ತಿರುವ ಈ ಭಾಗದಲ್ಲಿ ಸಮಾನವಾಗುವ ಅಭಿವೃದ್ಧಿ ಸಾಧಿಸುವ ಉದ್ದೇಶ ಅತ್ಯಂತ ಸ್ವಾಗತಾರ್ಹವಾದುದು. ಸರಿ ಸುಮಾರು ಒಂದು ದಶಕವನ್ನು ದಾಟಿರುವ ಈ ಅಧಿವೇಶನದ ಪರಿಪಾಠ ಮತ್ತು ಇಲ್ಲಿನ ಕಲಾಪಗಳು ಘೋಷಿತ ಉದ್ದೇಶವನ್ನು ಸಾಧಿಸಿದವೇ ಎಂದು ವಿಮರ್ಶೆ ಮಾಡಿಕೊಂಡರೆ ಉತ್ತರ ಆಶಾದಾಯಕವಾಗಿಲ್ಲ. ಬದಲಾಗಿ, ಇಲ್ಲಿಯ ಕಲಾಪಗಳು ಯಥಾರೀತಿಯಲ್ಲಿ ನಡೆಯುತ್ತಿರುವುದು ಮತ್ತು ಬಹುತೇಕ ಸದನದ ಸಮಯ, ಸಂಪನ್ಮೂಲಗಳು ವ್ಯರ್ಥವಾಗುವ ಪರಿಪಾಠವೇ ಮುಂದುವರಿದಿರುವುದು ಅತ್ಯಂತ ವಿಷಾದ ಮತ್ತು ನೋವಿನ ಸಂಗತಿ ಎಂದು ಹೇಳಲೇಬೇಕಾಗುತ್ತದೆ.

ನವೆಂಬರ್ 4 ರಿಂದ ಆರಂಭಗೊಂಡ ವಿಧಾನಸಭಾ ಕಲಾಪಗಳಲ್ಲಿ ಉತ್ತರ ಕರ್ನಾಟಕದ ಕುರಿತಾದಂತೆ ವಿಶೇಷವಾದ ಯಾವ ಕಾರ್ಯ ಸೂಚನೆಯೂ ಕಲಾಪದ ಪಟ್ಟಿಯಲ್ಲಿ ಅಷ್ಟಾಗಿ ಕಂಡು ಬರುತ್ತಿಲ್ಲ. ಮತ್ತು ಅದಕ್ಕೆ ಹೆಚ್ಚಿನ ಒತ್ತು ಸಿಗುತ್ತದೆ ಎಂಬ ವಿಶ್ವಾಸವು ಹುಟ್ಟುತ್ತಿಲ್ಲ. ಇಲ್ಲಿಯವರೆಗೂ ಯಥಾ ರೀತಿಯ ಕಲಾಪಗಳು ನಡೆಯುತ್ತಿರುವುದಲ್ಲದೆ ಬಹು ಮುಖ್ಯವಾಗಿ ರಾಜ್ಯದ ಜನತೆಯ ಜ್ವಲಂತ ಪ್ರಶ್ನೆಗಳ ಕಡೆಗೆ ಗಮನ ಕೊಡದೆ ಆರೋಪ ಪ್ರತ್ಯಾರೋಪಗಳ ನಾಟಕೀಯತೆಯಲ್ಲಿ ಇಡೀ ಸದನವನ್ನು ಮತ್ತು ರಾಜ್ಯದ ಗಮನವನ್ನು ಹಾದಿ ತಪ್ಪಿಸುವುದು ಎದ್ದು ಕಾಣುತ್ತದೆ. ಅಧಿಕೃತ ವಿರೋಧಪಕ್ಷವಾಗಿರುವ ಬಿಜೆಪಿ ಮತ್ತು ಅದರೊಟ್ಟಿಗೆ ಬೆಸೆದುಕೊಂಡಿರುವ ಜೆಡಿಎಸ್ ಪಕ್ಷವು ತನ್ನ ಹೊಣೆಗಾರಿಕೆಯನ್ನು ಪೂರ್ಣವಾಗಿ ಮರೆತಂತಿದೆ. ಮಾತ್ರವಲ್ಲ, ಮೂಲ ಪ್ರಶ್ನೆಗಳತ್ತ ಚರ್ಚೆ ಹೊರಳಿಸದೇ ಪ್ರಚೋದನಾತ್ಮಕ ಮಾತುಗಳ ಮೂಲಕ ವಿವೇಚನೆಯನ್ನೇ ಇಲ್ಲವಾಗಿಸಿ ಉದ್ರಿಕ್ತ ವಾತಾವರಣವನ್ನು ಸೃಷ್ಟಿಸುವುದರಲ್ಲಿ ಅದರ ನಾಯಕರು ವಿಶೇಷವಾಗಿ ಬಿಜೆಪಿಯ ನಾಯಕರು ನಿರತರಾಗಿರುವುದು ಎದ್ದು ಕಾಣುತ್ತದೆ. ಇಸ್ಲಾಂನ ಧಾರ್ಮಿಕ ಗುರುಗಳಿಗೆ ಐ.ಎಸ್.ಐ.ಎಸ್. ನಂಟಿದೆ ಮತ್ತು ಇವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೂ ಸಂಬಂಧವಿದೆ ಎಂದು ಶಾಸಕ ಬಸವರಾಜ ಪಾಟೀಲ್ ಯತ್ನಾಳ್ ರವರು ಇದ್ದಕ್ಕಿದ್ದಂತೆ ಆರೋಪಿಸಿದ ಉದ್ದೇಶವಾದರೂ ಏನು?

ಹಿಂದಿನ ಅಧಿವೇಶನಗಳ ಕಲಾಪಗಳನ್ನು ಗಮನಿಸಿದಾಗಲೂ ಇಂತಹದೇ ವಿದ್ಯಾಮಾನಗಳಿಗೆ ಸದನ ಸಾಕ್ಷಿಯಾಗಿದ್ದಿದೆ. ಇನ್ನೇನು ಅಧಿವೇಶನದ ಕಲಾಪ ಮುಕ್ತಾಯವಾಗಲಿದೆ ಎನ್ನುವ ಸ್ಥಿತಿಯಲ್ಲಿ ಸರಕಾರಕ್ಕೆ ಬೇಕಿರುವ ಕೆಲವು ಮಸೂದೆಗಳನ್ನು ಅವಸರದಲ್ಲಿ ಮಂಡಿಸುವುದು ಮತ್ತು ಚರ್ಚೆಯೇ ಇಲ್ಲದೆ ಅಂಗೀಕಾರ ಮಾಡಿಕೊಳ್ಳುವುದು ಸತತವಾಗಿ ಪಾಲಿಸಿಕೊಂಡ ಬಂದ ಕುತಂತ್ರ ಪ್ರಜಾತಂತ್ರದಲ್ಲಿ ಅಭ್ಯಾಸವಾಗಿದೆ.

ಹಾಗೆಯೇ ಉತ್ತರ ಕರ್ನಾಟಕದ ಅಭಿವೃದ್ಧಿಗೆಂದು ಸರ್ಕಾರ ಘೋಷಿಸುವ ಯೋಜನೆಗಳು ಬಹುತೇಕ ಕೆಲವು ಸ್ಕೀಮ್ ಗಳ ಮಟ್ಟದಲ್ಲಿ, ಒಂದಿಷ್ಟು ಹಣವನ್ನು ಮೀಸಲಿಡಲಾಗಿದೆ ಎಂಬ ಘೋಷಣೆಯಲ್ಲಿ ಪರ್ಯಾವಸಾನಗೊಳ್ಳುತ್ತವೆ. ವಾಸ್ತವದಲ್ಲಿ ಈ ಪ್ರದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕವಾದ ಒಟ್ಟು ವಸ್ತು ಸ್ಥಿತಿಯನ್ನು ಹಿನ್ನೆಲೆಯಾಗಿರಿಸಿಕೊಂಡು ಮೂಲಭೂತ ಪರಿವರ್ತನೆಯನ್ನು ತರುವ ನಿಟ್ಟಿನಲ್ಲಿ ಸೂಕ್ತವಾದ ಕಾರ್ಯ ಯೋಜನೆಯನ್ನು ರೂಪಿಸುವ ರಾಜಕೀಯ ಇಚ್ಚಾ ಶಕ್ತಿಯನ್ನು ಇಲ್ಲಿಯವರೆಗೂ ಬಂದ ಯಾವ ಸರ್ಕಾರಗಳು ಪಾಲಿಸಲಿಲ್ಲ ಎನ್ನುವುದು ಅತ್ಯಂತ ವಿಷಾದಕರ ಸಂಗತಿ. ಹಾಗೆ ನೋಡಿದರೆ ಈ ಪ್ರದೇಶದ ಒಟ್ಟು ಅಭಿವೃದ್ಧಿಯ ಪ್ರಶ್ನೆಯನ್ನು ಕೈಗಾರಿಕೆ, ಕೃಷಿ ಮತ್ತು ಶೈಕ್ಷಣಿಕವಾದ ಹಾಗೂ ಸಾಮಾಜಿಕವಾದ ಮೂಲ ಸಂಗತಿಗಳೊಂದಿಗೆ ಆಳವಾಗಿ ವಿಶ್ಲೇಷಿಸಿ ನಿರ್ದಿಷ್ಟ ಪ್ರಶ್ನೆಗಳನ್ನು ಆದಗಯತೆಯಾಗಿ ಗುರುತಿಸಿ, ಅದಕ್ಕೆ ಪರಿಹಾರವಾಗಿ ಹಣಕಾಸಿನ ಮತ್ತು ಆಡಳಿತಾತ್ಮಕ ಕಾರ್ಯ ನೀತಿಯನ್ನು ಚರ್ಚಿಸಿ ನಿರ್ಣಯಕ್ಕೆ ಬರುವುದು ಈ ಶಾಸನ ಸಭೆಯ ಬಹುಮುಖ್ಯ ಕೆಲಸವಾಗಬೇಕು. ಆದರೆ ಅದನ್ನೇ ಇಲ್ಲಿ ಮರೆಮಾಚಿಕೊಂಡು ಬರಲಾಗಿದೆ. ಈ ಭಾಗದಲ್ಲಿರುವ ಬಡತನಕ್ಕೆ, ನಿರುದ್ಯೋಗ, ಆ ಕಾರಣದಿಂದ ತೀವ್ರವಾಗಿರುವ ವಲಸೆ ಯಂತಹ ಪ್ರಶ್ನೆಗಳಿಗೆ ಇಲ್ಲಿನ ಭೂ ಸಂಬಂಧಗಳು ಪ್ರಧಾನ ಪಾತ್ರವನ್ನು ವಹಿಸುತ್ತವೆ. ಈ ಭಾಗದಲ್ಲಿ ಅತಿ ದೊಡ್ಡ ಸಂಖ್ಯೆಯಲ್ಲಿ ಭೂಹೀನ ಕೃಷಿ ಕೂಲಿಕಾರರು ಇರುವುದು ಮತ್ತು ಭೂಮಿಯ ಒಡೆತನ ಹಿಂದಿನಿಂದ ಇಂದಿನವರೆಗೂ ಕೆಲವೇ ಜನರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೇಂದ್ರೀಕೃತವಾಗಿರುವುದು ಒಂದು ಪ್ರಧಾನವಾದಂತಹ ಪ್ರಶ್ನೆ. ಪ್ರಾದೇಶಿಕ ಅಸಮಾನತೆ ಎನ್ನುವುದು ಕೂಡ ಭಾರತದ ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಾ ಬಂದ ಬಂಡವಾಳಶಾಹಿ, ಭೂಮಾಲೀಕ ಆರ್ಥಿಕ ನೀತಿಗಳ ಅತ್ಯಂತ ಸಹಜ ಉತ್ಪನ್ನ ಎನ್ನುವುದು ಸರ್ವ ವಿಧಿತ. ಪ್ರಾದೇಶಿಕ ಅಸಮಾನತೆಯ ಕುರಿತಾದಂತೆ ವಿಸ್ತೃತವಾದ ಅಧ್ಯಯನವನ್ನು ನಡೆಸಿದ ಅರ್ಥಶಾಸ್ತ್ರಜ್ಞ, ದಿವಂಗತ ಪ್ರೊ ಡಿ. ಎಂ. ನಂಜುಂಡಪ್ಪ ನವರು ನೀಡಿದ ವರದಿ ಅನೇಕ ಮೂಲ ವಾಸ್ತವಗಳನ್ನು ಅದು ಹೊರಗೆಡಹಿದೆ. ಪರಿಹಾರದ ಸೂಚನೆಗಳಲ್ಲಿ ವರದಿ ಎಡವಿದೆ ಅಥವಾ ಹಲವು ಕೊರತೆಗಳು ಇವೆ ಎನ್ನುವಾಗಲೂ ನಮ್ಮ ಅಭಿವೃದ್ಧಿಯ ಗೊತ್ತು ಗುರಿಗಳಿಗೆ ಆಧಾರವಾಗಬಲ್ಲ ಅಂಶಗಳು, ಸಲಹೆಗಳು ಇಲ್ಲಿವೆ. ಕಳೆದ ಹಲವು ದಶಕಗಳಿಂದ ಜಾರಿಗೆ ತರಲಾಗುತ್ತಿರುವ ಉದಾರೀಕರಣ, ಖಾಸಗಿಕರಣದ ನೀತಿಗಳು ಈ ಹಿಂದಿದ್ದ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿವೆ. ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸಲು ಬದ್ಧ ಕಂಕಣರಾಗಿದ್ದೇವೆ ಎಂದು ಹೇಳುತ್ತಲೇ ಬಂದ ಸರ್ಕಾರಗಳು

ಪುಟ 15 ಕ್ಕೆ

ಅರ್ಜುನನ ಸಾವು ನ್ಯಾಯವೇ?

ಈ ವಾರ

ಎಸ್.ವೈ.ಗುರುಶಾಂತ್

ಪ್ರಖ್ಯಾತವಾದ ಮೈಸೂರು ದಸರಾದಲ್ಲಿ ಒಂಬತ್ತು ಬಾರಿ ಅಂಬಾರಿಯನ್ನು ಹೊತ್ತಿದ್ದ ಅರ್ಜುನ ಆನೆಯ ಸಾವು ನ್ಯಾಯವೇ ಎಂಬ ಪ್ರಶ್ನೆ ವ್ಯಾಪಕ ಸ್ವರೂಪವನ್ನು ಪಡೆದುಕೊಂಡಿದೆ. ಸಕಲೇಶಪುರದ ಯಳ ಸೂರಿನಲ್ಲಿ 2023 ಡಿಸೆಂಬರ್ 4 ರಂದು ಯುವ ಮದಗಜದೊಂದಿಗೆ ನಡೆದ ಹೊಡೆದಾಟದಲ್ಲಿ 63 ವರ್ಷಗಳ ಅರ್ಜುನ ಸಾವನ್ನಪ್ಪಿದ ಎನ್ನುವ ಸುದ್ದಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ನೀಡಿದ ಪ್ರಕಟನೆಯನ್ನು ಜನ ಒಪ್ಪಲಿಲ್ಲ. ಅರ್ಜುನನ ಸಾವು ಮತ್ತು ಅಧಿಕಾರಿಗಳ ಹೇಳಿಕೆಯ ವಿರುದ್ಧ ಜನತೆಯ ಆಕ್ರೋಶ ಅದೆಷ್ಟು ತೀವ್ರವಾಗಿತೆಂದರೆ ಆ ಪ್ರದೇಶದಲ್ಲಿ ಇದ್ದ ಜನ ಬೀದಿಗಿಳಿದು ಪ್ರತಿಭಟನೆಯನ್ನು ನಡೆಸಿದರು. ಸಮಯ ಸರಿದಂತೆ ಆನೆ ಅರ್ಜುನನ ಸಾವಿಗೆ ಹೊಸ ಕಾರಣಗಳು ಹೊರಬಂದವು. ಈ ಹೊಡೆದಾಟದಲ್ಲಿ ಅರಣ್ಯ ಅಧಿಕಾರಿಗಳು ಚಿಮ್ಮಿಸಿದ ಅರವಳಿಕೆ ಚುಚ್ಚುಮದ್ದು ಮತ್ತು ಹಾರಿಸಿದ ಗುಂಡು ಗುರಿ ತಪ್ಪಿ ಅಥವಾ ಗುರುತು ಹಿಡಿಯದೇ ಅರ್ಜುನನನ್ನು ಬಲಿ ಪಡೆದಿದೆ ಎಂಬುದು! ಇದು ಜನರ ಆಕ್ರೋಶಕ್ಕೆ ಕಾರಣವಾಗಿತ್ತು.

'ಹತ್ಯೆಯಾದ ಅರ್ಜುನ ಎಲ್ಲರ ಮನ ಗೆದ್ದಿದ್ದ. ವಿಶೇಷವಾಗಿ ಅವನನ್ನು ನೋಡಿಕೊಳ್ಳುತ್ತಿದ್ದ ಮಾವುತರು ತೀವ್ರ ಆಘಾತಕ್ಕೆ ಒಳಗಾಗಿದ್ದರು. ಅರ್ಜುನನ ಅಂತ್ಯಕ್ರಿಯೆ ಸಂದರ್ಭದಲ್ಲಿ ಮಾವುತರು ಮತ್ತು ಆ ಪರಿಸರದ ಜನತೆ ವ್ಯಕ್ತಪಡಿಸಿದ ಆಕ್ರಂದನ, ಅಳಲು ಮತ್ತು ಸಂಕಟಗಳು ಆನೆಯೊಂದಿಗೆ ಬೆಸೆದಿದ್ದ ಭಾವನಾತ್ಮಕ ನಂಟನ್ನು ಸಾರುತ್ತಿದ್ದವು.

ಆನೆಗಳನ್ನು ಸಾಕಿ ಸಲಹುವ ಆ ಬಹುತೇಕರೆಲ್ಲರೂ ಕೊಡಗು, ಮಲೆನಾಡಿನಲ್ಲಿಯೇ ನೆಲೆಸಿರುವ ಆದಿವಾಸಿ ಸಮುದಾಯಕ್ಕೆ ಸೇರಿದವರು. ವಿಶೇಷವಾಗಿ, ಆನೆ ಪಳಗಿಸುವುದರಲ್ಲಿ ನಿಸ್ಸೀಮರಾಗಿರುವ ಜೇನು ಕುರುಬರು. ಈ ಸಮುದಾಯದ ಜನರಿಗೆ ಕಾಡಾನೆಗಳೊಂದಿಗೆ ಅತೀ ಭಾವನಾತ್ಮಕ ನಂಟು. ಕಾಡಿನ ಯಾವುದೇ ವನ್ಯಜೀವಿಗಳನ್ನು ಇಲ್ಲಿನ ಸಮುದಾಯಗಳು ತಮ್ಮ ಶತೃಗಳೆಂದು ಭಾವಿಸುವುದಿಲ್ಲ. ಆನೆಗಳ ತುಳಿತಕ್ಕೆ ಸಿಕ್ಕ, ಅನೇಕ ಬಾರಿ ಸಾವಿನ ದವಡೆಯಿಂದ ತಪ್ಪಿಸಿಕೊಳ್ಳುವ ಇವರು ಪ್ರಾಣಿಗಳ ಮೇಲೆ ದ್ವೇಷವನ್ನು ಸಾಧಿಸಿದ ಉದಾಹರಣೆಗಳು ತೀರಾ ಇಲ್ಲವೆಂದೇ ಹೇಳಬಹುದು. ತಾವು ಬದುಕುವ ಪರಿಸರದಲ್ಲಿ ತಮ್ಮಂತೆ ಇತರ ಜೀವ ರಾಶಿಗಳ ಬದುಕು ಇದೆ. ಇಡೀ ಅರಣ್ಯ ಮತ್ತು ಪಾರಿಸಾರಿಕ ವನ್ಯಜೀವಿಗಳ ಜೊತೆಯಲ್ಲೇ ತಮ್ಮ ಉಳಿವು ಇದೆ ಎನ್ನುವ ವಿವೇಕ ಈ ಸಮುದಾಯಗಳಲ್ಲಿ ಬಾಲ್ಯದ ಅವಸ್ಥೆಯಿಂದಲೇ ರೂಢಿಗತವಾಗುತ್ತದೆ.

ಅರ್ಜುನ ಆನೆಯ ಸಾವಿಗೆ ಕಾರಣವಾದ ಅಂಶಗಳಾದರೂ ಏನು? ಒಂದನೇದಾಗಿ, ಮದಗಜವನ್ನು ಪಳಗಿಸಲು ಅರ್ಜುನನನ್ನು ಕಾರ್ಯಾಚರಣೆಗೆ ಇಳಿಸಿದ್ದು ತಪ್ಪು ಎನ್ನಲಾಗುತ್ತಿದೆ. ಮುಖ್ಯವಾಗಿ 60 ವರ್ಷಗಳು ದಾಟಿದ (ನಿವೃತ್ತವಾದ) ಆನೆಗಳನ್ನು ಯಾವುದೇ ಕಾರ್ಯಾಚರಣೆಗೆ ಬಳಸಕೂಡದು ಎಂದು ಸುಪ್ರೀಂಕೋರ್ಟಿನ ಆದೇಶವಿದೆ. ಹೀಗಿರುವಾಗ ಅರಣ್ಯದ ಅಧಿಕಾರಿಗಳು ಇದನ್ನು ನಿರ್ಲಕ್ಷಿಸಿದ್ದಾರೆ. ಎರಡನೆಯದಾಗಿ, ಮದಗಜ ದೊಂದಿಗೆ ನಡೆದ ಈ ಕಾದಾಟದಲ್ಲಿ ಮದ ಗಜಕ್ಕೆ ನೀಡಬೇಕಾದ ಮಂಪರು ಚುಚ್ಚುಮದ್ದು ಕೊಡುವಲ್ಲಿ ಆ ಆನೆಯನ್ನು ಗುರುತಿಸುವುದರಲ್ಲಿ ಆಗಿರುವ ಗೊಂದಲ! ಈ ಪರಿಣಾಮ ಅರ್ಜುನನಿಗೆ ಅದು ತಾಗಿದೆ. ಮತ್ತೆ ಕೂಡಲೇ ಅದನ್ನು ರಿವರ್ಸ್ ಮಾಡುವ ಔಷಧಿ ಕೊಟ್ಟಾಗಲೂ ಅರ್ಜುನ ಔಷಧೀಯ ಪರಿಣಾಮಕ್ಕೆ ಒಳಗಾದಂತಿದೆ. ಮೂರನೇದಾಗಿ, ಮದಗಜದ ಕಾಲಿಗೆ ಗುಂಡು ಹೊಡೆಯುವ ಬದಲು ಅರ್ಜುನನಿಗೆ ಗುಂಡೇಟು ಬಿದ್ದಿದೆ. ಇದನ್ನು ಅಲ್ಲಿಯೇ ಇದ್ದ, ಬದುಕುಳಿದ ಮಾವುತರು ದೃಢೀಕರಿಸಿದ್ದಾರೆ. ಹಾಗೆಯೇ, ಅರವಳಿಕೆ ಚುಚ್ಚುಮದ್ದನ್ನು ನೀಡುವಲ್ಲಿ ಅಲ್ಲಿ ಹಾಜರಿದ್ದ ವೈದ್ಯರಿಗೆ ಈ ಆನೆಗಳನ್ನು ಗುರುತಿಸುವ ಮತ್ತು ಈ ಕಾರ್ಯಾಚರಣೆಯನ್ನು ಸಂಘಟಿಸುವ ಪರಿಣಿತಿ ಇತಲ್ಲದವರು, ಅದರಲ್ಲಿ ಅವರಿಗೆ ತೀರಾ ಆನನುಭವ ಇತ್ತು ಎನ್ನುವುದು ಸ್ಥಳೀಯರ ಆರೋಪ. ಇಂತಹ ಅಧಿಕಾರಿಗಳಿಗೆ ಕಾಡಿನ ಮತ್ತು ಕಾಡುಪ್ರಾಣಿಗಳ ಒಟ್ಟಾರೆ ಅಲ್ಲಿಯ ಸ್ಥಿತಿ ಬಗ್ಗೆ ಆಳವಾದ ಪರಿಚಯವೇ ಇಲ್ಲದಂತಹ ಸ್ಥಿತಿಯಲ್ಲಿ ಇರುವವರು ಈ ಕಾರ್ಯಾಚರಣೆಗೆ ತೊಡಗಿಕೊಂಡದ್ದು ಅತಿ ದೊಡ್ಡ ತಪ್ಪು ಎನ್ನಲಾಗುತ್ತಿದೆ. ಇಲ್ಲಿ ಸ್ಪಷ್ಟವಾಗುವುದು ಏನೆಂದರೆ ಅರಣ್ಯ ಅಧಿಕಾರಿಗಳ ನಿರ್ಲಕ್ಷ್ಯತನ, ತಪ್ಪು ನಿರ್ವಹಣೆ ಅರ್ಜುನನ ಸಾವಿಗೆ ಕಾರಣ ಎಂಬುದು ಅರ್ಥವಾಗುವುದು.

ಇದು ಅರ್ಜುನನ ಸಾವಿನ ಕಥೆ ಒಂದಾದರೆ ಇಂದು ವಿವಿಧ ರೀತಿಗಳಲ್ಲಿ ಆನೆಗಳು ಬಲಿಯಾಗುತ್ತಿರುವುದು ನಡೆದೇ ಇದೆ. ವಿಶೇಷವಾಗಿ, ಮಾನವ ಮತ್ತು ವನ್ಯಜೀವಿಗಳ ಸಂಘರ್ಷದ ನಡುವಿನಲ್ಲಿ ಮನುಷ್ಯರ ಮೇಲೆ ಧಾಳಿ ಅಥವಾ ಸಾವು ಸಂಭವಿಸುತ್ತಿರುವಂತೆ ತಮ್ಮ ಬೆಳೆಗಳನ್ನು ರಕ್ಷಿಸಲೆಂದು ಹಾಕಿದ ವಿದ್ಯುತ್ ತಂತಿಗಳಿಗೆ ಸಿಕ್ಕು ಆನೆಗಳು ಮೃತಗೊಂಡಿರುವುದು ಅನೇಕ ಕಡೆಗಳಲ್ಲಿ ನಡೆದಿದೆ. ಒಂದೆಡೆ ಕಾಡುಗಳ್ಳರ ಕಡೆಯಿಂದ ನಡೆಯುವ ಹತ್ಯೆಗಳು, ಇನ್ನೊಂದು ಕಡೆಯಲ್ಲಿ ಮಾನವ ಮತ್ತು ವನ್ಯಜೀವಿಗಳ ಸಂಘರ್ಷದ ನಡುವಿನಲ್ಲಿ ಆಗುತ್ತಿರುವ ಇಂತಹ ಅನಾಹುತಗಳು! ಇತ್ತೀಚಿಗಂತೂ ಆಹಾರವನ್ನು ಹುಡುಕಿಕೊಂಡು ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಬೆಳೆದ ಬೆಳೆಯತ್ತ ತೋಟಗಳಿಗೆ ಹಾಗೆ ಪಟ್ಟಣ ಹಳ್ಳಿಗಳಿಗೆ ನುಗ್ಗುತ್ತಿರುವ ಸತತ ವರದಿಗಳು ಬರುತ್ತದೆ ಇವೆ. ಸರ್ಕಾರಗಳು ಆ ಸನ್ನಿವೇಶದಲ್ಲಿ ಹೇಗೋ ವಿಷಯ ಸಾಗು ಹಾಕಿದರೆ ಸಾಕೆನ್ನುವ ವರ್ತನೆಯನ್ನು ತೋರುತ್ತವೆ ಹೊರತು ಮೂಲಭೂತವಾಗಿ ಈ ಪ್ರಶ್ನೆಯನ್ನು ಪರಿಹರಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವುದಿಲ್ಲ. ಪ್ರತಿಯೊಂದು ಘಟನೆಯ ಸಂದರ್ಭದಲ್ಲಿ ಸರ್ಕಾರದ ಮತ್ತು ಅರಣ್ಯ, ಪರಿಸರ ವನ್ಯಜೀವಿಗಳ ರಕ್ಷಣೆಯ ಇಲಾಖೆಯ ವರ್ತನೆಗಳನ್ನು ನೋಡಿದರೆ ಇಲಾಖೆ ಮತ್ತು ಅಧಿಕಾರಿಗಳು ವನ್ಯಜೀವಿಗಳ ರಕ್ಷಣೆ ಇರಲಿ ಅವರಿಂದ ವನ್ಯಜೀವಿ ಮತ್ತು ಅರಣ್ಯದ ರಕ್ಷಣೆ ಆಗಬೇಕಿರುವುದನ್ನು ಮತ್ತೆ ಮತ್ತೆ ಮನವರಿಕೆ ಮಾಡುತ್ತವೆ. ಇಷ್ಟಾದ ಬಳಿಕವಾದರೂ ಕರ್ನಾಟಕದ ಸರ್ಕಾರ, ಅರಣ್ಯ ಇಲಾಖೆಯ ಸಚಿವರು ಕಣ್ಣು ತೆರೆಯುತ್ತಾರೆಯೇ?







ಮಹಿಳಾ ಕಟ್ಟಡ ಕಾರ್ಮಿಕರ ಯಶಸ್ವಿ ಅಖಿಲ ಭಾರತ ಸಮಾವೇಶ

6 ನವೆಂಬರ್ 2023, ಕನ್ಯಾಕುಮಾರಿ, ತಮಿಳುನಾಡು

ಸಿ. ಕುಮಾರಿ, ಸಂಚಾಲಕರು,
ಮಹಿಳಾ ಉಪಸಮಿತಿ, ಸಿ.ಡಬ್ಲ್ಯೂ.ಎಫ್.ಐ. ಕರ್ನಾಟಕ

ಮುಗಿಲೆತ್ತರದ ಕಟ್ಟಡ ಕಟ್ಟುವ ಕೆಲಸದಲ್ಲಿ ಮಹಿಳೆಯರ ಪಾತ್ರವೂ ಕೂಡ ಗಣನೀಯವಾದದ್ದು. ಸಿಮೆಂಟ್ ಮಿಕ್ಸ್ ಮಾಡುವುದು, ಕಲ್ಲು ಕಟ್ ಮಾಡುವುದು, ಜಲ್ಲಿ ಕಲ್ಲು ಒಡೆಯುವುದು, ಪೇಯಿಂಟ್ ಮಾಡುವುದು, ಟೈಲ್ಸ್ ಆಸಿಡ್‌ವಾಶ್ ಮಾಡುವುದು, ಮರಳು ಜರಡಿ ಹಿಡಿಯುವುದು (ಮರಳು ಶುಚಿ), ಇಟ್ಟಿಗೆ ತಯಾರು ಮಾಡುವುದು, ಇಟ್ಟಿಗೆ ಹೊರುವುದು ಹೀಗೆ ಹತ್ತಾರು ಕೆಲಸ ಮಾಡುವ ಮಹಿಳಾ ಕಟ್ಟಡ ಕಾರ್ಮಿಕರು ಕೆಲಸದ ಸಂದರ್ಭದಲ್ಲಿ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ನಿತ್ಯ ನಿರಂತರವಾಗಿ ಲೈಂಗಿಕ ಕಿರುಕುಳಗಳು, ಲೈಂಗಿಕ ಹಿಂಸೆ ಅನುಭವಿಸುತ್ತಾರೆ, ಪ್ರಶ್ನಿಸಿದರೆ ಕೆಲಸ ನಿರಾಕರಣೆಯ ಭಯವೂ ಕಾಡುತ್ತಿರುತ್ತದೆ. ಕೆಲಸದ ಸಮಯದಲ್ಲಿ ವಿಶ್ರಾಂತಿಯ ಕೊರತೆ, ಶೌಚಾಲಯದ ಕೊರತೆ, ಹಾಗೂ ಸಾಮಾಜಿಕ ಸುರಕ್ಷೆಗಳಿಲ್ಲದೆ ಅಸಂಖ್ಯಾತ ಮಹಿಳಾ ಕಾರ್ಮಿಕರು ಕಟ್ಟಡ ನಿರ್ಮಾಣದಲ್ಲಿ ದುಡಿಯುತ್ತಿದ್ದಾರೆ. ಕಡಿಮೆ ಕೂಲಿಗೆ ಹೆಚ್ಚು ಕೆಲಸ ನಿರ್ವಹಿಸುವ ಮಹಿಳೆಯರ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಸಾಮಾನ ಕೆಲಸಕ್ಕೆ ಸಮಾನ ಕೂಲಿ ಹೆಸರಿಗಷ್ಟೇ ಎಂಬಂತಾಗಿದೆ. ಕೊರೊನಾ ಸಮಯದಲ್ಲಿ ತುಂಬಾ ತೊಂದರೆಗೀಡಾದ ಮಹಿಳೆಯರಲ್ಲಿ ಕಟ್ಟಡ ಕಾರ್ಮಿಕ ಮಹಿಳೆಯರು ಮೊದಲಿಗರು. ಉದ್ಯಮದಲ್ಲಿ ಮಹಿಳಾ ಕಾರ್ಮಿಕರನ್ನು ಆದ್ಯತೆಯಾಗಿ ಸಂಘಟಿಸಬೇಕೆಂದು ಗುರುತಿಸಿದೆ. ಈ ವಿಭಾಗದಲ್ಲಿ ಪುರುಷ ಪ್ರಾಬಲ್ಯ ಹೆಚ್ಚಿದ್ದರೂ, ಕೆಲವು ವರ್ಷಗಳಿಂದ ಕೆಲಸ ಮಾಡುವ ಮಹಿಳೆಯರ ಸಂಖ್ಯೆಯಲ್ಲಿ ಗಮನಾರ್ಹ ಏರಿಕೆ ಕಂಡು ಬಂದಿದೆ.

ಪ್ರಕಟಿತ ವರದಿಯ ಪ್ರಕಾರ 50 ಮಿಲಿಯನ್ ಪುರುಷ ಕಾರ್ಮಿಕರಿಗೆ ಹೋಲಿಸಿದರೆ ಭಾರತದಲ್ಲಿ ನಿರ್ಮಾಣ ವಲಯವು 7 ಮಿಲಿಯನ್ ಮಹಿಳೆಯರಿಗೆ ಉದ್ಯೋಗ ನೀಡುತ್ತದೆ ಎಂದು ಅಂದಾಜಿಲಾಗಿದೆ. ಇತರ ಕೈಗಾರಿಕೆಗಳಲ್ಲಿ ಮಹಿಳೆಯರನ್ನು ಅರೆಕೌಶಲ/ನುರಿತ ಉದ್ಯೋಗ ಗಳಲ್ಲಿ ನೇಮಿಸಿಕೊಳ್ಳಲಾಗುತ್ತದೆ. ಆದರೆ ನಿರ್ಮಾಣ ಉದ್ಯಮದ ಮಹಿಳೆಯರು ಹೆಚ್ಚಾಗಿ ಕೌಶಲ್ಯರಹಿತ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ. ಕಟ್ಟಡದ ಸ್ಥಳಗಳನ್ನು ಸ್ವಚ್ಛಗೊಳಿಸಿ ನುರಿತವರಿಗೆ ಇಟ್ಟಿಗೆಗಳು, ಜಲ್ಲಿಕಲ್ಲು, ಮರಳು, ಗಾರೆ ಮತ್ತು ನೀರನ್ನು ಒಯ್ಯುವುದು, ಬಡಗಿಗಳು ಮತ್ತು ಮೇಸ್ತ್ರಿಗಳು ಇವರುಗಳಿಗೆ ಸಹಾಯಕರಾಗಿ ದುಡಿಯುತ್ತಾರೆ. ಅವರು ಅಲ್ಲಿ ಕೆಲಸ ಮಾಡಿದ ಅನುಭವವನ್ನು ಲೆಕ್ಕಿಸದೆ ಬಹುತೇಕ ಮಹಿಳೆಯರಿಗೆ ನಿರ್ಮಾಣ ವಿಭಾಗದಲ್ಲಿ ಕೆಲವು ಕಾರ್ಯಗಳನ್ನು ನಿರ್ವಹಿಸಲು ಕೌಶಲ್ಯಗಳ ಕೊರತೆಯಿದೆ ಎಂದು ಪುರುಷ ಪ್ರಧಾನ ಮನಸ್ಥಿತಿಯನ್ನು ತೋರಲಾಗುತ್ತದೆ. ಇದರಿಂದ ಕೆಲಸದ ಹಂಚಿಕೆಯಲ್ಲಿ ಲಿಂಗ ತಾರತಮ್ಯಕ್ಕೆ ಕಾರಣವಾಗುತ್ತದೆ. ಮತ್ತು ವೇತನ ವಿತರಣೆಯಲ್ಲಿ ಸಹ ಮಹಿಳಾ ವಿರೋಧಿ ಧೋರಣೆಗಳು ಮತ್ತು ತಾರತಮ್ಯ ಮತ್ತಷ್ಟು ಹೆಚ್ಚಾಗುತ್ತವೆ.

ಯಶಸ್ವಿ ಸಮಾವೇಶ

ಮಹಿಳಾ ಕಟ್ಟಡ ಕಾರ್ಮಿಕರ ರಾಷ್ಟ್ರೀಯ ಸಮಾವೇಶವನ್ನು ಅಖಿಲ ಭಾರತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ರಾಷ್ಟ್ರೀಯ ಅಧ್ಯಕ್ಷರಾದ ಕಾಂ.ಹೇಮಲತರವರು ಉದ್ಘಾಟಿಸಿ ಮಾತನಾಡಿದರು. ಮಹಿಳಾ ಕಟ್ಟಡ ಕಾರ್ಮಿಕರ ಸಮಸ್ಯೆಗಳನ್ನು ನಿರ್ದಿಷ್ಟವಾಗಿ ಚರ್ಚಿಸಿ ಹೋರಾಟಗಳನ್ನು ರೂಪಿಸುವುದು ಈ ಅಖಿಲ ಭಾರತ ಸಮಾವೇಶದ ಮುಖ್ಯ ಆಶಯವಾಗಿತ್ತು. ಮಹಿಳಾ ಕಟ್ಟಡ ಕಾರ್ಮಿಕರ ಸಮಸ್ಯೆಗಳು ದುಡಿಯುವ ವರ್ಗದ ಭಾಗವಾಗಿರುವ ಕಟ್ಟಡ ಕಾರ್ಮಿಕರ ಸಮಸ್ಯೆಗಳೊಂದಿಗೆ ಬೆಸೆದುಕೊಂಡಿವೆ. ಇಷ್ಟೇ ಅಲ್ಲಾ ಸಮಾಜದ ಬಾಧಿತ ಜನತೆಯ ಸಮಸ್ಯೆಗಳೊಂದಿಗೂ ಬೆಸದುಕೊಂಡಿದೆ. ಈ ಸಮಸ್ಯೆಗಳ ಪರಿಹಾರಗಳು ಸರ್ಕಾರದ ನೀತಿಗಳೊಂದಿಗೆ ಬೆಸೆದುಕೊಂಡಿವೆ. ಸರ್ಕಾರಗಳ ಜನವಿರೋಧಿ ನೀತಿಗಳ ಸಂತ್ರಸ್ತರಾದವರನ್ನು/ ವಂಚಿತರಾದವರನ್ನು ಸಂಘಟಿಸುವುದು ಸಂಘಟನೆಯ ಮುಖ್ಯ ಕರ್ತವ್ಯವಾಗಿದೆ ಎಂದು ಸಮಾವೇಶವು ತೀರ್ಮಾನಿಸಿತು.

ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ನವೆಂಬರ್ 6, 2023 ರಂದು ಅಖಿಲ ಭಾರತ ಮಹಿಳಾ ಕಟ್ಟಡ ಕಾರ್ಮಿಕರ ಸಮಾವೇಶವು ಯಶಸ್ವಿಯಾಗಿ ನಡೆದಿದೆ. ಸಮಾವೇಶದಲ್ಲಿ ಮಹಿಳಾ ಕಟ್ಟಡ ಕಾರ್ಮಿಕರ ಸಮಸ್ಯೆಗಳ ಕುರಿತು ವಿವರವಾದ ಚರ್ಚೆ ನಡೆದು ಸಂಘಟನೆಯನ್ನು ವಿಸ್ತರಿಸುವ ಮತ್ತು ಬಲಗೊಳಿಸುವ ತೀರ್ಮಾನ ಕೈಗೊಳ್ಳಲಾಗಿದೆ. ದೇಶದ ಒಟ್ಟು ಪರಿಸ್ಥಿತಿಯೂ ಚರ್ಚೆಯಾಗಿದೆ. ಒಂದು ವರದಿ

ದೇಶದಲ್ಲಿ ಉದಾರೀಕರಣ ಮತ್ತು ಕೋಮುವಾದದ ಧಾಳಿಗಳು ಕಾರ್ಮಿಕ ವರ್ಗದ ಮೇಲೂ ಮತ್ತು ಅದರ ಭಾಗವಾಗಿರುವ ದುಡಿಯುವ ಮಹಿಳೆಯರ ಮೇಲೂ ಮುಂದುವರಿದಿದೆ. ಕಾರ್ಮಿಕ ಸಂಹಿತೆಯ ಜಾರಿ ಕಾರ್ಮಿಕ ವಿರೋಧಿಯಾಗಿದೆ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಕಾರ್ಮಿಕರ ದುಡಿಮೆಯ ಅವಧಿಯನ್ನು 8 ಗಂಟೆಯಿಂದ 12 ಗಂಟೆಗೆ ಏರಿಸಿದೆ. ಅದೇ ರೀತಿ ತಮಿಳುನಾಡಿನಲ್ಲಿ ಡಿಎಂಕೆ ಪಕ್ಷವು ಕೆಲಸದ ಅವಧಿಯನ್ನು ಹೆಚ್ಚಿಸಿದೆ. ಅದೇ ರೀತಿ ಪಂಜಾಬ್‌ನಲ್ಲಿರುವ ಎಎಪಿ ಸರ್ಕಾರವು ಅದೇ ನಡೆಯನ್ನು ತೋರಿದೆ. ಕೇರಳದ ಎಡ ಪ್ರಜಾಸತ್ತಾತ್ಮಕ ಸರ್ಕಾರವನ್ನು ಹೊರತುಪಡಿಸಿ ಬೇರೆಲ್ಲಾ ರಾಜಕೀಯ ಪಕ್ಷಗಳು ಕಾರ್ಮಿಕ ವಿರೋಧಿಯಾಗಿವೆ ಎಂಬುದು ಕಂಡು ಬರುತ್ತದೆ.

ಭಾರತೀಯ ನಿರ್ಮಾಣ ಉದ್ಯಮವು ಕಡಿಮೆ ಕೌಶಲ್ಯ ಹೊಂದಿರುವ 80 ಲಕ್ಷಕ್ಕೂ ಹೆಚ್ಚು ಮಹಿಳಾ ಕಾರ್ಮಿಕರನ್ನು ನೇಮಿಸಿಕೊಂಡಿದೆ ಎಂದು 2023ರ 'ಗ್ಲೋಬಲ್ ಎಕನಾಮಿಕ್ಸ್ ಪ್ರಾಸ್ಪೆಕ್ಟಸ್' ತನ್ನ ವರದಿಯಲ್ಲಿ ಹೇಳುತ್ತದೆ. ಜಾಗತಿಕ ಬೆಳವಣಿಗೆಯೂ 2022ರಲ್ಲಿ ಅಂದಾಜಿಸಲಾಗಿರುವ 3.5 ನಿಂದ 2023ರಲ್ಲಿ 3 ಶೇಕಡಕ್ಕೆ ಕುಸಿಯುತ್ತದೆ ಎಂದು ಹೇಳಲಾಗಿದ್ದು, ಈ ಕುಸಿತವು 2024ರಲ್ಲಿ ಮುಂದುವರಿಯುವ ನಿರೀಕ್ಷೆಯಿದೆ. ಹೆಚ್ಚಬೇಕಾದ ನೈಜ ವೇತನಗಳು ವಾರ್ಷಿಕ ಸರಾಸರಿಯಲ್ಲಿ ಅದು ಕುಸಿತದಲ್ಲಿ ಪ್ರತಿಫಲಿಸುತ್ತದೆ. ಸುಮಾರು ಒಂಭತ್ತುವರೆ ವರ್ಷಗಳ ಮೋದಿ ನೇತೃತ್ವದ ಬಿಜೆಪಿ ಆಡಳಿತದಲ್ಲಿ ಒಟ್ಟು ಆರ್ಥಿಕ ಪರಿಸ್ಥಿತಿಗಳು ಜನರ ಬದುಕನ್ನು ಹದಗೆಡಿಸಿವೆ. ನಮ್ಮ ಜನರ ನಿಜವಾದ ಆದಾಯ ಕುಗ್ಗುತ್ತಿದೆ. ಜನರಲ್ಲಿ ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚಿಸದ ಮತ್ತು ಯಾವುದೇ ಆಂತರಿಕ ಬೇಡಿಕೆ ಹೆಚ್ಚಿಸದ ಹೂಡಿಕೆಗಳಿಂದ ಆರ್ಥಿಕ ಬೆಳವಣಿಗೆ ಸಾಧ್ಯವಿಲ್ಲ. ಇದು ಭಾರತೀಯ ಆರ್ಥಿಕತೆಯನ್ನು ಕಾಡುತ್ತಿರುವ ಮೂಲಭೂತ ಸಮಸ್ಯೆಯಾಗಿದೆ. ಆದರೆ ಮೋದಿ ಆಡಳಿತದ ನಿರಂತರ ಪ್ರಚಾರವು ಭಾರತವನ್ನು ಆರ್ಥಿಕವಾಗಿ ಪುನರುಜ್ಜೀವನಗೊಳಿಸಲಾಗುತ್ತದೆ ಎಂದು ಹೇಳುತ್ತದೆ. ವಿಶ್ವದ ಜಿಡಿಪಿಯ ಬೆಳವಣಿಗೆ ವಿಷಯದಲ್ಲಿ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗುವತ್ತ ಸಾಗುತ್ತಿದೆ ಎಂದು ಪ್ರಚಾರ ಮಾಡಿಕೊಳ್ಳಲಾಗುತ್ತಿದೆ. ಭಾರತದ ಸರ್ಕಾರವನ್ನು ಯಾರು ಮುನ್ನಡೆಸಿದರೂ 2027ರಲ್ಲಿ ಭಾರತವು ಜಗತ್ತಿನಲ್ಲಿ ಮೂರನೇ ಸ್ಥಾನದಲ್ಲಿರುತ್ತದೆ. ಪ್ರಸ್ತುತ ಅಂಕಿ–ಅಂಶಗಳ ಪ್ರವೃತ್ತಿಗಳು ಮೋದಿ ಪ್ರಚಾರ ಯಂತ್ರವು ಸೃಷ್ಟಿಸಿದ ಸುಳ್ಳುಗಳನ್ನು ಅನಾವರಣಗೊಳಿಸಲಿವೆ. ನಿಯಂತ್ರಣವಿಲ್ಲದ ಬೆಲೆ ಏರಿಕೆ ಮತ್ತು ನಿರುದ್ಯೋಗವು ಜನರ ಆದಾಯದಲ್ಲಿ ತೀವ್ರ ಕುಸಿತಕ್ಕೆ ಕಾರಣವಾಗಿದೆ.


ಸಮಾವೇಶದಲ್ಲಿ ಭಾಗವಹಿಸಿದ ಪ್ರತಿ ನಿಧಿಗಳು

ಸಮಾವೇಶದ ಬೇಡಿಕೆಗಳು:

- ಎಲ್ಲಾ ಕಟ್ಟಡ ಕಾರ್ಮಿಕರಿಗೆ ಮಾಸಿಕ 26,000 ಕೂಲಿ ಸಿಗಬೇಕು.
- ಮಹಿಳಾ ಕಟ್ಟಡ ಕಾರ್ಮಿಕರಿಗೆ 55 ವರ್ಷದಿಂದ ಮಾಸಿಕ 10,000 ಪಿಂಚಣಿ ನೀಡಬೇಕು.
- ಮಹಿಳಾ ಕಟ್ಟಡ ಕಾರ್ಮಿಕರಿಗೆ ಸಮಾನ ಕೂಲಿಯನ್ನು ಖಾತ್ರಿಗೊಳಿಸಬೇಕು.
- ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟಬೇಕು.
- ಬಿ.ಓ.ಸಿ.ಡಬ್ಲೂ. ಕಾಯ್ದೆಯಡಿ ಮಹಿಳಾ ಕಟ್ಟಡ ಕಾರ್ಮಿಕರಿಗೆ ಹೆರಿಗೆ ಭತ್ಯೆ, ಅಂಗ ವೈಕಲ್ಯತೆ ಇರುವವರಿಗೆ ಅಗತ್ಯ ಸೌಲಭ್ಯ, ಮಕ್ಕಳಿಗೆ ಶಿಕ್ಷಣದ ಸಹಾಯಧನವನ್ನು ಖಾತ್ರಿಪಡಿಸಬೇಕು.
- 50ಕ್ಕಿಂತ ಹೆಚ್ಚು ಮಹಿಳಾ ಕಟ್ಟಡ ಕಾರ್ಮಿಕರಿರುವ ಕಡೆಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ನೀಡಬೇಕು.
- ರಾಷ್ಟ್ರೀಯ ಶಿಶುಪಾಲನಾ ಯೋಜನೆಗೆ ಹೆಚ್ಚು ಅನುದಾನ ನೀಡಬೇಕು.
- ಮಹಿಳಾ ಕಟ್ಟಡ ಕಾರ್ಮಿಕರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯನ್ನು ಒದಗಿಸಬೇಕು.

ಎಲ್ಲಾ ರಾಜ್ಯಗಳಲ್ಲೂ ಡಿಸೆಂಬರ್ 2023ರ ಒಳಗಾಗಿ ರಾಜ್ಯ ಮಟ್ಟದ ಉಪಸಮಿತಿಗಳನ್ನು ರಚಿಸಬೇಕು. (ನಮ್ಮ ರಾಜ್ಯದಲ್ಲಿ ರಾಜ್ಯ ಉಪಸಮಿತಿ ರಚಿಸಲಾಗಿದೆ. ಜಿಲ್ಲಾ ಉಪಸಮಿತಿಗಳನ್ನು ರಚಿಸಬೇಕು)

ಅಖಿಲ ಭಾರತ ಉಪ ಸಮಿತಿಯು/ಸಮನ್ವಯ ಸಮಿತಿಯು 3 ತಿಂಗಳಿಗೊಮ್ಮೆ ಸಭೆ ಸೇರಬೇಕು.

2023 ರಿಂದ 2024 ರವರೆಗೆ ಮೇಲಿನ 8 ಅಂಶಗಳ ಕುರಿತಂತೆ ವ್ಯಾಪಕ ಮತ್ತುತೀವ್ರ ಪ್ರಚಾರ ನಡೆಸಬೇಕು.

ಸಮಾವೇಶದ ನಿರ್ಣಯಗಳು:

- ಗಾಜಾ ಮೇಲಿ ಇಸ್ರೇಲ್ ಧಾಳಿಯನ್ನು ಖಂಡಿಸಿ ನಿರ್ಣಯ.
- ದುಡಿಯುವ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಒತ್ತಾಯಿಸಿ ನಿರ್ಣಯ.
- ಶಾಸನ ಸಭೆಗಳಲ್ಲಿ 33% ಮಹಿಳಾ ಮೀಸಲಾತಿ ಜಾರಿಗೆ ಒತ್ತಾಯಿಸಿ ನಿರ್ಣಯ.
- ಮಾಸಿಕ 26,000 ಕನಿಷ್ಟ ಕೂಲಿ ಖಾತ್ರಿಗೊಳಿಸಲು ಒತ್ತಾಯ.
- ನ್ಯೂಸ್‌ಕ್ಲಿಕ್ ಸಂಪಾದಕರಾದ ಪ್ರಭೀರ್ ಪುರಕಾಯಸ್ಥವರ ವಿರುದ್ಧ ದಾಖಲಿಸಿರುವ ಯು.ಎ.ಪಿ.ಎ. ಕಾನೂನನ್ನು ಹಿಂಪಡೆಯಲು ಒತ್ತಾಯಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಈ ಸಮಾವೇಶದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ 19 ಜನರು ಭಾಗವಹಿಸಿದ್ದರು. ಮಹಿಳಾ ಕಟ್ಟಡ ಕಾರ್ಮಿಕರ ಅಖಿಲ ಭಾರತ ಉಪಸಮಿತಿಗೆ ಕರ್ನಾಟಕದಿಂದ ಸಿ.ಕುಮಾರಿ, ಕಲಾದೇವಿ ಆಯ್ಕೆಯಾಗಿರುತ್ತಾರೆ. ಈ ಸಮಾವೇಶದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಪಾರಿಜಾನ್ ಮತ್ತು ನಾಗರತ್ನ ಮಾತನಾಡಿದರು. ●



ಖಾಸಗೀಕರಣದ ವಿದ್ಯುತ್ ಕ್ಷೇತ್ರ

ಸ್ಮಾರ್ಟ್ ವಿದ್ಯುತ್ ಮೀಟರ್ ಅಳವಡಿಕೆಗೆ ಗಡುವು

ಮೋದಿ ಆಡಳಿತದಲ್ಲಿ ಖಾಸಗೀಕರಣ ಪ್ರಕ್ರಿಯೆ ವೇಗವಾಗಿ ನಡೆಯುತ್ತಿದೆ. ಕೇಂದ್ರ ಬಿಜೆಪಿ ಸರ್ಕಾರವು ದೇಶದ ಎಲ್ಲಾ ಸಾರ್ವಜನಿಕ ವಲಯದ ಸಂಸ್ಥೆಗಳನ್ನು ದೊಡ್ಡ ಬಂಡವಾಳಶಾಹಿಗಳು ಮತ್ತು ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸಲು ಪ್ರಯತ್ನಿಸುತ್ತಿದೆ. ಎಲ್ಲಾ ಕೈಗಾರಿಕೆಗಳ ಮಾತ್ರ ಉದ್ಯಮವಾಗಿರುವ (ವಿದ್ಯುತ್ ಬಳಕೆಮಾಡದ ಉದ್ಯಮಗಳೇ ಇಲ್ಲ) ವಿದ್ಯುತ್ ಕ್ಷೇತ್ರವನ್ನು ಸಹಾ ಖಾಸಗೀಕರಣ ಮಾಡಲು ಮುಂದಾಗಿದೆ. ಹೀಗಿರುವಾಗ ರಾಜ್ಯದ ಗೃಹ ಜ್ಯೋತಿ ಯೋಜನೆ ಸೇರಿದಂತೆ, ಕೃಷಿ ಪಂಪ್ ಸೆಟ್ ಗೆ ಬಳಕೆ ಮಾಡುವ ಉಚಿತ ವಿದ್ಯುತ್ ಎಷ್ಟು ಕಾಲ ಮುಂದುವರಿಯುತ್ತದೆ ಎಂಬ ಪ್ರಶ್ನೆ ಮೂಡುತ್ತದೆ. ವಿದ್ಯುತ್ ಖಾಸಗೀಕರಣ ಪ್ರಕ್ರಿಯೆಯ ಒಂದಷ್ಟು ಮಾಹಿತಿ ಇಲ್ಲಿದೆ.

2003ರ ವಿದ್ಯುತ್ ಕಾಯ್ದೆಯನ್ನು ಅಂಗೀಕರಿಸಿದ ಬಿಜೆಪಿ ಸರಕಾರವು 2010, 2014, 2018, 2020, 2021 ಮತ್ತು 2022ರಲ್ಲಿ ರಾಜ್ಯ ವಿದ್ಯುತ್ ಮಂಡಳಿಗಳನ್ನು ಒಡೆಯುವ ಉದ್ದೇಶದಿಂದ ಸಂಸತ್ತಿನಲ್ಲಿ ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲು ಪ್ರಯತ್ನಿಸಿತು. ಆದರೆ ಭಾರತದ ರೈತರ ದೊಡ್ಡ ಮಟ್ಟದ ಹೋರಾಟದಿಂದಾಗಿ ಸರ್ಕಾರದ ಉದ್ದೇಶ ಈಡೇರಲು ಸಾಧ್ಯವಾಗಲಿಲ್ಲ. ಪ್ರತಿಪಕ್ಷಗಳ ಸಂಸತ್ ಸದಸ್ಯರ ಮನವಿಯಂತೆ ಸಂಸತ್ತಿನ ಸ್ಥಾಯಿ ಸಮಿತಿಗೆ ಈ ಮಸೂದೆಯನ್ನು ಕಳುಹಿಸಿದೆ. ಆದರೆ, ಅವರು ಯಾವುದೇ ಸಮಯದಲ್ಲಿ, ಅಂದರೆ ಮುಂಗಾರು ಅಧಿವೇಶನ ಅಥವಾ ಚಳಿಗಾಲದ ಅಧಿವೇಶನದಲ್ಲಿ ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲು ಪ್ರಯತ್ನಿಸಬಹುದು.

ವಿದ್ಯುತ್ ಗ್ರಾಹಕರ ಹಕ್ಕುಗಳ ನಿಯಮಗಳ ತಿದ್ದುಪಡಿ


ಏತನ್ಮಧ್ಯೆ, ವಿದ್ಯುತ್ (ಗ್ರಾಹಕರ ಹಕ್ಕುಗಳು) ನಿಯಮಗಳು, 2020 ಅನ್ನು ವಿದ್ಯುತ್ (ಗ್ರಾಹಕರ ನಿಯಮಗಳು) ತಿದ್ದುಪಡಿ ನಿಯಮಗಳು, 2023 ಗೆ ಬದಲಾಯಿಸಲಾಗಿದೆ. ಕೇಂದ್ರ ವಿದ್ಯುತ್ ಸಚಿವಾಲಯವು ಜೂನ್ 14 ರಂದು ಸರ್ಕಾರಿ ಗೆಜೆಟ್‌ನಲ್ಲಿ ಇದನ್ನು ಸದ್ದಿಲ್ಲದೆ ಪ್ರಕಟಿಸಿದೆ. ಇದರ ಪ್ರಕಾರ ಗೃಹ ಬಳಕೆ ಸೇರಿದಂತೆ ಎಲ್ಲ ವಿದ್ಯುತ್ ಸಂಪರ್ಕಗಳಿಗೂ ಸ್ಮಾರ್ಟ್ ಮೀಟರ್ ಅಳವಡಿಸಬೇಕು. ಅಲ್ಲದೆ, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ 19 ಕಿಲೋವ್ಯಾಟ್‌ಗಿಂತ ಹೆಚ್ಚು ವಿದ್ಯುತ್ ಬಳಸುವ ಗ್ರಾಹಕರಿಗೆ ಏಪ್ರಿಲ್ 1, 2024 ರ ಮೊದಲು TOD (Time of Day-ದಿನದ ಸಮಯ) ಮೀಟರ್‌ಗಳನ್ನು ಅಳವಡಿಸಬೇಕು. ಕೃಷಿ ಗ್ರಾಹಕರನ್ನು ಹೊರತುಪಡಿಸಿ ಎಲ್ಲಾ ವಿದ್ಯುತ್ ಗ್ರಾಹಕರು 01.04.2025 ರ ಮೊದಲು ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಬೇಕು.

ಸ್ಮಾರ್ಟ್ ಮೀಟರ್ ಅಳವಡಿಕೆಯ ಪರಿಣಾಮ

ವಿದ್ಯುತ್ ಲೈನ್‌ಗಳಲ್ಲಿ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸುವುದು ಖಾಸಗೀಕರಣದ ಭಾಗವಾಗಿದೆ. ಖಾಸಗಿ ಯುಟಿಲಿಟಿ ಕಂಪನಿಗಳು ಒಪ್ಪಂದದ ಮೂಲಕ ವಿದ್ಯುತ್ ಲೈನ್‌ಗಳಲ್ಲಿ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸುತ್ತವೆ. ಖಾಸಗಿ ಹೂಡಿಕೆದಾರರು ಕೆಲವು ವರ್ಷಗಳವರೆಗೆ ನಿರ್ವಹಣೆ ಕೆಲಸವನ್ನು ಮಾಡುತ್ತಾರೆ. ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು ಪ್ರತಿ ಮೀಟರ್‌ಗೆ ಮಾಸಿಕ ಬಾಡಿಗೆ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಈ ಮೊತ್ತವನ್ನು ನಿಗದಿತ ಸಮಯದಲ್ಲಿ ಗ್ರಾಹಕರಿಗೆ ವಿಧಿಸಬಹುದು. ಇದರಿಂದ ವಿದ್ಯುತ್ ಸಂಪರ್ಕದಲ್ಲಿ ಈಗಾಗಲೇ ಸುಸ್ಥಿತಿಯಲ್ಲಿರುವ ಗುಣಮಟ್ಟದ ಮೀಟರ್ ಗಳನ್ನು ಕಸದ ಬುಟ್ಟಿಗೆ ಎಸೆಯಬೇಕಾಗುತ್ತದೆ. ರಾಜ್ಯ ವಿದ್ಯುತ್ ಮಂಡಳಿಗಳು ಆರ್ಥಿಕ ಹೊರೆಯಲ್ಲಿ ಸಿಲುಕಿರುವ ಸಂದರ್ಭದಲ್ಲಿ ಇದು ಸಾಲದ ಹೊರೆಯನ್ನು ಮತ್ತಷ್ಟು ಹೆಚ್ಚಿಸಿ ನಷ್ಟವನ್ನು ಹೆಚ್ಚಿಸುವ ಕ್ರಮವಾಗಿದೆ. ಭವಿಷ್ಯದಲ್ಲಿ ಈ ಸ್ಮಾರ್ಟ್ ಮೀಟರ್ ಅನ್ನು ಪ್ರಿಪೇಯ್ಡ್ ಮೀಟರ್ ಆಗಿ ಪರಿವರ್ತಿಸುವ ಯೋಜನೆಯೂ ಇದೆ. ಆ ಸಂದರ್ಭದಲ್ಲಿ, ನೀವು ಮೊದಲೇ ಹಣ ಪಾವತಿ ಮಾಡಿ ವಿದ್ಯುತ್ ಖರೀದಿಸಬಹುದು (ಮೊಬೈಲ್ ಫೋನ್ ಅನ್ನು ರೀಚಾರ್ಜ್ ಮಾಡುವಂತೆ). ಪ್ರಿಪೇಯ್ಡ್ ಯೋಜನೆ ಕ್ರಮೇಣವಾಗಿ ಸಬ್ಸಿಡಿ ವಿದ್ಯುತ್ ಯೋಜನೆಗಳನ್ನು ಇಲ್ಲದಂತೆ ಮಾಡುತ್ತದೆ.

ಸಮಯಕ್ಕೆ ಅನುಗುಣವಾಗಿ ಶುಲ್ಕಗಳು

ಪೀಕ್ ಅವರ್‌ನಲ್ಲಿ (ಹೆಚ್ಚಿನ ಬೇಡಿಕೆ ಇರುವ ಸಮಯದಲ್ಲಿ) ವಿದ್ಯುಚ್ಛಕ್ತಿ ಬಳಕೆದಾರರಿಗೆ ಶೇ. 10 ರಿಂದ 20 ರವರೆಗೆ ಹೆಚ್ಚುವರಿ ವಿದ್ಯುತ್ ಶುಲ್ಕವನ್ನು ವಿಧಿಸಲು ವ್ಯವಸ್ಥೆ ತರಲಾಗುತ್ತದೆ. ಅಂದರೆ, ಸಮಯ ಆಧಾರಿತ ವಿದ್ಯುತ್ ಶುಲ್ಕಗಳು ಜಾರಿಗೆ ಬರಲಿವೆ. ವಿದ್ಯುತ್ ಬಳಕೆಯ ಸಮಯವನ್ನು ಮೂರು ವಿತರಣಾ ಸಮಯಗಳಾಗಿ ವಿಂಗಡಿಸಲಾಗಿದೆ. ತಮಿಳುನಾಡಿನಲ್ಲಿ ಈಗಾಗಲೇ ಅಲ್ಲಿನ ವಿದ್ಯುತ್ ನಿಯಂತ್ರಣ ಆಯೋಗವು ಈ ಕೆಳಗಿನಂತೆ ದಿನದ ಸಮಯವನ್ನು ವಿಂಗಡಿಸಿ ನಿಗದಿಪಡಿಸಿದೆ: ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೆ ಬೆಳಿಗ್ಗೆ 6 ರಿಂದ ಬೆಳಿಗ್ಗೆ 10 ರವರೆಗೆ ಮತ್ತು ಸಂಜೆ 5 ರಿಂದ ರಾತ್ರಿ 10 ರವರೆಗೆ ವಿದ್ಯುತ್ ಬಳಕೆಗಾಗಿ ಗರಿಷ್ಠ ಬೇಡಿಕೆ ಸಮಯ ಎಂದು ಕರೆಯುವ ಮೂಲಕ ಹೆಚ್ಚುವರಿ ವಿದ್ಯುತ್ ಶುಲ್ಕವನ್ನು ವಿಧಿಸುವುದು; ಎಲ್ಲಾ ವಿದ್ಯುತ್ ಗ್ರಾಹಕರಿಗೆ ಗರಿಷ್ಠ ಬೇಡಿಕೆ ಸಮಯದಲ್ಲಿ ಹೆಚ್ಚುವರಿ ವಿದ್ಯುತ್ ಶುಲ್ಕವನ್ನು ನಿರ್ಧರಿಸುವುದು ಸ್ಮಾರ್ಟ್ ಮೀಟರ್ ಅಳವಡಿಕೆಯ ಉದ್ದೇಶವಾಗಿದೆ. ಏಕೆಂದರೆ ಮಕ್ಕಳು ಓದುವುದು, ಅಡುಗೆ ಮಾಡುವುದು, ದೂರದರ್ಶನ ವೀಕ್ಷಣೆ ಮಾಡುವಂತಹ ಈ ಸಮಯದಲ್ಲಿ ಜನರು ಹೆಚ್ಚು ವಿದ್ಯುತ್ ಬಳಸುತ್ತಾರೆ. ಅದೇ ರೀತಿ ರಾತ್ರಿ 10ರಿಂದ ಬೆಳಗಿನ ಜಾವ 5ರವರೆಗೆ ಹೆಚ್ಚು ಬಳಕೆ ಇಲ್ಲ. ಈ ಸಮಯದಲ್ಲಿ ಸಾಮಾನ್ಯ ದರವನ್ನು ವಿಧಿಸಲಾಗುತ್ತದೆ ಮತ್ತು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ 3 ನೇ ಅವಧಿಯನ್ನು ಅರ್ಧ ಪೀಕ್ ಅವರ್ ಎಂದು ಲೆಕ್ಕಹಾಕಲಾಗುತ್ತದೆ.



ಕಣ್ಮರೆಯಾಗುತ್ತಿರುವ ಉದ್ಯೋಗಾವಕಾಶಗಳು

ಸ್ಮಾರ್ಟ್ ಮೀಟರ್ ಬಂದ ನಂತರ ನೌಕರರು ಎಷ್ಟು ಪ್ರಮಾಣದ ವಿದ್ಯುತ್ ಬಳಕೆ ಮಾಡಲಾಗಿದೆ ಎಂದು ನೋಡಲು, ಮತ್ತು ಬಿಲ್ ಕೊಡಲು ಮನೆ ಮನೆಗೆ ಬರುವುದಿಲ್ಲ. ಈಗಾಗಲೇ ಆ ಕೆಲಸ ಮಾಡುತ್ತಿರುವ ಅಂತಹ ಸಿಬ್ಬಂದಿಯನ್ನು ಬೇರೆ ಕೆಲಸಕ್ಕೆ ವರ್ಗಾಯಿಸಲಾಗುವುದು. ಕ್ಷೇತ್ರ ಸಿಬ್ಬಂದಿ ಸಂಖ್ಯೆ ಕಡಿಮೆಯಾಗಲಿದೆ. ವಿದ್ಯುತ್ ಮೀಟರ್ ತೆಗೆದುಕೊಂಡ 20 ದಿನಗಳಲ್ಲಿ ಪಾವತಿ ಮಾಡದಿದ್ದರೆ, ಕಂಪ್ಯೂಟರ್ ಮೂಲಕ ಸಂಪರ್ಕ ಕಡಿತಗೊಳಿಸಲಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಉದ್ಯೋಗಾವಕಾಶಗಳು ಕೈತಪ್ಪಿ, ವಿದ್ಯಾವಂತ ಯುವಕರ ಸರ್ಕಾರಿ ಉದ್ಯೋಗದ ಕನಸು ಕಮರಿ ಹೋಗಲಿದೆ. ಖಾಸಗೀಕರಣವು ಸಾಮಾಜಿಕ ಭದ್ರತೆ ಮತ್ತು ಮೀಸಲಾತಿಯೊಂದಿಗೆ ಸರ್ಕಾರಿ ಉದ್ಯೋಗವನ್ನು, ಸಾಮಾಜಿಕ ನ್ಯಾಯವನ್ನು ಹಳಸುವಂತೆ ಮಾಡಿದೆ ಮತ್ತು ವಿದ್ಯಾವಂತ ಯುವಕರ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ.

ವಿದ್ಯುತ್ ಗ್ರಾಹಕರ ಮೇಲೆ ಪರಿಣಾಮಗಳು

ವಿದ್ಯುಚ್ಛಕ್ತಿ ಕಾಯ್ದೆಯ ತಿದ್ದುಪಡಿಯ ಆಧಾರದ ಮೇಲೆ ವಿದ್ಯುತ್ ವಿತರಣೆಯಲ್ಲಿ ಬಹು ಪರವಾನಗಿದಾರರನ್ನು ತೊಡಗಿಸಿಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಗ್ರಿಡ್ ರಚನೆಯಲ್ಲಿ ಅಸ್ತಿತ್ವದಲ್ಲಿರುವ ಪ್ರಸರಣ ಮಾರ್ಗಗಳ ಮೇಲೆ ಖಾಸಗಿ ಉದ್ಯಮಿಗಳು ವಿತರಣಾ ಶಕ್ತಿಯನ್ನು ನಡೆಸುತ್ತಾರೆ. ಗ್ರಾಹಕರನ್ನು ಆಯ್ಕೆ ಮಾಡುವ ಹಕ್ಕನ್ನು ಸಹ ಅವರಿಗೆ ನೀಡಲಾಗಿದೆ. ಹಾಗಿದ್ದಲ್ಲಿ, ಖಾಸಗಿ ವಿದ್ಯುತ್ ವಿತರಕರು ಹೆಚ್ಚು ವಿದ್ಯುತ್ ಬಳಸುವವರನ್ನು ಆಯ್ಕೆ ಮಾಡುತ್ತಾರೆ. ಹೀಗಾಗಿ ವಿದ್ಯುತ್ ಸಹ, ಮುಕ್ತ ಮಾರುಕಟ್ಟೆಯ ಸರಕಾಗುತ್ತದೆ. ಅನುಕೂಲಸ್ಥರಿಗೆ ಮಾತ್ರ ವಿದ್ಯುತ್ ಇರುತ್ತದೆ. ಖಾಸಗಿ ವ್ಯಕ್ತಿಗಳು ವಿದ್ಯುತ್ ದರ ನಿಗದಿಯ ಹಕ್ಕುಗಳನ್ನು ಪಡೆಯುವುದರಿಂದ ವಿದ್ಯುತ್ ಬಿಲ್ ಗಗನಕ್ಕೇರುತ್ತದೆ. ವಿದ್ಯುತ್ ದರ ನಿಗದಿ ಮಾಡುವ ರಾಜ್ಯ ಸರ್ಕಾರ ತನ್ನ ಈ ಹಕ್ಕನ್ನು ಕಳೆದುಕೊಳ್ಳಲಿದೆ. ರಾಜ್ಯ ಸರಕಾರ ಪ್ರಸ್ತುತ ಕೃಷಿಗೆ ಉಚಿತ ವಿದ್ಯುತ್ ಒದಗಿಸುತ್ತಿದೆ. ಇತ್ತೀಚೆಗೆ ಘೋಷಿಸಿದ 'ಗೃಹ ಲಕ್ಷ್ಮಿ' ಯೋಜನೆಯ ಮೂಲಕ ಗೃಹ ಬಳಕೆಯ 50 ರಿಂದ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡುತ್ತಿದೆ. ಇವೆಲ್ಲವೂ ಎಷ್ಟು ಕಾಲ ಉಳಿಯುತ್ತದೆ ಎಂಬ ಪ್ರಶ್ನೆಯೂ ಮೂಡುತ್ತದೆ.

ಸ್ಮಾರ್ಟ್ ಮೀಟರ್‌ಗಳ ಅಳವಡಿಕೆಯಿಂದ, ವಿದ್ಯುತ್ ಮೀಟರಿಂಗ್ ನಿಖರವಾಗಿರುತ್ತದೆ ಎಂದು ಸಾಮಾನ್ಯ ಜನರು ನಿರೀಕ್ಷಿಸುತ್ತಾರೆ. ಪ್ರತಿ 15 ನಿಮಿಷಗಳಿಗೊಮ್ಮೆ ವಿದ್ಯುತ್ ಬಳಕೆ ಗೋಚರಿಸುತ್ತದೆ. ಆದರೆ, ವಿವಿಧ ಬಗೆಯಲ್ಲಿ ವಿದ್ಯುತ್ ಗೆ ನೀಡುತ್ತಿರುವ ಸಬ್ಸಿಡಿ ಹಿಂಪಡೆಯುವುದು ಕೇಂದ್ರ ಸರ್ಕಾರದ ಉದ್ದೇಶವಾಗಿದೆ. ಇದರಲ್ಲಿ ಇಂತಹ ಅಪಾಯಗಳು ಅಡಗಿವೆ ಎಂಬುದನ್ನು ವಿದ್ಯುತ್ ಗ್ರಾಹಕರು ಅರ್ಥಮಾಡಿಕೊಳ್ಳಬೇಕು.

ರೈತರು ಸ್ವಂತ ಖರ್ಚಿನಲ್ಲಿ ಸಂಪರ್ಕ

ಕರ್ನಾಟಕದಲ್ಲಿ ಇದುವರೆಗೂ ಕೃಷಿ ಪಂಪ್‌ಸೆಟ್‌ಗಳಿಗೆ ಟ್ರಾನ್ಸ್‌ಫಾರ್ಮರ್ ಸಮೇತ ಉಚಿತವಾಗಿ ಮೂಲಸೌಕರ್ಯವನ್ನು ರಾಜ್ಯ ಸರ್ಕಾರ ಒದಗಿಸುತ್ತಿತ್ತು. ಕಳೆದ ಸೆ. 22ರ ನಂತರ ನೋಂದಣಿಯಾಗುವ ಕೃಷಿ ಕೊಳವೆ ಬಾವಿಗಳಿಗೆ ರೈತರು ಸ್ವಂತ ಖರ್ಚಿನಲ್ಲಿ ವಿದ್ಯುತ್ ಸಂಪರ್ಕ ಪಡೆಯಬೇಕೆಂದು ಸರ್ಕಾರ ಆದೇಶ ಹೊರಡಿಸಿರುವುದು ಇದೇ ಕಾರಣದಿಂದ. ಅದಕ್ಕಾಗಿಯೇ ಕರ್ನಾಟಕ ಸೇರಿದಂತೆ ದೇಶದ ವಿದ್ಯುತ್ ಗ್ರಾಹಕರು ಮತ್ತು ವಿದ್ಯುತ್ ಮಂಡಳಿಗಳ ನೌಕರರು, ವಿದ್ಯುತ್ ಉದ್ಯಮ ಮತ್ತು ಸಾರ್ವಜನಿಕ ವಲಯವನ್ನು ರಕ್ಷಿಸಲು ಒಟ್ಟಾಗಿ ನಿಲ್ಲಬೇಕು. ಮತ್ತು ವಿದ್ಯುತ್ ಮಂಡಳಿಯ ನೌಕರರು ಮತ್ತು ನಿರುದ್ಯೋಗಿ ಯುವಕರ ಮೇಲೆ ಹಾಗೂ ಗ್ರಾಹಕರ ಮೇಲೆ ಪರಿಣಾಮ ಬೀರುವ ಕೇಂದ್ರ ಸರ್ಕಾರದ ಈ ಚಟುವಟಿಕೆಗಳನ್ನು ಸೋಲಿಸಲು ಎಲ್ಲರೂ ಮುಂದಾಗಬೇಕು.

-ಸಿಐಟಿ-(ಮಾಹಿತಿ ಕೃಪೆ-ತೀಕದಿರ್)



ರ್ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿರುವ ಸುಭಾಷಿಣಿ ವೇದಿಕೆಯಲ್ಲಿ ನಾಯಕರು

ದಲಿತ ಹಕ್ಕುಗಳಿಗಾಗಿ, ಸಂವಿಧಾನ ರಕ್ಷಣೆಗಾಗಿ ಐತಿಹಾಸಿಕ ಸಂಸತ್ ಚಲೋ

ದಲಿತ ಹಕ್ಕುಗಳಿಗಾಗಿ, ಸಂವಿಧಾನ ರಕ್ಷಣೆಗಾಗಿ ಡಿಸೆಂಬರ್ 4ರಂದು ನವದೆಹಲಿಯ ಜಂತರ್ ಮಂತರ್ ನಲ್ಲಿ ಐತಿಹಾಸಿಕ ಪ್ರತಿಭಟನೆ ನಡೆಯಿತು. ಕೇಂದ್ರದಲ್ಲಿನ ಪ್ರತಿಗಾಮಿ ಮತ್ತು ಮನುವಾದಿ ಪ್ರತಿಪಾದಕ ಬಿಜೆಪಿ ಆಡಳಿತದ ದಲಿತ ವಿರೋಧಿ ಧೋರಣೆಗಳ ವಿರುದ್ದ ಆಯೋಜಿಸಿದ್ದ, 'ಸಂಸತ್ ಚಲೋ' ಕರೆಯ ಭಾಗವಾಗಿ ನಡೆದ ಈ ಪ್ರತಿಭಟನೆಯಲ್ಲಿ, ದೇಶದ ಸುಮಾರು 27 ರಾಜ್ಯಗಳಿಂದ ಆಗಮಿಸಿದ್ದ ದಲಿತ ಸಂಘಟನೆಗಳ ಕಾರ್ಯಕರ್ತರು ಮತ್ತು ಕೃಷಿ ಕೂಲಿಕಾರರು ಸೇರಿದಂತೆ ಸುಮಾರು 5 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ರಾಷ್ಟ್ರದ ಬಹುತೇಕ ಎಲ್ಲಾ ರಾಜ್ಯಗಳ ದಲಿತ ಸಂಘಟನೆಗಳು, ಹಾಗೂ ಕೃಷಿ ಕೂಲಿಕಾರರ ಸಂಘಟನೆಗಳು, ವೈಯಕ್ತಿಕ ದಲಿತ ಬುದ್ದಿ ಜೀವಿಗಳು, ಅಂಬೇಡ್ಕರ್ ವಾದಿಗಳು, ಎಡ ಚಿಂತಕರು, ಸಾಮಾಜಿಕ ಕಾರ್ಯಕರ್ತರು, ಪ್ರಗತಿಪರ ಹೋರಾಟಗಾರರು, ಒಟ್ಟಾರೆಯಾಗಿ, ಸಂವಿಧಾನ ಸಂರಕ್ಷಣೆ ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳಲ್ಲಿ ತೊಡಗಿಸಿಕೊಂಡಿರುವ ಸುಮಾರು 88 ಕ್ಕೂ ಹೆಚ್ಚು ಸಂಘಟನೆಗಳು ಒಟ್ಟಿಗೆ ಸೇರಿ ರಾಷ್ಟ್ರಮಟ್ಟದ ಸಂಸತ್ ಚಲೋ ಪ್ರತಿಭಟನೆಗೆ ಕರೆ ನೀಡಿದ್ದರು. ಕರ್ನಾಟಕ ರಾಜ್ಯದಿಂದ ಸುಮಾರು ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು..

ಕಳೆದ ಆಗಸ್ಟ್ ತಿಂಗಳಲ್ಲಿ, ಹೈದರಾಬಾದ್ ನಗರದಲ್ಲಿ ನಡೆದಿದ್ದ ರಾಷ್ಟ್ರೀಯ ದಲಿತ ಶೃಂಗಸಭೆಯ ಕರೆಯ ಮೇರೆಗೆ ಆಯೋಜಿಸಲಾಗಿದ್ದ ದಲಿತ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳ ಈ ಒಗ್ಗಟ್ಟಿನ ಹೋರಾಟವು, ಮುಂದಿನ ದಿನಗಳಲ್ಲಿ ಒಂದು ಐತಿಹಾಸಿಕ ಚಳುವಳಿ ರೂಪಿಸಲು ಸಾಕ್ಷಿಯಾಗಿತ್ತು. ದೊಡ್ಡ ಸಂಖ್ಯೆಯಲ್ಲಿ ದಲಿತ ಮಹಿಳೆಯರು ಭಾಗವಹಿಸಿದ್ದು ವಿಶೇಷವಾಗಿ ಆಕರ್ಷಿಸಿತ್ತು.

ಒಂದು ಕೋಟಿ ಸಹಿ ಸಂಗ್ರಹಣೆ ನಿರ್ಧಾರ

ಸಂವಿಧಾನದ ಪರಿಕಲ್ಪನೆಗಳು ಮತ್ತು ಇದರ ಆಶಯಗಳಾದ ಜಾತ್ಯಾತೀತ, ಸಮಾಜವಾದ, ಪ್ರಜಾಸತ್ತಾತ್ಮಕ ಮತ್ತು ಗಣತಂತ್ರದ ಅಡಿಯಲ್ಲಿ ದೇಶದ ಎಲ್ಲಾ ಪ್ರಜೆಗಳಿಗೂ, ಸಮಾನತೆ ಮತ್ತು ಸಾಮಾಜಿಕ ನ್ಯಾಯ, ಅಭಿವ್ಯಕ್ತಿ ಸ್ವಾತಂತ್ರ್ಯ ಒದಗಿಸುವ ನಿಟ್ಟಿನಲ್ಲಿ, ಪ್ರಮುಖವಾಗಿ ದಲಿತರ ಮೇಲೆ ನಡೆಯುವ ಅಸ್ಪೃಶ್ಯತಾ ದೌರ್ಜನ್ಯಗಳ ನಿರ್ಮೂಲನೆಯಾಗಬೇಕು. ಎಸ್.ಸಿ.ಎಸ್.ಪಿ./ಟಿ. ಎಸ್.ಪಿ. ಉಪ ಯೋಜನೆಗಳ ಕಾಯಿದೆಯ ಅನುಷ್ಠಾನದ ಮೂಲಕ, ದಲಿತ ಮತ್ತು ಆದಿವಾಸಿ ಸಮುದಾಯಗಳಿಗೆ ಶಿಕ್ಷಣ, ಉದ್ಯೋಗ, ಕೃಷಿ ಭೂಮಿ ಮತ್ತು ಮನೆಗಳನ್ನು ಒದಗಿಸಬೇಕು. ಒಟ್ಟಾರೆಯಾಗಿ ದಲಿತ, ಆದಿವಾಸಿಗಳ ಆರ್ಥಿಕ ಸಬಲೀಕರಣ ಮತ್ತು ಸಾಮಾಜಿಕ ಘನತೆಗಾಗಿ ಆಗ್ರಹಿಸಿ, ದೇಶಾದ್ಯಂತ 1 ಕೋಟಿ ಸಹಿ ಸಂಗ್ರಹಣೆ ನಡೆಸಿ, ಜನವರಿ 26 ರಂದು, ಗಣರಾಜ್ಯೋತ್ಸವ ದಿನದಂದು ರಾಷ್ಟ್ರಪತಿಗಳಿಗೆ ಸಲ್ಲಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತು.

ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆ

ಕೇಂದ್ರದಲ್ಲಿ 2014 ರಿಂದ ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ಆಳ್ವಿಕೆಯಲ್ಲಿ ದಲಿತರ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿದೆ. ಸ್ವಾತಂತ್ರ್ಯದ 76 ವರ್ಷಗಳ ನಂತರವೂ, ಇವರ ಮೇಲಿನ ಅಸ್ಪೃಶ್ಯತೆ ಹೆಸರಿನ ದೌರ್ಜನ್ಯಗಳು ಹೆಚ್ಚಾಗಿರುವುದು ಅಂಕಿಅಂಶ ಗಳಿಂದ ಸಾಬೀತಾಗಿದೆ. ಬಿಜೆಪಿ ಪ್ರೋತ್ಸಾಹಿಸುತ್ತಿರುವ ಮನುಸ್ಮೃತಿಯೇ ಮೂಲ ಕಾರಣ, ಇವರ ಆಡಳಿತದಲ್ಲಿ ಸಂವಿಧಾನದ ಮೂಲ ಆಶಯಗಳು ನಾಶಗೊಳಿಸಲಾಗುತ್ತಿದೆ ಎಂದು ವಿಜಯ ರಾಘವನ್ ಅವರು ಬೃಹತ್ ಸಭೆಯ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಹೈದರಾಬಾದ್ ನಲ್ಲಿರುವ ದಲಿತ ಅಧ್ಯಯನ ಕೇಂದ್ರ (ಸಿಡಿಎಸ್)ದ ಛೇರ್ಮನ್ ಮಲ್ಲಪಲ್ಲಿ ಲಕ್ಷ್ಮಯ್ಯ ರವರು ಮಾತನಾಡುತ್ತಾ, 'ಬಿಜೆಪಿಯನ್ನು ಕೇಂದ್ರದಿಂದ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸೋಲಿಸಲೇ ಬೇಕು, ಇಲ್ಲದಿದ್ದರೆ, ಸಂವಿಧಾನವು ಅಪಾಯಕ್ಕೆ ಸಿಲುಕುತ್ತದೆ. ಡಾ. ಬಿ ಆರ್ ಅಂಬೇಡ್ಕರ್ ರವರ ಭಾರತದ ಪರಿಕಲ್ಪನೆ ಎಂದರೆ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವುದು. ಪ್ರಜಾಪ್ರಭುತ್ವ, ಸಮಾನತೆ, ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವೇ ನಮ್ಮ ಸಂವಿಧಾನದ ಪರಿಪೂರ್ಣ ಪರಿಕಲ್ಪನೆ, ಬಿಜೆಪಿ ಆಡಳಿತವು ಇಂತಹ ಪರಿಕಲ್ಪನೆಯ ಭಾರತವನ್ನು ನಾಶಗೊಳಿಸಲು ಹೊರಟಿದೆ. ಆದ್ದರಿಂದ, ಅನಿವಾರ್ಯವಾಗಿ ಬಿಜೆಪಿಯನ್ನು ಕಿತ್ತೆಸೆಯಬೇಕು ಎಂದರು.

ರಾಮಚಂದ್ರ ಡೋಂ, ಸಂಸದರಾದ ಕೇರಳದ ಜಾನ್, ತಮಿಳುನಾಡಿನ ಸ್ವೆಲ್ಲ ರಾಜ್ ಮತ್ತು ಆರ್.ಜೆ.ಡಿ. ಸಂಸದರೊಬ್ಬರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕಾ.ಸುಭಾಷಿನಿ ಅಲಿಯವರು ರಾಷ್ಟ್ರಪತಿಗಳಿಗೆ ಸಲ್ಲಿಸುವ ಬೇಡಿಕೆಗಳ ಪಟ್ಟಿಯನ್ನು ಮಂಡಿಸಿದರು.



ಕರ್ನಾಟಕದ ನಾಯಕರು ಜನರೊಂದಿಗೆ

ಎಐಎಡಬ್ಲ್ಯೂಯುನಿಂದ ಕಾ.ವಿಜಯರಾಘವನ್, ವೆಂಕಟ್, ಡಿಎಸ್ಎಂಎಂ ನಿಂದ ಸುಭಾಷಿನಿ ಅಲಿ, ವಿಕ್ರಂ ಸಿಂಗ್, ರಾಮಚಂದ್ರ ಡೋಮ್ ಸೇರಿದಂತೆ ಪ್ರಮುಖ ಸಂಘಟನೆಗಳ ಅಖಿಲ ಭಾರತ ನಾಯಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

–ನಾ.ನಂ

ಎರಡು ಸಿದ್ಧಾಂತಗಳ ಸಂಘರ್ಷಗಳಿಗೆ ಸಾಕ್ಷಿಯಾದ ಡಿಸೆಂಬರ್ 6ರ ದಿನ

ಪುಟ 2 ರಿಂದ

ಮಾಡಿಕೊಳ್ಳಬೇಕು.

ಮುಖ್ಯವಾಗಿ ಉತ್ತರ ಭಾರತದಲ್ಲಿ ಹಿಂದೂ ಬಲಪಂಥೀಯ ರಾಜಕೀಯ ನಾಯಕರು ಆಯೋಜಿಸಿದ ಕನ್ವಾಡ್ ಯಾತ್ರೆ' ಗಳಲ್ಲಿ, ಅದೇ ರೀತಿ ತಮಿಳುನಾಡಿನಲ್ಲಿ ಇತ್ತೀಚೆಗೆ ನಡೆದ 'ವೇಲ್ ಯಾತ್ರೆ' ಯಲ್ಲಿ ದಲಿತರು ಭಾಗವಹಿಸುತ್ತಿರುವುದು, ಅವರಲ್ಲಿ ಆರ್ಎಸ್ಎಸ್‌ನ ಸಿದ್ಧಾಂತವನ್ನು ನಂಬುವಂತೆ ಮಾಡಿ, ಹಿಂದುತ್ವ ಸಂಪ್ರದಾಯದ ಮೂಢನಂಬಿಕೆಗಳ ಆಚರಣೆಗಳ ಮೂಲಕ ದಾರಿ ತಪ್ಪಿಸುತ್ತಿರುವುದು ಇವರ ಇತ್ತೀಚಿನ ಕಾರ್ಯಯೋಜನೆಯಲ್ಲಿ ಒಂದಾಗಿದೆ.

ಒಂದು ಕಡೆ ದಲಿತರ ವಿರುದ್ಧ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆ ದೌರ್ಜನ್ಯಗಳು ಮುಂದುವರಿಸುವುದು, ಮತ್ತು ದೌರ್ಜನ್ಯಗಳನ್ನು ಸಮರ್ಥನೆ ಮಾಡಿಕೊಂಡು, ಅಪರಾಧಿಗಳನ್ನು ರಕ್ಷಿಸುವುದು. ಉದಾಹರಣೆಗೆ, ಗುಜರಾತಿನ ಊನಾ ಘಟನೆ, ಉತ್ತರ ಪ್ರದೇಶದ ಹತ್ರಾಸ್ ನಲ್ಲಿ ದಲಿತ ಬಾಲಕಿಯ ಮೇಲಿನ ದಾರುಣ ದೌರ್ಜನ್ಯ ಪ್ರಕರಣ, ಆಂಧ್ರದಲ್ಲಿ ರೋಹಿತ್ ವೇಮುಲ ಘಟನೆಗಳು ಪ್ರಮುಖವಾದ ಜಾತಿ ತಾರತಮ್ಯ ಪ್ರಕರಣಗಳು. ಕಳೆದ 9 ವರ್ಷಗಳಲ್ಲಿ ಆರ್ಎಸ್ಎಸ್/ಬಿಜೆಪಿ ನೇತೃತ್ವದ ಆಡಳಿತದಲ್ಲಿ ಎನ್‌ಸಿಆರ್‌ಬಿ ಯ ಅಧಿಕೃತ ಅಂಕಿ ಅಂಶಗಳ ಪ್ರಕಾರವೇ ದೇಶದಲ್ಲಿ ಸುಮಾರು 4 ಲಕ್ಷಕ್ಕೂ ಹೆಚ್ಚು ಅಸ್ಪೃಶ್ಯತಾ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಅದರಲ್ಲೂ, ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಇಂತಹ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿರುವುದು ದಾಖಲೆಯಲ್ಲಿವೆ.

ಹಾಗಾಗಿಯೇ, ದಲಿತರನ್ನು ಮತ ಬ್ಯಾಂಕ್‌ಗಳಾಗಿ ಪರಿವರ್ತಿಸುವ ಪ್ರಯತ್ನಗಳನ್ನು ಆರ್ಎಸ್ಎಸ್ ತಮ್ಮ ಸನಾತನ ಗೊಡ್ಡು ಹಿಂದೂ ಸಂಪ್ರದಾಯ ಆಚರಣೆಗಳ ಮೂಲಕ, ಮುಗ್ದ ದಲಿತ ಸಮುದಾಯವನ್ನು ಸೆಳೆಯುವ ಅದರ ಕಾರ್ಯಯೋಜನೆಯ ಭಾಗವಾಗಿ ಪ್ರಯತ್ನ ಮಾಡುತ್ತಿರುವುದಕ್ಕೆ ಇವೆಲ್ಲ ಪ್ರತ್ಯಕ್ಷ ಸಾಕ್ಷಿಗಳಾಗಿವೆ.

ಆರ್‌ಎಸ್‌ಎಸ್‌ನ ಚಮಚ ಕಾರ್ಪೋರೇಟ್ ಸಂಗಮ

ಆರ್ಎಸ್ಎಸ್ ಮತ್ತು ಹಿಂದೂ ಬಲಪಂಥದ ಮತ್ತೊಂದು ಮುಖವೆಂದರೆ, ದೇಶದ ದೊಡ್ಡ ಕಾರ್ಪೋರೇಟ್ ಕುಳಗಳಿಗೆ ಮಣೆಹಾಕುವ ಇವರ ನಿಷ್ಠೆ. ಈ ನಿಷ್ಠೆಯು ಎಷ್ಟರಮಟ್ಟಿಗೆ ಇದೆ ಎಂದರೆ, ದೇಶದ ಜನರ ಬಗ್ಗೆ ಕಾಳಜಿಯಿಲ್ಲ, ಹಾಗೆಯೇ, ಅವರ ಭೌತಿಕ ಅಗತ್ಯಗಳ ಬಗ್ಗೆ ಅಸಡ್ಡೆ ವರ್ತನೆ, ಮತ್ತು ಸಂವಿಧಾನದ ಆಶಯಗಳ ದೂಳಿಪಟ ಇವರ ಕಾರ್ಯಸೂಚಿಯಲ್ಲಿರುವ ಆದ್ಯತೆಗಳು, ಒಟ್ಟಾರೆಯಾಗಿ, ದೇಶದ ಸಾರ್ವಭೌಮತ್ವ ಮತ್ತು ಐಕ್ಯತೆ ಸಮಗ್ರತೆಗೆ ಧಕ್ಕೆ ತರುವ ಪ್ರಯತ್ನಗಳು ಮನುವಾದಿ ಪ್ರತಿಪಾದಕರ ಆಡಳಿತದ ಕಾರ್ಯವೈಖರಿಯಾಗಿದೆ.

ಕೋವಿಡ್ ಸಾಂಕ್ರಾಮಿಕ ಸಂದರ್ಭವನ್ನು ಬಳಸಿಕೊಂಡು, ಸಂಸತ್ತಿನ ಮೌಲ್ಯಗಳನ್ನು ಗಾಳಿಗೆ ತೂರಿ, ಮೂರು ಕೃಷಿ ಮಸೂದೆಗಳ ಅಂಗೀಕಾರ ಮತ್ತು ದೆಹಲಿಯ ಗಡಿಯಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ಲಾಠಿಚಾರ್ಜ್ ಮಾಡಿ ನೂರಾರು ರೈತರನ್ನು ಬಲಿ ತೆಗೆದುಕೊಂಡರು. ಹಾಗೂ ವಿದ್ಯುತ್ ಮತ್ತು ಹಲವು ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ, ಇವೆಲ್ಲವೂ ಆರ್ಎಸ್ಎಸ್ ನವರ ಚಮಚ ಕಾರ್ಪೋರೇಟ್ ಸಂಗಮದ ಶಾಮೀಲು ತನಕ್ಕೆ ಹಿಡಿದ ಕನ್ನಡಿ ಯಾಗಿದೆ. ಆರ್ಎಸ್ಎಸ್‌ನ ಕೋಮುವಾದಿ ಸಿದ್ಧಾಂತದಿಂದ ಮಾರ್ಗದರ್ಶನ ಪಡೆದ ಬಿಜೆಪಿ ಆಡಳಿತದ ಈ ಅವಧಿಯಲ್ಲಿ, ದೀನ ದಲಿತರು ಎದುರಿಸುತ್ತಿರುವ ಜಾತಿ ತಾರತಮ್ಯ ಮತ್ತು ಶೋಷಣೆಯನ್ನು ಹೆಚ್ಚಿಸಿದೆ. ಆರ್ಎಸ್ಎಸ್–ಬಿಜೆಪಿಯ ನೀಚ ಕೋಮುವಾದಿ ವಿನ್ಯಾಸಗಳೊಂದಿಗಿನ ಕೋಪ ಮತ್ತು ಹತಾಶೆಯನ್ನು ಮತ್ತು ಜಾತಿ ತಾರತಮ್ಯ, ಲಿಂಗ ದೌರ್ಜನ್ಯಗಳ ವಿರುದ್ಧದ ಹೋರಾಟಗಳು, ದುಡಿಯುವ ವರ್ಗ ನಡೆಸುತ್ತಿರುವ ಆರ್ಥಿಕ ಶೋಷಣೆಯ ವಿರುದ್ಧದ ಜನಪ್ರಿಯ ಆಂದೋಲನ ದೊಂದಿಗೆ ಬೆರೆಯುವ ಮೂಲಕ ಕಾರ್ಪೋರೇಟ್ ಮತ್ತು ಕೋಮುವಾದಿ, ಕಾರ್ಯಸೂಚಿಗಳನ್ನು ಸೋಲಿಸಬೇಕು.

ಡಿಸೆಂಬರ್ 6 ರ ಈ ದಿನ ದೇಶದ ಇತಿಹಾಸದ ಪುಟಗಳಲ್ಲಿ ಎರಡು ಸಿದ್ಧಾಂತಗಳ ನಡುವಿನ ಸಂಘರ್ಷದ ದಿನವಾಗಿ ದಾಖಲಾಗಿದೆ. ಒಂದು ಅಂಬೇಡ್ಕರ್ ವಾದ ಮತ್ತೊಂದು ಮನುವಾದ, ಮೊದಲನೆಯದರ ಪ್ರತಿನಿಧಿಗಳು ಅಸ್ಪೃಶ್ಯರು. ಇವರು ಮನುವಾದ ಮತ್ತು ಕಾರ್ಪೋರೇಟ್ ಶಾಮೀಲು ಮತ್ತು ಸಂಗಮದಿಂದಾಗಿ ಆರ್ಥಿಕ ಶೋಷಣೆ ಮತ್ತು ಜಾತಿ ದಮನಕ್ಕೆ ತುತ್ತಾದವರು. ಇವರು ಸಂವಿಧಾನದ ಆಶಯಗಳ ರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನೂ ಎರಡನೆಯವರು ಮನುವಾದ ಮತ್ತು ವರ್ಣಾಶ್ರಮ ಪದ್ಧತಿ ಮತ್ತು ಜಾತಿ ವ್ಯವಸ್ಥೆಯ ಪ್ರೋತ್ಸಾಹಕರು ಮತ್ತು ಪ್ರತಿಪಾದಕರು.

ದಲಿತರು ಈ ಸೈದ್ಧಾಂತಿಕ ಘರ್ಷಣೆಯನ್ನು ಅಂಬೇಡ್ಕರ್ ರವರ ದೃಷ್ಟಿಕೋನದಿಂದ ಅರ್ಥೈಸಿಕೊಂಡು, ಆರ್ಥಿಕ ಶೋಷಣೆ ವಿರುದ್ಧದ ಕಾರ್ಮಿಕ ವರ್ಗದ ಪ್ರಭಲ ಆಂದೋಲನದಲ್ಲಿ ಬೆರೆಯಬೇಕು. ಮನುವಾದ ಮತ್ತು ಜಾತಿ ಅಸ್ಪೃಶ್ಯತೆ ವ್ಯವಸ್ಥೆಯ ನಿರ್ಮೂಲನೆಯ ತಮ್ಮ ಹೋರಾಟವನ್ನು ಬಲಿಷ್ಠ ಚಳುವಳಿಯ ನೆಲೆಯೊಂದಿಗೆ ಸೇರಬೇಕು. ಇದೇ ಡಿಸೆಂಬರ್ 6 ರ ದಿನದ ಪ್ರತಿಜ್ಞೆಯಾಗಲಿ ಎಂದು ಆಶಿಸೋಣ.

ವಿಧಾನಸಭೆ ಚುನಾವಣೆ ಫಲಿತಾಂಶ: ಹಿಂದುತ್ವ ಬಲವರ್ಧನೆ ಗಮನಾರ್ಹ

ಪ್ರಕಾಶ್ ಕಾರತ್

ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶಗಳು ಛತ್ತೀಸ್‌ಗಢ, ಮಧ್ಯಪ್ರದೇಶ ಮತ್ತು ರಾಜಸ್ತಾನದ ಮೂರು ಹಿಂದಿ ಹೃದಯಭಾಗದ ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ ರೀತಿ ಗಮನಾರ್ಹವಾಗಿದೆ.

ಮಧ್ಯಪ್ರದೇಶ ರಾಜ್ಯದಲ್ಲಿನ ಬಿಜೆಪಿಯ ಗೆಲುವು, ಕಾಂಗ್ರೆಸ್ ಅಧಿಕಾರದ ಹದಿನೈದು ತಿಂಗಳ ವಿರಾಮವನ್ನು ಹೊರತುಪಡಿಸಿ, ಎರಡು ದಶಕಗಳ ಕಾಲ ಆಡಳಿತ ನಡೆಸಿದ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದಿರುವುದು ಒಂದು ಗಮನಾರ್ಹ ವಿಜಯವಾಗಿದೆ. ಶಿವರಾಜ್ ಚೌಹಾಣ್ ಸರ್ಕಾರದಲ್ಲಿನ ಆಡಳಿತ–ವಿರೋಧಿ ಅಂಶಗಳನ್ನು ದೂರವಿಟ್ಟು, ದೊಡ್ಡ ಪ್ರಮಾಣದ ಮತಗಳ ಹಂಚಿಕೆಯೊಂದಿಗೆ (ಶೇ. 48.55) ಗೆಲುವು ಸಾಧಿಸಿದೆ. ಇದು ಕಾಂಗ್ರೆಸ್ ಪಡೆದ ಮತಗಳ ಸಮೀಕ್ಷೆಗಿಂತ ಸುಮಾರು ಶೇ 8 ರಷ್ಟು ಹೆಚ್ಚಾಗಿದೆ.

ಛತ್ತೀಸ್‌ಗಢ ಮತ್ತು ರಾಜಸ್ಥಾನದಲ್ಲಿ ಬಿಜೆಪಿ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದಿದೆ. ಛತ್ತೀಸ್‌ಗಡ್ ನಲ್ಲಿ ಕಳೆದ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿದ್ದ ಕಾಂಗ್ರೆಸ್, ಎಲ್ಲಾ ಎಕ್ಸಿಟ್ ಸಮೀಕ್ಷೆಗಳಲ್ಲಿ ಕಾಂಗ್ರೆಸ್ ಗೆಲುವಿನ ಮುನ್ಸೂಚನೆ ನೀಡಿದ ಹೊರತಾಗಿಯೂ, ಬಿಜೆಪಿಯು ಒಟ್ಟು 90 ರಲ್ಲಿ 54 ಸ್ಥಾನಗಳನ್ನು ಗೆಲ್ಲುವ ಮೂಲಕ ವಿಜಯದ ಪಾತಕಿಯನ್ನು ಹಾರಿಸಿದೆ. ಕಾಂಗ್ರೆಸ್ ಅನ್ನು ನಿರಾಯಾಸವಾಗಿ ಸೋಲಿಸಿ ಹಿಂದಿನ ಚುನಾವಣೆಗಿಂತ ಶೇ. 13.3 ರಷ್ಟು ಮತಗಳನ್ನು ಹೆಚ್ಚಿಸಿಕೊಂಡು ಬೀಗಿದೆ.

ರಾಜಸ್ಥಾನದಲ್ಲಿ ಅಶೋಕ್ ಗೆಹ್ಲೋಟ್ ಸರ್ಕಾರವು ಹಲವಾರು ಮಹತ್ವದ ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದು, ಛತ್ತೀಸ್ ಗರ್ ಕ್ಕಿಂತ ಉತ್ತಮವಾದ ಆಡಳಿತ ಎಂದು ಪರಿಗಣಿಸಲಾಗಿದ್ದರು, ಬಿಜೆಪಿಯು ಕಾಂಗ್ರೆಸ್ ಅನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿದೆ. ಚುನಾವಣೆ ನಡೆದ ಒಟ್ಟು 199 ಸ್ಥಾನಗಳಲ್ಲಿ 115 ಸ್ಥಾನಗಳನ್ನು ಪಡೆದು ಬಿಜೆಪಿ ವಿಜಯ ಸಾಧಿಸಿದೆ.

ಈ ಬಿಜೆಪಿ ಗೆಲುವು ಮತ್ತು ಕಾಂಗ್ರೆಸ್ ಸೋಲನ್ನು ಹೇಗೆ ವಿಶ್ಲೇಷಣೆ ಮಾಡುವುದು, ಇದಕ್ಕೆ ಕಾರಣಗಳೇನು? ಈ ಫಲಿತಾಂಶಗಳನ್ನು ರಾಜಕೀಯ ವಿಶ್ಲೇಷಣೆಯಲ್ಲಿ ವಿವಿಧ ಅಂಶಗಳ ಕಾರಣಗಳನ್ನು ನೀಡಿದ್ದಾರೆ. ಆದಾಗ್ಯೂ, ಒಂದು ಪ್ರಮುಖವಾದ 'ಕೇಂದ್ರ ಕಾರಣ' ವನ್ನು ವಿಶ್ಲೇಷಣೆ ಮಾಡುವುದಾದರೆ, ಹಿಂದಿ ವೃತ್ತದ ಈ ಮೂರು ರಾಜ್ಯಗಳಲ್ಲಿ ಬಿಜೆಪಿ ಮತಗಳು ಅಂದರೆ, ಹಿಂದುತ್ವದ ಅಸ್ಮಿತೆ ಪ್ರಭಾವಿತ ಮತದಾರರ ಗುಂಪು ತಮ್ಮ ಅಸ್ಥಿತ್ವವನ್ನು ಮತ್ತಷ್ಟು ಕ್ರೋಢಿಕೃತಗೊಂಡಿವೆ.

ಈ ನಿಟ್ಟಿನಲ್ಲಿ ನೋಡುವುದಾದರೆ, 2019 ರ ಸಂಸತ್ತಿನ ಚುನಾವಣೆಯ ಸಮಯದಲ್ಲಿ ಗಮನಿಸಲಾದ ಸಂಗತಿಯೆಂದರೆ, ಬಿಜೆಪಿಯು ಸರ್ವಶ್ರೇಷ್ಠ ಪಾನ್–ಹಿಂದೂ ಅಸ್ಮಿತೆ ಪ್ರಚಾರದಲ್ಲಿ ಯಶಸ್ವಿಯಾಗಿತ್ತು. ಈ ಹಿಂದುತ್ವದ ಅಸ್ಮಿತೆತಯು ಉತ್ತರ ಮತ್ತು ಪಶ್ಚಿಮ ಭಾರತದಲ್ಲಿ ಹೆಚ್ಚು ಪ್ರಭಾವ ಹೊಂದಿತ್ತು. ಅದನ್ನು ಈ ಚುನಾವಣೆಯಲ್ಲಿ ಬಲವರ್ಧಿಸಿಕೊಂಡಿದೆ.

ಈ ವಾಸ್ತವವನ್ನು ಎದುರಿಸಲು ಮತ್ತು ಈ ಹಿಂದುತ್ವದ ಸೈದ್ಧಾಂತಿಕ ಪ್ರಾಬಲ್ಯವನ್ನು ಹಿಮ್ಮೆಟ್ಟಿಸಿ ಗೆಲ್ಲಲು, ಒಂದು ಸೈದ್ಧಾಂತಿಕ ವೇದಿಕೆ ಮತ್ತು ರಾಜಕೀಯ ನಿರೂಪಣೆಯನ್ನು ರೂಪಿಸಲು ಅಸಮರ್ಥತೆ ಕಾಂಗ್ರೆಸ್ ನ ಮೂಲಭೂತ ವೈಫಲ್ಯವಾಗಿದೆ. ಚುನಾವಣಾ ಫಲಿತಾಂಶಕ್ಕೆ ಪ್ರತಿಕ್ರಿಯಿಸಿದ ರಾಹುಲ್ ಗಾಂಧಿ, "ಸಿದ್ಧಾಂತದ ಹೋರಾಟ ಮುಂದುವರಿಯುತ್ತದೆ" ಎಂದು ಹೇಳಿದ್ದಾರೆ. ಆದರೆ ಇದು ನಿಖರವಾಗದ ಸಮಸ್ಯೆಯಾಗಿದೆ. ಹಿಂದುತ್ವದ ವಿರುದ್ಧ ಕಾಂಗ್ರೆಸ್ ನಡೆಸಿದ ಸೈದ್ಧಾಂತಿಕ ಹೋರಾಟ ಎಲ್ಲಿ ನಡೆದಿದೆ ಎಂದು ಹುಡಕಬೇಕಾಗಿದೆ

ಇದಕ್ಕೆ ವ್ಯತಿರಿಕ್ತವಾಗಿ ಹಿಂದುತ್ವದ ಭಾವನೆಗಳು ಹೆಚ್ಚಾಗಿವೆ. ಮಧ್ಯಪ್ರದೇಶ ದಲ್ಲಿ ಈ ಮೃದು ಹಿಂದುತ್ವದ ಮುಖ್ಯ ಸಾಧಕರು ಬೇರೆ ಯಾರೂ ಅಲ್ಲ, ಪಿಸಿಸಿ ಮುಖ್ಯಸ್ಥ ಮತ್ತು ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ನ ಚುನಾವಣಾ ಹೋರಾಟದ ನೇತೃತ್ವ ವಹಿಸಿದ್ದ ಮಾಜಿ ಮುಖ್ಯಮಂತ್ರಿ ಕಮಲ್ ನಾಥ್. ಇವರು ಹಿಂದುತ್ವದ ಭಾವನೆಗಳನ್ನು ನಿರಂತರವಾಗಿ ಅನುಕರಿಸುತ್ತಿದ್ದಾರೆ ಮತ್ತು ಕೋಮುವಾದಿ ಬಾಬಾಗಳು ಮತ್ತು ಸ್ವಾಮಿಗಳನ್ನು ಪೋಷಿಸುವಲ್ಲಿ ಆರ್.ಎಸ್.ಎಸ್.–ಬಿಜೆಪಿ ಯನ್ನು ಮೀರಿಸಲು ಪ್ರಯತ್ನಿಸುತ್ತಿದ್ದಾರೆ. 2020ರ ಆಗಸ್ಟ್ ನಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರದ ಶಂಕುಸ್ಥಾಪನೆ ನಡೆದ ದಿನದಂದು ಎಲ್ಲಾ ಕಾಂಗ್ರೆಸ್ ಕಚೇರಿಗಳಲ್ಲಿ ಹನುಮಾನ್ ಚಾಲೀಸಾ ಪಠಣಕ್ಕೆ ಕಮಲ್ ನಾಥ್ ಕರೆ ನೀಡಿದ್ದರು. ಇತ್ತೀಚೆಗೆ ಅವರು ಕಾಂಗ್ರೆಸ್ ನೊಂದಿಗೆ ಭಜರಂಗದ ಸೇನೆಯ ವಿಲೀನದ ಅಧ್ಯಕ್ಷತೆ ವಹಿಸಿದ್ದರು. ಒಬ್ಬ ಕಾಂಗ್ರೆಸ್ ಸಂಘಟನೆಯ ನಾಯಕ ಹಿಂದೂ ರಾಷ್ಟ್ರದ ರಚನೆಯ ಅಗತ್ಯವನ್ನು ಘೋಷಿಸಿದ್ದರು. ಹಿಂದುತ್ವ ಸಿದ್ಧಾಂತವನ್ನು ಹರಡಲು ಆರ್.ಎಸ್. ಎಸ್. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಮತ್ತು ವರ್ಗಗಳಲ್ಲಿ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿರುವ ರಾಜ್ಯದಲ್ಲಿ, ಕಾಂಗ್ರೆಸ್ ಅನುಸರಿಸುತ್ತಿರುವ ನಿಲುವು ಗಣನೀಯ ವರ್ಗದ ಜನರ ಮೇಲೆ ಹಿಂದುತ್ವದ ಭಾವನೆಗಳ ಹಿಡಿತವನ್ನು ಮತ್ತಷ್ಟು ಬಲಪಡಿಸಿದೆ.

> ಆರ್.ಎಸ್. ಎಸ್. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಮತ್ತು ವರ್ಗಗಳಲ್ಲಿ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿರುವ ರಾಜ್ಯದಲ್ಲಿ, ಕಾಂಗ್ರೆಸ್ ಅನುಸರಿಸುತ್ತಿರುವ ನಿಲುವು ಗಣನೀಯ ವರ್ಗದ ಜನರ ಮೇಲೆ ಹಿಂದುತ್ವದ ಭಾವನೆಗಳ ಹಿಡಿತವನ್ನು ಮತ್ತಷ್ಟು ಬಲಪಡಿಸಿದೆ.

ಛತ್ತೀಸ್‌ಗಢ ವಿಷಯದಲ್ಲೂ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ತಮ್ಮ ಹಿಂದೂ ಧಾರ್ಮಿಕ ಅಸ್ಮಿತೆಯನ್ನು ಪ್ರದರ್ಶಿಸಲು ಮತ್ತು ರಾಮ ವನ್ ಗಮನ್ ಪಥವನ್ನು ನಿರ್ಮಿಸುವಂತಹ ಸರ್ಕಾರಿ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಈ ವಿಧಾನದ ಪರಿಣಾಮವಾಗಿ, ಮಧ್ಯಪ್ರದೇಶ ಮತ್ತು ಛತ್ತೀಸ್ ಘರ್ ಎರಡರಲ್ಲೂ, ಆರ್.ಎಸ್.ಎಸ್. ಮತ್ತು ಇತರ ಹಿಂದುತ್ವ ಸಂಘಟನೆಗಳು ಸಮಾಜದ ವಿಭಾಗಗಳನ್ನು ಕೋಮುವಾದಗೊಳಿಸುವಲ್ಲಿ ಮತ್ತು ಅಲ್ಪಸಂಖ್ಯಾತರನ್ನು ಗುರಿಯಾಗಿಸುವಲ್ಲಿ ಮುಕ್ತ ಚಾಲನೆಯನ್ನು ಹೊಂದಿದ್ದವು. ಕಾಂಗ್ರೆಸ್ ನ ಮೃದು ಹಿಂದು ಧೋರಣೆಗಳು ಇವರನ್ನು ಪ್ರೋತ್ಸಾಹಿಸಿತು.

ಛತ್ತೀಸ್‌ಗಢ ಮತ್ತು ಮಧ್ಯಪ್ರದೇಶದ ಬುಡಕಟ್ಟು ಮೀಸಲು ಸ್ಥಾನಗಳಲ್ಲಿ ಬಿಜೆಪಿ ದೊಡ್ಡ ಲಾಭವನ್ನು ಗಳಿಸಿದೆ ಎಂಬುದು ಫಲಿತಾಂಶಗಳನ್ನು ನೋಡಿದಾಗ ಗೊತ್ತಾಗುತ್ತದೆ. ಈ ಎರಡು ರಾಜ್ಯಗಳಲ್ಲಿ 2018ರ ಚುನಾವಣೆಯಲ್ಲಿ ಬಿಜೆಪಿ 76 ಎಸ್.ಟಿ. ಸ್ಥಾನಗಳ ಪೈಕಿ 19 ರಲ್ಲಿ ಮಾತ್ರ ಗೆದ್ದಿತ್ತು. ಇದೀಗ 44ಕ್ಕೆ ಏರಿಕೆಯಾಗಿದೆ. ಛತ್ತೀಸ್‌ಗಢದಲ್ಲಿ 29 ಎಸ್.ಟಿ. ಸ್ಥಾನಗಳಲ್ಲಿ 17 ಮತ್ತು ಮಧ್ಯಪ್ರದೇಶದಲ್ಲಿ 47 ರಲ್ಲಿ 27 ರಲ್ಲಿ ಬಿಜೆಪಿ ಗೆದ್ದಿದೆ. ವನವಾಸಿ ಕಲ್ಯಾಣ ಆಶ್ರಮದಂತಹ ಆರ್.ಎಸ್.ಎಸ್. ಸಂಘಟನೆಗಳು ಆದಿವಾಸಿಗಳ 'ಹಿಂದೂಕರಣ'ದ ನಿರಂತರ ಪ್ರಕ್ರಿಯೆಯು ಬುಡಕಟ್ಟು ಪ್ರದೇಶಗಳಲ್ಲಿ ಬಿಜೆಪಿಯ ಲಾಭಕ್ಕೆ ಒಂದು ಕಾರಣ. ಇದಲ್ಲದೆ, ಛತ್ತೀಸ್‌ಗಢದ ಕೆಲವು ಪ್ರದೇಶಗಳಲ್ಲಿ ಕ್ರಿಶ್ಚಿಯನ್ ಆದಿವಾಸಿಗಳ ಮೇಲೆ ಸಂಘಟಿತ ದಾಳಿಗಳು ನಡೆದವು. ಕ್ರಿಶ್ಚಿಯನ್ ಆದಿವಾಸಿಗಳ ಹಕ್ಕುಗಳನ್ನು ರಕ್ಷಿಸಲು ಬಘೇಲ್ ಸರ್ಕಾರವು ವಾಸ್ತವಿಕವಾಗಿ ಏನನ್ನೂ ಮಾಡಲಿಲ್ಲ. ಇದರಿಂದಾಗಿ ಬಿಜೆಪಿಗೆ ಲಾಭವಾಯಿತು.

ಜಾತಿ ಗಣತಿಯ ಕಾಂಗ್ರೆಸ್ ನ ಭರವಸೆಯು ಮಧ್ಯಪ್ರದೇಶ ಮತ್ತು ರಾಜಸ್ಥಾನದ ಒಬಿಸಿಗಳಲ್ಲಿ ಹೆಚ್ಚು ಪರಿಣಾಮ ಬೀರಲಿಲ್ಲ ಎಂದು ಅನೇಕ ವೀಕ್ಷಕರು ಗಮನಿಸಿದ್ದಾರೆ. ಈ ಎರಡೂ ರಾಜ್ಯಗಳಲ್ಲಿ ಒಬಿಸಿ ಆಧಾರಿತ ರಾಜಕೀಯ ಪ್ರಜ್ಞೆ ಹೊಂದಿರುವ, ರಾಜಕೀಯ ಪಕ್ಷಗಳು ಬೆಳೆದಿಲ್ಲ ಎಂಬ ಅಂಶವನ್ನು ಗಮನಿಸಬಹುದು. ಇದಲ್ಲದೆ, ಚುನಾವಣೋತ್ತರ ಸಮೀಕ್ಷೆಗಳು ತೋರಿಸಿದಂತೆ, ಒಬಿಸಿ ಗಳ ಗಣನೀಯ ವಿಭಾಗವು ಈಗಾಗಲೇ ಬಿಜೆಪಿಯೊಂದಿಗಿದೆ, ಇದು ಪಾನ್–ಹಿಂದೂ ಅಸ್ಮಿತೆ ಬಲವರ್ಧನೆಯ ಒಂದು ಅಂಶವಾಗಿದೆ ಎಂದು ತಿಳಿಯಬಹುದು.

ಹಿಂದೂ ಅಸ್ಮಿತೆ ರಾಷ್ಟ್ರೀಯವಾದಿ ಮತಗಳ ಬಣವು ಬಿಜೆಪಿಗೆ ಅಂತರ್ಗತ ಲಾಭವನ್ನು ಒದಗಿಸುತ್ತದೆ. ಈ ವಿಭಾಗಗಳ ಮತ ಸೆಳೆಯಲು ಬಿಜೆಪಿ ಹಲವು ಗ್ಯಾರಂಟಿ ಕಲ್ಯಾಣ ಯೋಜನೆಗಳನ್ನು ನೀಡುವ ಭರವಸೆಯನ್ನು ಮಧ್ಯಪ್ರದೇಶ ದಲ್ಲಿ ಅನುಸರಿಸಿತು. ಅಂತಹ ಒಂದು ಕಲ್ಯಾಣ ಯೋಜನೆಗಳು, ಮಧ್ಯಪ್ರದೇಶದ ಲಾಡ್ಲಿ ಬೆಹ್ನಾ ಯೋಜನೆಯಂತಹ ನಗದು ವರ್ಗಾವಣೆಯ ಮೂಲಕ ಫಲಾನುಭವಿಗಳ ಪೂಲ್ ಮತ್ತು ಇನ್ನೊಂದು ಸೂಕ್ಷ್ಮ–ಜಾತಿ ಚುನಾವಣಾ ಎಂಜಿನಿಯರಿಂಗ್, ಈ ಗ್ಯಾರಂಟಿ ಭರವಸೆಗಳು ಬಿಜೆಪಿಯ ಕೈಹಿಡಿದಿವೆ. ಎರಡನೆಯದು ರಾಜಸ್ಥಾನದ ಚುನಾವಣಾ ಯಶಸ್ಸಿನಲ್ಲಿ ಜಾತಿ ಪರಿಗಣನೆಗಳ ಆಧಾರದ ಮೇಲೆ ಬಿಜೆಪಿಯ ಅಭ್ಯರ್ಥಿಗಳ ನಿಖರವಾದ ಆಯ್ಕೆಯು ಫಲ ನೀಡಿತು.

ಈ ಎರಡು ರಾಜ್ಯಗಳಲ್ಲಿ ಕಾಂಗ್ರೆಸ್ ಏಕಾಂಗಿಯಾಗಿ ಚುನಾವಣೆ ಎದುರಿಸಿದ ಧೋರಣೆ ದೂರದೃಷ್ಟಿಯಿಂದ ಕೂಡಿರಿಲಿಲ್ಲ ಎಂದು ಸಾಬೀತಾಗಿದೆ. ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಪ್ರಮುಖ ಹೋರಾಟವಿದ್ದರೂ, ಮಧ್ಯಪ್ರದೇಶದಲ್ಲಿ ಸಮಾಜವಾದಿ ಪಕ್ಷದಂತಹ ಪಕ್ಷಗಳು ಮತ್ತು ಈ ರಾಜ್ಯಗಳಲ್ಲಿನ ಇತರ ಸಣ್ಣ ಪಕ್ಷಗಳೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಲು ಕಾಂಗ್ರೆಸ್ ನಿರಾಕರಿಸಿದ್ದು, ಬಿಜೆಪಿ ವಿರೋಧಿ ಶಕ್ತಿಗಳ ಒಟ್ಟುಗೂಡುವಿಕೆ ಕಲೆ ಹಾಕುವುದನ್ನು ತಡೆಯಿತು.

ತೆಲಂಗಾಣದಲ್ಲಿ ಕಾಂಗ್ರೆಸ್ ನಿರ್ಣಾಯಕ ಗೆಲುವು ಪಡೆದಿದೆ. ಎರಡು ಅವಧಿಯ ಟಿ.ಆರ್. ಎಸ್/ಬಿ.ಆರ್.ಎಸ್. ಸರ್ಕಾರದ ಚುನಾವಣೆ ವಿರೋಧಿ ಅಲೆ ಹೊರಹಾಕಲು ಕಾರಣವಾಗಿದೆ. ಬಿ.ಆರ್.ಎಸ್. ಸೋಲಿಗೆ ಕೆ. ಚಂದ್ರಶೇಖರ ರಾವ್ ಅವರ ನಾಯಕತ್ವದ ಹೊಣೆಗಾರಿಕೆಯೇ ಹೆಚ್ಚಾಗಿತ್ತು. ಮೊದಲನೆಯದಾಗಿ, ಒಂದು ವಿಚಿತ್ರವಾದ ಪ್ರವೃತ್ತಿಯಲ್ಲಿ ತೆಲಂಗಾಣ ರಾಷ್ಟ್ರ ಸಮಿತಿಯ (ಟಿ.ಆರ್.ಎಸ್.) ನಡೆಗಳು, ವಿಶಿಷ್ಟ ತೆಲಂಗಾಣ ಅಸ್ಮಿತೆಯನ್ನು, ಭಾರತೀಯ ರಾಷ್ಟ್ರ ಸಮಿತಿ (ಬಿ.ಆರ್.ಎಸ್.) ಗಾಗಿ ಕೈಬಿಡಲಾಯಿತು. ಪಕ್ಷಕ್ಕೆ ಅಖಿಲ ಭಾರತ ಸ್ವರೂಪವನ್ನು ಸ್ಥಾಪಿಸಲು ಮಹಾರಾಷ್ಟ್ರ, ಒಡಿಶಾ ಮತ್ತು ಇತರ ಸ್ಥಳಗಳಲ್ಲಿ ಅನಿಯಂತ್ರಿತ ದಾಳಿಗಳು ನಡೆದವು. ಟಿ.ಆರ್. ಎಸ್. ಒಳಗೆ ಅಸಮಾಧಾನವು ಹುದುಗುತ್ತಿದ್ದರೂ ಸಹ. ಆರು ತಿಂಗಳ ಹಿಂದೆ, ಬಿಜೆಪಿಯು ಬಿ.ಆರ್. ಎಸ್. ಗೆ ಪರ್ಯಾಯವಾಗಿ ಹೊರಹೊಮ್ಮುತ್ತಿರುವಂತೆ ಕಂಡು ಬಂದಿತು.

ಆದರೆ, ಮೇ ತಿಂಗಳಲ್ಲಿ ನಡೆದ ಕರ್ನಾಟಕ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನೊಂದಿಗೆ, ಮನಸ್ಥಿತಿ ಬದಲಾಯಿತು ಮತ್ತು ಕಾಂಗ್ರೆಸ್ ಎಲ್ಲಾ ಬಿ.ಆರ್.ಎಸ್. ವಿರೋಧಿ ಶಕ್ತಿಗಳನ್ನು ಒಂದು ಕಡೆ ತರಲು ಪ್ರಾರಂಭಿಸಿತು ಮತ್ತು ಕಾಂಗ್ರೆಸ್ ಈ ದೊಡ್ಡ ವಿಜಯವನ್ನು ದಾಖಲಿಸುವವರೆಗೂ ಆವೇಗ ಮುಂದುವರೆಯಿತು. ಆದಾಗ್ಯೂ, 2018 ರಲ್ಲಿ ಒಂದು ಸ್ಥಾನಕ್ಕೆ ಹೋಲಿಸಿದರೆ ಬಿಜೆಪಿ ಎಂಟು ಸ್ಥಾನಗಳನ್ನು ಗೆಲ್ಲುವ ಮೂಲಕ ತನ್ನ ಸ್ಥಾನವನ್ನು ಗಣನೀಯವಾಗಿ ಸುಧಾರಿಸಿಕೊಂಡಿದೆ ಮತ್ತು ಅದರ ಮತಗಳ ಪ್ರಮಾಣವನ್ನು ಶೇ 7 ರಿಂದ ಶೇ.13.9 ಕ್ಕೆ ಹೆಚ್ಚಿಸಿಕೊಂಡಿದೆ ಎಂಬುದನ್ನು ಗಮನಿಸಬೇಕು.

ಮಿಜೋರಾಂ ಚುನಾವಣೆಯು ಮಿಜೋ ನ್ಯಾಷನಲ್ ಫ್ರಂಟ್ (MNF) ನ ಮೂರು ದಶಕಗಳ ಆಳ್ವಿಕೆಯನ್ನು ಕೊನೆಗೊಳಿಸಿದೆ ಮತ್ತು ಹೊಸದಾಗಿ ರೂಪುಗೊಂಡ ಜೋರಾಮ್ ಪೀಪಲ್ಸ್ ಮೂವ್ಮೆಂಟ್ (ZPM) ಗೆಲುವನ್ನು ಕಂಡಿದೆ, ಇದು ವಿಧಾನಸಭೆಯ 40 ಸ್ಥಾನಗಳಲ್ಲಿ 27 ಸ್ಥಾನಗಳನ್ನು ಗೆದ್ದಿದೆ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಡಿಎ) ಭಾಗವಾಗಿದ್ದ ಎಂಎನ್‌ಎಫ್ ಗಿಂತ ಭಿನ್ನವಾಗಿ, ಜೆಪಿಎಂನ ನಿಯೋಜಿತ ಮುಖ್ಯಮಂತ್ರಿ ಲಾಲ್ದುಹೋಮ ಯಾವುದೇ ರಾಷ್ಟ್ರೀಯ ಮೈತ್ರಿಕೂಟಕ್ಕೆ ಸೇರುವುದಿಲ್ಲ ಎಂದು ಘೋಷಿಸಿದ್ದಾರೆ.

ಮೂರು ಹಿಂದಿ ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶವು ಮುಂದಿನ ಮೇ ತಿಂಗಳಲ್ಲಿ ನಡೆವ ಲೋಕಸಭೆ ಚುನಾವಣೆಯಲ್ಲಿ ಪ್ರತಿಫಲಿಸುವುದಿಲ್ಲ ಎಂಬ ಅಂಶವನ್ನು 2004 ಮತ್ತು 2014ರ ಚುನಾವಣೆಯಲ್ಲಿ ಕಂಡಿದ್ದೇವೆ.

ಕಾಂಗ್ರೆಸ್ ಮತ್ತು ಇತರ ಪ್ರಮುಖ ವಿರೋಧ ಪಕ್ಷಗಳು ಈ ಸೋಲಿನಿಂದ ಸರಿಯಾದ ಪಾಠಗಳನ್ನು ಕಲಿಯಬೇಕು ಮತ್ತು ಬಿಜೆಪಿ ವಿರೋಧಿ ಮತಗಳನ್ನು ಪರಿಣಾಮಕಾರಿಯಾಗಿ ಕ್ರೋಢೀಕರಣ ಮಾಡುವಂತಾಗಬೇಕು. ಜೊತೆಗೆ ಪರ್ಯಾಯವಾದ ರಾಜಕೀಯ, ಸೈದ್ಧಾಂತಿಕ ಮತ್ತು ಆರ್ಥಿಕ ನೀತಿಗಳ ನಿರೂಪಣೆಯನ್ನು ಮತ್ತು ಸೂಕ್ತ ಕ್ರಮಗಳನ್ನು ತೆಗೆದುಕೊಂಡಾಗ ಮಾತ್ರ 2024 ರ ಲೋಕಸಭಾ ಚುನಾವಣೆಯಲ್ಲಿ ನಿಜವಾಗಿಯೂ ಹೋರಾಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಹಿಂದುತ್ವ ಪ್ರಭಾವದ ಮತಗಳು ಮೆರೆಯುತ್ತವೆ. ಈ ರಾಜಕೀಯ ಸೂಕ್ಷ್ಮತೆಯನ್ನು ಬಿಜೆಪಿ ವಿರೋಧಿಸುವ ರಾಜಕೀಯ ಪಕ್ಷಗಳು ಪ್ರಮುಖವಾಗಿ, ಐ.ಎನ್.ಡಿ.ಐ.ಎ. (ಇಂಡಿಯಾ) ಒಕ್ಕೂಟವು ಅರಿಯಬೇಕು.

ಅನು: *ನಾಗರಾಜ ನಂಜುಂಡಯ್ಯ*

ಕೋಮುವಾದದ ಅಪಾಯ ಸೂಚಿಸುವ ಐದು ರಾಜ್ಯಗಳ ಚುನಾವಣಾ ಪಲಿತಾಂಶ: 2024ರ ಚುನಾವಣೆಗೆ ಎಚ್ಚರಿಕೆಯ ಗಂಟೆ

ಐದು ರಾಜ್ಯ ವಿಧಾನಸಭಾ ಚುನಾವಣಾ ಫಲಿತಾಂಶಗಳು ಎಲ್ಲಾ ಇಂಡಿಯಾ ಮೈತ್ರಿಕೂಟದ ಸದಸ್ಯರಿಗೆ ಕಠಿಣ ಎಚ್ಚರಿಕೆಯ ಗಂಟೆಯಾಗಿದೆ. ಉತ್ತರದ ಮೂರು ರಾಜ್ಯಗಳಲ್ಲಿನ ಕಾಂಗ್ರೆಸ್ಸಿನ ಸೋಲು ಮುಂಬರುವ ಸಾರ್ವತ್ರಿಕ ಚುನಾವಣೆಗೆ ಸರಿಯಾದ ಪಾಠ ಕಲಿಸಿದೆ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಶ್ರಮಿಸುತ್ತಿರುವ ಪಕ್ಷಗಳು ತಮ್ಮ ಪ್ರಯತ್ನವನ್ನು ಇಮ್ಮಡಿಗೊಳಿಸಬೇಕು ಎಂಬ ಅಂಶವನ್ನು ಐದು ರಾಜ್ಯಗಳ ಚುನಾವಣೆಯ ಫಲಿತಾಂಶ ಎತ್ತಿ ತೋರಿಸುತ್ತದೆ. ಆ ದೃಷ್ಟಿಯಿಂದ 'ಇಂಡಿಯಾ' ವೇದಿಕೆಯನ್ನು ಬಲಪಡಿಸುವ ಅಗತ್ಯವಿದೆ. ಸಂವಿಧಾನ, ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವವನ್ನು ಹಾಳು ಮಾಡುತ್ತಿರುವ ಬಿಜೆಪಿಯ ವಿರುದ್ಧ ಹೋರಾಡುವ ಎಲ್ಲಾ ಪಕ್ಷಗಳು ಮತ್ತು ಶಕ್ತಿಗಳು ಹೆಚ್ಚು ಒಗ್ಗಟ್ಟಿನಿಂದ ಒಗ್ಗೂಡಬೇಕು. ಮತೀಯವಾದದ ವಿರುದ್ಧ ಸ್ಪಷ್ಟವಾಗಿ ನಿಲ್ಲುವ ಸೈದ್ಧಾಂತಿಕ ಬದ್ಧತೆಯ ಬಗ್ಗೆ ಸ್ಪಷ್ಟತೆ ಇರಬೇಕು. 2024 ಇಂಡಿಯಾ ಮೈತ್ರಿಕೂಟಕ್ಕೆ ತನ್ನ ಅಸ್ತಿತ್ವದ ಹೋರಾಟವಾಗಲಿದೆ. ಐದು ರಾಜ್ಯಗಳ ಚುನಾವಣಾ ಫಲಿತಾಂಶಗಳ ಕುರಿತು ಒಂದು ವಿಶ್ಲೇಷಣೆ ಇಲ್ಲಿ.

ಸಿ.ಸಿದ್ದಯ್ಯ

ಮತ್ತೆ ಇನ್ನು ಕೆಲವೇ ತಿಂಗಳುಗಳಲ್ಲಿ ದೇಶದ ಸಾರ್ವತ್ರಿಕ ಚುನಾವಣೆಗೆ ತಾಲೀಮು ಎಂದು ಹೇಳಲಾಗುತ್ತಿರುವ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶಗಳು ಬಂದಿವೆ. ಈ ಪಲಿತಾಂಶಗಳು ಕೋಮುವಾದದ ಅಪಾಯವನ್ನು ಸೂಚಿಸುತ್ತಿವೆ. ಸಣ್ಣ ಈಶಾನ್ಯ ರಾಜ್ಯವಾದ ಮಿಜೋರಾಂ ಹೊರತುಪಡಿಸಿ, ಬಿಜೆಪಿ ಮೂರು ದೊಡ್ಡ ರಾಜ್ಯಗಳಾದ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್ಗಢವನ್ನು ಗೆದ್ದಿದೆ. ಕಳೆದ ಮೂರು ಚುನಾವಣೆಗಳಲ್ಲಿ ಕಾಂಗ್ರೆಸ್ ಈ ಮೂರು ರಾಜ್ಯಗಳಲ್ಲಿ ಗೆದ್ದಿತ್ತು. ಆದರೆ, ಬಿಜೆಪಿಯ ಪಿತೂರಿಗಳು ಮತ್ತು ಕಾಂಗ್ರೆಸ್ ಪಕ್ಷದೊಳಗಿನ ಆಂತರಿಕ ಕಚ್ಚಾಟದಿಂದಾಗಿ, ಅದು ಒಂದು ವರ್ಷದೊಳಗೆ ಮಧ್ಯಪ್ರದೇಶವನ್ನು ಕಳೆದುಕೊಂಡಿತು. ಐದು ವರ್ಷಗಳ ನಂತರ ಇಂದಿನ ಚುನಾವಣೆಯಲ್ಲಿ ಬಿಜೆಪಿಯು ರಾಜಸ್ಥಾನ ಮತ್ತು ಛತ್ತೀಸ್ಗಢವನ್ನು ಕಾಂಗ್ರೆಸ್ನಿಂದ ಗೆದ್ದುಕೊಂಡಿದ್ದಲ್ಲದೆ, ಮಧ್ಯಪ್ರದೇಶದಲ್ಲೂ ಅಧಿಕಾರವನ್ನು ಉಳಿಸಿಕೊಂಡಿದೆ. ಹಿಂದಿ ಮಾತನಾಡುವ ಮೂರು ರಾಜ್ಯಗಳಲ್ಲಿ ಧರ್ಮ ಸೇರಿದಂತೆ ಎಲ್ಲ ಭಿನ್ನ ತಂತ್ರಗಳನ್ನು ಬಳಸಿ ಬಿಜೆಪಿ ಗೆದ್ದಿದೆ. ರಾಜ್ಯಗಳಲ್ಲಿನ ಸ್ಥಳೀಯ ನಾಯಕರನ್ನು ಬದಿಗೊತ್ತಿ ಬಿಜೆಪಿ ಕೇಂದ್ರ ನಾಯಕತ್ವ ಎಲ್ಲೆಡೆ ಮಧ್ಯಪ್ರವೇಶಿಸಿದ್ದರಿಂದ ಪಕ್ಷದ ಕೇಂದ್ರೀಕರಣ ಹೆಚ್ಚಾಯಿತು. ಕಮಲ್ ನಾಥ್ ಮತ್ತು ದಿಗ್ವಿಜಯ್ ಸಿಂಗ್ ಮೃದು ಹಿಂದುತ್ವದ ಧೋರಣೆ ಹೊಂದಿದ್ದರೂ, ಮತದಾರರು ಅದನ್ನು ನಂಬಲಿಲ್ಲ. ಆ ರಾಜ್ಯಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಪ್ರಮುಖ ಕದನವಾಗಿತ್ತು.



ಕುಸಿಯುತ್ತಿರುವ ಬಿಜೆಪಿ, ಕಾಂಗ್ರೆಸ್ಸೇತರ ಪಕ್ಷಗಳ ಮತಗಳಿಕೆ

ಈ ಐದು ರಾಜ್ಯಗಳ ಚುನಾವಣಾ ಪಲಿತಾಂಶಗಳಲ್ಲಿ, ಎರಡು ದೊಡ್ಡ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಇತರೆ ಪಕ್ಷಗಳ ಮತದಾರರನ್ನು ತಮ್ಮತ್ತ ಸೆಳೆದುಕೊಂಡಿರುವ ಅಂಶವನ್ನು ನಾವಿಲ್ಲಿ ಗಮನಿಸಬೇಕು. ಕರ್ನಾಟಕದಲ್ಲಿ ನಡೆದ ಕಳೆದ ವಿಧಾನಸಭಾ ಚುನಾವಣೆಯಲ್ಲಿಯೂ ನಾವಿದನ್ನು ನೋಡಿದ್ದೇವೆ.

ರಾಜಸ್ತಾನ:

2018ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ರಾಜಸ್ತಾನದಲ್ಲಿ ಶೇ. 39.3 ಮತಗಳನ್ನು ಪಡೆದಿದ್ದರೆ, 2023 ರ ಚುನಾವಣೆಯಲ್ಲಿ ಶೇ. 39.7 ಮತಗಳನ್ನು ಪಡೆದಿದೆ. ಈ ಬಾರಿ ಕಾಂಗ್ರೆಸ್ ಶೇ. 0.4 ರಷ್ಟು ಹೆಚ್ಚು ಮತಗಳನ್ನು ಪಡೆದಿದೆ. ಬಿಜೆಪಿ ಕಳೆದ ಬಾರಿ ಶೇ. 38.8 ಇದ್ದಿದ್ದನ್ನು ಶೇ. 42ಕ್ಕೆ ಹೆಚ್ಚಿಸಿಕೊಂಡಿದೆ. ಬಿಜೆಪಿ ಮತ ಪ್ರಮಾಣ ಶೇ. 3.2 ರಷ್ಟು ಮತಗಳನ್ನು ಹೆಚ್ಚಿಸಿಕೊಂಡಿದೆ. ಒಟ್ಟಾರೆಯಾಗಿ ಈ ಎರಡೂ ಪಕ್ಷಗಳ ಮತಗಳಿಕೆ ಕಳೆದ ಬಾರಿಗಿಂತ ಶೇ. 3.6 ಹೆಚ್ಚು ಮತಗಳನ್ನು ಕಾಂಗ್ರೆಸ್ ಬಿಜೆಪಿಯೇತರ ಪಕ್ಷಗಳಿಂದ ಕಸಿದುಕೊಂಡಿವೆ.

ರಾಜಸ್ಥಾನದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ನ ಹೈರಾಣಗಳ ನಡುವೆ ಸೆಣಸಾಡಿದ ಸಿಪಿಎಂ ಹಲವೆಡೆ ಭಾರಿ ಮತಗಳನ್ನು ಪಡೆದಿರುವುದು ಗಮನಾರ್ಹ. ಹಿಂದಿಗಿಂತ ಮತ ಪ್ರಮಾಣ ಹೆಚ್ಚಾಗಿರುವುದು ಪಕ್ಷದ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಮಧ್ಯಪ್ರದೇಶ:

ಇಲ್ಲಿ ಕಾಂಗ್ರೆಸ್ ಈ ಬಾರಿ ಶೇ.0.5 ರಷ್ಟು ಕಡಿಮೆ ಗಳಿಸಿದೆ (ಶೇ. 40.4 ಮತ್ತು ಶೇ. 40.9). ಬಿಜೆಪಿ ಶೇ.7.4 ರಷ್ಟು ಹೆಚ್ಚು ಮತಗಳನ್ನು ಗಳಿಸಿದೆ (ಶೇ. 41 ರಿಂದ ಶೇ. 48.4 ಕ್ಕೆ). ಈ ರಾಜ್ಯದಲ್ಲಿ ಬಿಜೆಪಿ ಕಾಂಗ್ರೆಸ್ ನ ಮತಗಳ ಜೊತೆಗೆ ಇತರೆ ಪಕ್ಷಗಳ ಶೇ. 2.4ರಷ್ಟು ಮತಗಳನ್ನು ತನ್ನತ್ತ ಸೆಳೆದುಕೊಂಡಿದೆ.

ಛತ್ತೀಸಗಡ:

ಇಲ್ಲಿ ಕಾಂಗ್ರೆಸ್ ಈ ಬಾರಿ 1.1 ರಷ್ಟು ಕಡಿಮೆ ಗಳಿಸಿದೆ. (ಶೇ. 43 ರಿಂದ ಶೇ. 41.9 ಕ್ಕೆ). ಬಿಜೆಪಿ 13.2 ರಷ್ಟು ಹೆಚ್ಚು ಮತಗಳನ್ನು ಗಳಿಸಿದೆ. (ಶೇ. 33 ರಿಂದ ಶೇ. 46.2ಕ್ಕೆ). ಈ ರಾಜ್ಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಹೊರತಾದ ಇತರೆ ಪಕ್ಷಗಳು ಶೇ. 12.3ರಷ್ಟು ತಮ್ಮ ಮತಗಳನ್ನು ಕಳೆದುಕೊಂಡಿದೆ.

ಮಿಝೋರಾಂ:

ಇಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ 2 ಮತ್ತು ಕಾಂಗ್ರೆಸ್ 1 ಸ್ಥಾನಗಳನ್ನು ಮಾತ್ರ ಗಳಿಸಲು ಸಾಧ್ಯವಾಗಿದೆ. ಇಲ್ಲಿ ಝುಡ್.ಪಿ.ಎಂ. 27 ಮತ್ತು ಎಂ.ಎನ್.ಪಿ. 10 ಸ್ಥಾನಗಳಲ್ಲಿ ಜಯಗಳಿಸಿವೆ.

5 ರಾಜ್ಯಗಳಲ್ಲಿ ಕಾಂಗ್ರೆಸ್ 4.92 ಕೋಟಿ ಮತಗಳನ್ನು ಪಡೆದಿದ್ದರೆ, ಬಿಜೆಪಿ 4.81 ಕೋಟಿ ಮತಗಳನ್ನು ಪಡೆದಿದೆ.

ತೆಲಂಗಾಣ: ಕೋಮುವಾದದ ಅಪಾಯದ ಸೂಚನೆ

ಏತನ್ಮಧ್ಯೆ, ತೆಲಂಗಾಣದಲ್ಲಿ ಆಡಳಿತಾರೂಢ ಬಿಆರ್‌ಸ್ ವಿರುದ್ಧ ಕಾಂಗ್ರೆಸ್ ಅನಿರೀಕ್ಷಿತ ಗೆಲುವು ಸಾಧಿಸಿದೆ. ಕಾಂಗ್ರೆಸ್‌ಗೆ ಇದೊಂದೇ ಸಮಾಧಾನ. ತೆಲಂಗಾಣದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂದು ಬಡಾಯಿ ಕೊಚ್ಚಿಕೊಳ್ಳುವುದರ ಜೊತೆಗೆ ಪ್ರಧಾನಿ ಮೋದಿ, ಅಮಿತ್ ಶಾ, ನಡ್ಡಾ ಹೀಗೆ ಬಿಜೆಪಿಯ ಹಲವು ರಾಷ್ಟ್ರೀಯ ನಾಯಕರು ಮತ್ತು ಮುಖ್ಯಮಂತ್ರಿ ಪಡೆಗಳು ತೆಲಂಗಾಣದಲ್ಲಿ ಓಡಾಡಿದ್ದಾರೆ. ಆದರೆ, ಜನ ಬಿಜೆಪಿಯನ್ನು ಮೂರನೇ ಸ್ಥಾನಕ್ಕೆ ತಳ್ಳಿರುವುದು ಜಾತ್ಯಾತೀತರಿಗೆ ಸಂತಸದ ಸಂಗತಿ. ತೆಲಂಗಾಣದಲ್ಲಿ ಉಂಟಾಗಿರುವ ಅಡ್ಡಿಯಿಂದ ಬಿಜೆಪಿಯ ದಕ್ಷಿಣದ ನಿರೀಕ್ಷೆ ಹುಸಿಯಾಗಿದೆ.



ತೆಲಂಗಾಣದಲ್ಲಿ ಹತ್ತು ವರ್ಷಗಳಿಂದ ಅಧಿಕಾರದಲ್ಲಿರುವ ಬಿ.ಆರ್.ಎಸ್. ವಿರುದ್ಧ ಸಾರ್ವಜನಿಕರ ವಿರೋಧ, ಭ್ರಷ್ಟಾಚಾರ, ಕೌಟುಂಬಿಕ ಆಡಳಿತ, ನೆರೆಯ ಕರ್ನಾಟಕದಲ್ಲಿ ಜಯಭೇರಿ ಬಾರಿಸಿರುವುದು ಕಾಂಗ್ರೆಸ್ ಗೆಲುವಿನ ದಡಕ್ಕೆ ತಂದಿದೆ. ತೆಲಂಗಾಣದಲ್ಲಿಯೂ ಕಾಂಗ್ರೆಸ್ 'ಇಂಡಿಯಾ' ವೇದಿಕೆಯ ಪಕ್ಷಗಳನ್ನು ಜೊತೆಗೆ ಸೇರಿಸಿಕೊಳ್ಳಲಿಲ್ಲ.

ಮತ್ತೊಂದು ಆತಂಕದ ಸಂಗತಿಯೆಂದರೆ, ತೆಲಂಗಾಣದಲ್ಲಿ ಬಿಜೆಪಿ ಗೆ ಎಂಟು ಸ್ಥಾನಗಳು ಬಂದಿವೆ. 18 ಕ್ಷೇತ್ರಗಳಲ್ಲಿ ಎರಡನೇ ಸ್ಥಾನದಲ್ಲಿದೆ. ಒಟ್ಟಾರೆಯಾಗಿ ಬಿಜೆಪಿ ಗೆ ಶೇ. 13ರಷ್ಟು ಮತಗಳು ಬಂದಿರುವುದು ಕೋಮುವಾದದ ಬೆಳವಣಿಗೆಯ ಅಪಾಯದ ಸೂಚನೆಯಾಗಿದೆ.

ಕಾಂಗ್ರೆಸ್ ನ ಅಹಂಕಾರದ ನಡೆ

ಮೂರು ಹಿಂದಿ ರಾಜ್ಯಗಳಲ್ಲಿ ಪಕ್ಷದ

ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿ ಜಿಗಿತ

ಬುಡಕಟ್ಟು ಸ್ಥಾನಗಳಂತೆ, ಪರಿಶಿಷ್ಟ ಜಾತಿಗಳಿಗೆ ಮೀಸಲಾದ ಕ್ಷೇತ್ರಗಳು ಸಹ ಇತ್ತೀಚಿನ ರಾಜ್ಯ ಚುನಾವಣೆಯಲ್ಲಿ ಬಿಜೆಪಿ ಪರವಾಗಿ ಜಿಗಿತ ಕಂಡಿವೆ. ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್ಗಢ ಮತ್ತು ತೆಲಂಗಾಣದ 98 ಎಸ್ಸಿ–ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿ 57 ಗೆದ್ದಿದ್ದರೆ, ಕಾಂಗ್ರೆಸ್ 40 ಸ್ಥಾನಗಳನ್ನು ಗಳಿಸಿದೆ. 2018 ರಲ್ಲಿ ಬಿಜೆಪಿ ಈ ಪೈಕಿ 32 ಸ್ಥಾನಗಳನ್ನು ಮತ್ತು ಕಾಂಗ್ರೆಸ್ 45 ಸ್ಥಾನಗಳನ್ನು ಗೆದ್ದಿತ್ತು.

ದಲಿತರ ಪ್ರಾಥಮಿಕ ನೆಲೆಯಾಗಿರುವ ಬಹುಜನ ಸಮಾಜ ಪಕ್ಷದ ಮತಗಳಿಕೆಯನ್ನು ಇಲ್ಲಿ ಗಮನಿಸಬಹುದಾಗಿದೆ. ಈ ಸ್ಥಾನಗಳಲ್ಲಿ ಯಾವುದನ್ನಾದರೂ ಗೆಲ್ಲಲು ಅಥವಾ ಯಾರನ್ನಾದರೂ ಸೋಲಿಸಲು ಈ ಪಕ್ಷ ವಿಫಲವಾಯಿತು. ಇದು ಪ್ರತಿ ರಾಜ್ಯದಲ್ಲಿ 4% ಕ್ಕಿಂತ ಕಡಿಮೆ ಮತ ಹಂಚಿಕೆ ಮಾಡಿಕೊಂಡಿದೆ.

ಮಧ್ಯಪ್ರದೇಶದಲ್ಲಿ 35 ಎಸ್ಸಿ ಸ್ಥಾನಗಳಲ್ಲಿ, 2018 ರಲ್ಲಿ 18 ರಿಂದ ಈ ಬಾರಿ 26 ರಲ್ಲಿ ಬಿಜೆಪಿ ಗೆದ್ದಿದೆ. ಅದರ ಲಾಭವು ಕಾಂಗ್ರೆಸ್ ಕಳೆದುಕೊಂಡಿದ್ದರಲ್ಲಿ ಬಂದಿತು. ಕಾಂಗ್ರೆಸ್ 2018 ರಲ್ಲಿ 17 ರಿಂದ 9 ಎಸ್ಸಿ ಸ್ಥಾನಗಳಿಗೆ ಇಳಿದಿದೆ.

ರಾಜಸ್ಥಾನದಲ್ಲಿ, 2018 ರ ಚುನಾವಣೆಯಿಂದ ರಾಜ್ಯದ 34 ಎಸ್ಸಿ–ಮೀಸಲು ಸ್ಥಾನಗಳಲ್ಲಿ ಬಿಜೆಪಿ ಗಣನೀಯ ಸುಧಾರಣೆಯನ್ನು ದಾಖಲಿಸಿದೆ, ಇದು 12 ರಿಂದ 22 ಸ್ಥಾನಗಳಿಗೆ ಏರಿದೆ. ಕಾಂಗ್ರೆಸ್ 19 ಸ್ಥಾನಗಳಿಂದ 11 ಕ್ಕೆ ಕುಸಿದರೆ, ಬಿಜೆಪಿ ಬಂಡಾಯಗಾರ್ತಿ ರಿತು ಬನಾವತ್, ಬಯಾನಾದಿಂದ ಸ್ವತಂತ್ರವಾಗಿ ಸ್ಪರ್ಧಿಸಿ, ಕಳೆದ ಎಸ್ಸಿ ಸ್ಥಾನವನ್ನು ಗೆದ್ದಿದ್ದಾರೆ.

ತೆಲಂಗಾಣದಲ್ಲಿ 2018ರಲ್ಲಿ 2 ಎಸ್ಸಿ ಸ್ಥಾನಗಳಿದ್ದ ಕಾಂಗ್ರೆಸ್ ಈ ಬಾರಿ 14ಕ್ಕೆ ಏರಿದೆ. ದಲಿತ ಬಂಧು ಯೋಜನೆಯನ್ನು ತನ್ನ ಬುಟ್ಟಿಯಲ್ಲಿ ಹೊಂದಿದ್ದ ಆಡಳಿತಾರೂಢ ಭಾರತ್ ರಾಷ್ಟ್ರ ಸಮಿತಿ (BRS) 2018 ರಲ್ಲಿ 16 ರಿಂದ 5 ಎಸ್ ಸಿ ಸ್ಥಾನಗಳಿಗೆ ಕುಸಿಯಿತು.

ಛತ್ತೀಸ್ಗಢದ 10 ಎಸ್ಸಿ ಸ್ಥಾನಗಳಲ್ಲಿ, ಕಾಂಗ್ರೆಸ್ ಇನ್ನೂ 6 ಗೆದ್ದುಕೊಂಡಿದೆ (2018 ರಲ್ಲಿ 7 ರಿಂದ ಕಡಿಮೆ), ಆದರೆ ಬಿಜೆಪಿ ತನ್ನ ಸಂಖ್ಯೆಯನ್ನು 2 ರಿಂದ 4 ಕ್ಕೆ ದ್ವಿಗುಣಗೊಳಿಸಿದೆ.



ಸೋಲಿಗೆ ಕಾಂಗ್ರೆಸ್ ನ ಒಂಟಿ ಸಲಗದ ಪ್ರವೃತ್ತಿಗಳು ಪ್ರಮುಖ ಕಾರಣ. ಬಿಜೆಪಿಯನ್ನು ಸೋಲಿಸುವ ಉದ್ದೇಶದಿಂದ ರಾಷ್ಟ್ರಮಟ್ಟದಲ್ಲಿ 'ಇಂಡಿಯಾ' ವೇದಿಕೆ ರೂಪುಗೊಂಡಾಗ, ಚುನಾವಣೆಯಲ್ಲಿ ಆ ವೇದಿಕೆಯಲ್ಲಿ ಪಕ್ಷಗಳನ್ನು ಸೇರಿಸುವ ಪ್ರಮುಖ ಅಂಶವನ್ನು ಕಾಂಗ್ರೆಸ್ ತೆಗೆದುಕೊಂಡಿತು. ರಾಜಸ್ಥಾನದಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಗೆದ್ದಿರುವ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಮತಗಳ ಅಂತರ ಶೇಕಡಾ ಎರಡಕ್ಕಿಂತ ಕಡಿಮೆ. ಅಲ್ಲಿನ ಬಿಜೆಪಿ ವಿರುದ್ಧ ಕೆಲಸ ಮಾಡುತ್ತಿರುವ ಜಾತ್ಯಾತೀತ ಪಕ್ಷಗಳನ್ನು, ಕನಿಷ್ಠ ಪಕ್ಷ 'ಇಂಡಿಯಾ' ವೇದಿಕೆಯಲ್ಲಿರುವ ಪಕ್ಷಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು ಆ ಪಕ್ಷದ ಅಹಂಕಾರಕ್ಕೆ ಸಾಕ್ಷಿ. ರಾಜಸ್ಥಾನದಲ್ಲಿ ಕಾಂಗ್ರೆಸ್ ಪಕ್ಷದ ಸಾಂಸ್ಥಿಕ ಸಮಸ್ಯೆಗಳು ಮತ್ತು ಅದು ಜಾತ್ಯತೀತ ಪಕ್ಷಗಳನ್ನು ನಿರ್ಲಕ್ಷ್ಯ ಮಾಡಿದ ಪರಿಣಾಮ ಕಾಂಗ್ರೆಸ್ ಸೋಲಿಗೆ ಕಾರಣವಾಗಿದೆ. ಮಧ್ಯಪ್ರದೇಶದಲ್ಲಿ ಸಮಾಜವಾದಿ ಪಕ್ಷದಂತಹ ಜಾತ್ಯಾತೀತ ಪಕ್ಷಗಳನ್ನು ಸಂಪರ್ಕಿಸಲು ಕಾಂಗ್ರೆಸ್ ಗೆ ಸಾಧ್ಯವಾಗಲಿಲ್ಲ. ಛತ್ತೀಸ್ಗಢದಲ್ಲೂ ಇದೇ ಪರಿಸ್ಥಿತಿ. ಭ್ರಷ್ಟಾಚಾರ ಮತ್ತು ಜಾತಿ ವೈಷಮ್ಯ ಅಲ್ಲಿನ ಕಾಂಗ್ರೆಸ್ಗೆ ನೋವುಂಟು ಮಾಡಿದೆ. ಛತ್ತೀಸ್ಗಢದಲ್ಲಿ ಗೆದ್ದ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಮತಗಳ ಅಂತರ ಶೇಕಡಾ ಮೂರಕ್ಕಿಂತ ಕಡಿಮೆ ಇತ್ತು.

ಕಡಿಮೆ ಅಂದಾಜು ಅಪಾಯಕಾರಿ

ರಾಜ್ಯ ಚುನಾವಣೆಗಳು ಕಾಂಗ್ರೆಸ್ ಪಕ್ಷಕ್ಕೆ ಸೋಲುಣಿಸಿದ್ದರೂ, ರಾಷ್ಟ್ರೀಯ ಚುನಾವಣೆಗಳಲ್ಲಿ ಮೋದಿ ಅಂಶದ ಶಕ್ತಿಯನ್ನು ಕಡಿಮೆ ಅಂದಾಜು ಮಾಡುವುದು ಅಪಾಯಕಾರಿ. ಈ ಹಂತದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಶೇಕಡಾವಾರು ಮತಗಳ ವ್ಯತ್ಯಾಸವು ಬಹಳಷ್ಟು ಹೆಚ್ಚಾಗಿಲ್ಲ ಎಂದು ತೋರಬಹುದು. ಆದರೆ, ಒಂದು ಪಕ್ಷವು ಸ್ಥಾನದ ವಿಷಯದಲ್ಲಿ ಗೆಲುವು ಅಥವಾ ಸೋಲಿನ ಗಣನೀಯ ಅಂತರವನ್ನು ಹೊಂದಲು ಕೆಲವು ಅಂಕಗಳ ವ್ಯತ್ಯಾಸವಿದ್ದರೂ ಸಾಕು, ಇವು ಸೋಲು ಗೆಲುವನ್ನು ನಿರ್ಧರಿಸುತ್ತವೆ.

ರಾಹುಲ್–ಪ್ರಿಯಾಂಕಾ ನಾಯಕತ್ವವು ದೇಶದಲ್ಲಿ ಅವರ ಸ್ವೀಕಾರಾರ್ಹತೆಯ ಮಿತಿಗಳನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಎಲ್ಲಿಯವರೆಗೆ ರಾಹುಲ್ ಗಾಂಧಿಯವರು ಚುನಾವಣಾ ರಾಜಕೀಯವನ್ನು ನರೇಂದ್ರ ಮೋದಿಯವರೊಂದಿಗೆ ವೈಯಕ್ತಿಕ ಜಿದ್ದಾಜಿದ್ದು ಸ್ಪರ್ಧೆಯನ್ನಾಗಿ ಮಾಡುವುದನ್ನು ಮುಂದುವರೆಸುತ್ತಾರೋ, ಅಲ್ಲಿಯವರೆಗೆ ಫಲಿತಾಂಶವು ಇದುವರೆಗೆ ಇರುವುದಕ್ಕಿಂತ ಭಿನ್ನವಾಗಿರುವುದಿಲ್ಲ. ಇಂಡಿಯಾ ಬಣದಲ್ಲಿನ ಇತರ ಪಾಲುದಾರರಿಗೆ ಕಾಂಗ್ರೆಸ್ ಅಗತ್ಯವಾಗಿ ಕ್ಷೇತ್ರಗಳನ್ನು ಬಿಟ್ಟುಕೊಡಬೇಕಾಗಿರುವುದು ಅವಶ್ಯಕವಾದ ಫಲಿತಾಂಶವಾಗಿದೆ.

2024 ರ ಲೋಕಸಭಾ ಚುನಾವಣೆಗೆ ಉತ್ತರ ಪ್ರದೇಶವು ನಿರ್ಣಾಯಕವಾಗಿ ಉಳಿಯುವ ಮಟ್ಟಿಗೆ, "ಯುಪಿ ಪ್ರಿಯಾಂಕಾ ಗಾಂಧಿಯವರ ಸಾಮ್ರಾಜ್ಯವಲ್ಲ" ಎಂದು ಒಪ್ಪಿಕೊಳ್ಳುವುದನ್ನು ಕಾಂಗ್ರೆಸ್ ಕಲಿಯಬೇಕು. ಮಾಯಾವತಿಯವರನ್ನು ಮಾತುಕತೆಗೆ ತರಲು ಮತ್ತು ಅವರ ಮತ್ತು ಸಮಾಜವಾದಿ ಪಕ್ಷದ ನಡುವೆ ಒಂದು ವಿಧಾನವನ್ನು ರೂಪಿಸಲು ಪ್ರಿಯಾಂಕ ಗಾಂಧಿ ಸಿದ್ಧರಾಗಿರಬೇಕು.

ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಅಜ್ಞಾತ ಅಂಶಗಳಾಗಿವೆ, ಏಕೆಂದರೆ ಈ ರಾಜ್ಯಗಳು ಬಹಳ ಕಾಲ ರಾಷ್ಟ್ರಪತಿ ಆಳ್ವಿಕೆಗೆ ಒಳಪಟ್ಟಿವೆ. ದೆಹಲಿ ಮತ್ತು ಪಂಜಾಬ್ಗೆ ಸಂಬಂಧಿಸಿದಂತೆ, ನಾಯಕತ್ವವನ್ನು ನೀಡಬೇಕಾದ ಅರವಿಂದ್ ಕೇಜ್ರಿವಾಲ್ ಮೇಲಿನ ತನ್ನ ದ್ವೇಷವನ್ನು ಕಾಂಗ್ರೆಸ್ ನುಂಗುವುದು ಒಳ್ಳೆಯದು.

ರಾಜ್ಯಗಳು	ಬಿಜೆಪಿ	ಶೇ. ಮತ ಪ್ರಮಾಣ	ಕಾಂಗ್ರೆಸ್	ಶೇ. ಮತ ಪ್ರಮಾಣ
ಮಧ್ಯಪ್ರದೇಶ	2,11,16,197	48.4%	1,75,71,582	40.4%
ರಾಜಸ್ಥಾನ	1,65,24,787	42%	1,56,67,947	39.7%
ಛತ್ತೀಸ್‌ಗಢ	72,34,968	46%	66,02,586	41.9%
ತೆಲಂಗಾಣ	32,57,511	13%	92,35,792	39.40%
ಮಿಜೋರಾಂ	35,524	5.06%	1,46,113	20.82%
ಒಟ್ಟು	**4,81,68,987**		**4,92,24,020**	

ಸಂವಿಧಾನದ ಪುನರ್ನಿರ್ಮಾಣ ತಡೆಯಲಾದೀತೆ?

ಭಾಷೆ, ಸಮಾನ ನಾಗರೀಕ ಸಂಹಿತೆ (ಯುಸಿಸಿ), ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ಸಂವಿಧಾನದ ನಿಬಂಧನೆಗಳಂತಹ ಹಲವು ವಿಭಜಕ ವಿಷಯಗಳು ಮತ್ತೆ ಮುನ್ನೆಲೆಗೆ ಬರಬಹುದು, ಇದು ದೇಶದೊಳಗೆ ತೀವ್ರ ವಿಭಜನೆಗೆ ಕಾರಣವಾಗಬಹುದು. ಎರಡು ರಾಜ್ಯಗಳನ್ನು ಕಳೆದುಕೊಂಡ ನಂತರ, ಪ್ರತಿಪಕ್ಷಗಳು ಸಂವಿಧಾನದ ತಿದ್ದುಪಡಿಗಳನ್ನು ತಡೆಯುವ ಶಕ್ತಿಯನ್ನು ಹೊಂದಿರುವುದಿಲ್ಲ – ವಾಸ್ತವವಾಗಿ, ಸಂವಿಧಾನದ ಪುನರ್ನಿರ್ಮಾಣವನ್ನು ಸಹ. ಮುಂದಿನ ಕೆಲವು ತಿಂಗಳುಗಳಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಭಾರತೀಯ ರಾಜಕೀಯದ ಮೇಲೆ ದೀರ್ಘಕಾಲೀನ ಪರಿಣಾಮ ಬೀರುತ್ತವೆ.

ಇಂಡಿಯಾ ಮೈತ್ರಿಯು ಒಗ್ಗೂಡಿ, ಅದರ ಈ ಎಲ್ಲಾ ಕಾರ್ಯತಂತ್ರಗಳ ಹೊರತಾಗಿಯೂ, ಮೋದಿ ಪರಿಣಾಮವು ಅವರಿಗೆ ಇನ್ನೂ ತುಂಬಾ ಪ್ರಬಲವಾಗಿರಬಹುದು. ಮೈತ್ರಿಕೂಟ ಸೋತರೂ, ಸಂಸತ್ತಿನಲ್ಲಿ ಬಿಜೆಪಿಯ ಬಹುಮತವನ್ನು ಗಣನೀಯವಾಗಿ ತಗ್ಗಿಸಿದರೆ ಮಾತ್ರ ಅವರು ಇನ್ನೊಂದು ದಿನ ಹೋರಾಡಲು ಬದುಕುತ್ತಾರೆ. ಸಂಸತ್ತಿನ ಲೋಕಸಭಾ ಕ್ಷೇತ್ರಗಳ ಡಿಲಿಮಿಟೇಶನ್ 2026 ರ ನಂತರ ಅನುಸರಿಸುತ್ತದೆ. (ಜನಸಂಖ್ಯೆ ಆದಾರದಲ್ಲಿ ಕ್ಷೇತ್ರಗಳ ಮರುವಿಂಗಡನೆ). ಕುಟುಂಬ ಯೋಜನೆ ಕುರಿತು ಹಿಂದಿನ ಕೇಂದ್ರ ಸರ್ಕಾರಗಳ ಸಲಹೆಯನ್ನು ನಿಷ್ಠೆಯಿಂದ ಅನುಸರಿಸಿದ ದಕ್ಷಿಣ ಮತ್ತು ಇತರ ರಾಜ್ಯಗಳ ಬಲವು ಸಂಸತ್ತಿನಲ್ಲಿ ತೀವ್ರವಾಗಿ ಇಳಿಯುತ್ತದೆ. ಮುಂದಿನ ಕೆಲವು ದಶಕಗಳ ಕಾಲ ದೆಹಲಿಯನ್ನು ಆರಾಮವಾಗಿ ಆಳಬಹುದಾದ ಸಾಧ್ಯತೆಗಳಿಂದ ಬಿಜೆಪಿಗೆ ಇದು ಲಾಭಕರವಾಗಬಹುದು.

ವಿರೋಧ ಪಕ್ಷಗಳ ಏಕತೆಯ ಅಗತ್ಯವಿದೆ

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಶ್ರಮಿಸುತ್ತಿರುವ ಪಕ್ಷಗಳು ತಮ್ಮ ಪ್ರಯತ್ನವನ್ನು ಇಮ್ಮಡಿಗೊಳಿಸಬೇಕು ಎಂಬ ಅಂಶವನ್ನು ಐದು ರಾಜ್ಯಗಳ ಚುನಾವಣೆಯ ಫಲಿತಾಂಶ ಎತ್ತಿ ತೋರಿಸುತ್ತದೆ. ಆ ದೃಷ್ಟಿಯಿಂದ 'ಇಂಡಿಯಾ' ವೇದಿಕೆಯನ್ನು ಬಲಪಡಿಸುವ ಅಗತ್ಯವಿದೆ. ಸಂವಿಧಾನ, ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವವನ್ನು ಹಾಳು ಮಾಡುತ್ತಿರುವ ಪ್ಯಾಸಿಸ್ಟ್ ಮನೋಭಾವದ ಬಿಜೆಪಿಯ ವಿರುದ್ಧ ಹೋರಾಡುವ ಎಲ್ಲಾ ಪಕ್ಷಗಳು ಮತ್ತು ಶಕ್ತಿಗಳು ಹೆಚ್ಚು ಒಗ್ಗಟ್ಟಿನಿಂದ ಒಗ್ಗೂಡಬೇಕು. ಸಾಮಾಜಿಕ ನ್ಯಾಯ ಮತ್ತು ಕಲ್ಯಾಣ ಯೋಜನೆಗಳಿಂದ ಮಾತ್ರ ಬಿಜೆಪಿಯನ್ನು ಸೋಲಿಸಲಾಗುವುದಿಲ್ಲ ಎಂಬುದನ್ನು ಕಾಂಗ್ರೆಸ್ ಅರಿತುಕೊಳ್ಳಬೇಕು. ಮತೀಯವಾದದ ವಿರುದ್ಧ ಸ್ಪಷ್ಟವಾಗಿ ನಿಲ್ಲುವ ಸೈದ್ಧಾಂತಿಕ ಬದ್ಧತೆಯ ಬಗ್ಗೆ ಸ್ಪಷ್ಟತೆ ಇರಬೇಕು. ಮೃದು ಹಿಂದುತ್ವದಂತಹ ಅವಕಾಶವಾದವು ನಿಷ್ಪ್ರಯೋಜಕ, ಅನಾಹುತಕಾರಿ ಎಂಬುದನ್ನು ಅರಿತುಕೊಳ್ಳಬೇಕು. ಜೊತೆಗೆ, ರಾಜಕೀಯ, ಸಾಮಾಜಿಕ–ಆರ್ಥಿಕ ಅಭಿವೃದ್ಧಿ ದೃಷ್ಟಿಯ ಪರ್ಯಾಯ ದೋರಣೆಗಳನ್ನು ಕಲ್ಪಿಸುವುದರಲ್ಲಿ ಮೌಲ್ಯವಿದೆ. ಬಿಜೆಪಿಯನ್ನು ವಿರೋಧಿಸುವ ಎಡ ಮತ್ತು ಜಾತ್ಯತೀತ ಪಕ್ಷಗಳ ನಡುವೆ ಬಲವಾದ ವಿಶಾಲ ತಳಹದಿಯ ಏಕತೆಯ ಅಗತ್ಯವಿದೆ. ಈ ಐದು ರಾಜ್ಯಗಳ ಚುನಾವಣೆಯ ಫಲಿತಾಂಶ ದೇಶಕ್ಕೆ ಪಾಠವಾಗಿದೆ.

–(ವಿವಿಧ ಮೂಲಗಳ ಮಾಹಿತಿ ಆಧರಿಸಿ)

"ಚುನಾವಣಾ ಆಯೋಗವನ್ನು ನೈಜ ರಾಜಕೀಯೇತರ ಪ್ರಾಧಿಕಾರವಾಗಿ ಮಾಡಬೇಕಾಗಿದೆ"

ಎಲ್ಲ ಸಂಸತ್ ಸದಸ್ಯರಿಗೆ ಪ್ರತಿಷ್ಠಿತ ನಾಗರಿಕರ ಬಹಿರಂಗ ಪತ್ರದ ಮನವಿ

ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ (ನೇಮಕಾತಿ, ಸೇವಾ ಷರತ್ತುಗಳು ಮತ್ತು ಅಧಿಕಾರದ ಅವಧಿ) ಮಸೂದೆ, 2023 ಸಂಸತ್ತಿನ ಪ್ರಸಕ್ತ ಚಳಿಗಾಲದ ಅಧಿವೇಶನದಲ್ಲಿ ಚರ್ಚೆಗೆ ಬರುವ ಸಾಧ್ಯತೆಯಿದೆ. ಹಿಂದಿನ ಅನುಭವವನ್ನು ಪರಿಗಣಿಸಿದರೆ, ಈ ಮಸೂದೆಯನ್ನು ಹೆಚ್ಚಿನ ಚರ್ಚೆಯಿಲ್ಲದೆ ಅಂಗೀಕರಿಸುವ ಸಾಧ್ಯತೆಯಿದೆ. ಆದರೆ ಇದು ಜಾರಿಗೆ ಬಂದರೆ, ಅದು ಭಾರತದ ಪ್ರಜಾಪ್ರಭುತ್ವದ ಬುಡವನ್ನೇ ಕತ್ತರಿಸುತ್ತದೆ, ಏಕ ಪಕ್ಷ ಆಳ್ವಿಕೆಗೆ ದಾರಿ ಮಾಡಿಕೊಡುತ್ತದೆ ಎಂದು ಹಿರಿಯ ಅಧ್ಯಯನಕಾರರು, ನಿವೃತ್ತ ಉನ್ನತ ಸರಕಾರೀ ಅಧಿಕಾರಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಸಂಸತ್ ಸದಸ್ಯರಿಗೆ ಒಂದು ಬಹಿರಂಗ ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ನಮ್ಮ ಪ್ರಜಾಪ್ರಭುತ್ವದ ದೀರ್ಘಾವಧಿಯ ಯೋಗಕ್ಷೇಮ ಮತ್ತು ವಿಶ್ವಾಸಾರ್ಹತೆಯನ್ನು ಗಮನದಲ್ಲಿಟ್ಟುಕೊಂಡು, ಪಕ್ಷಬೇಧವಿಲ್ಲದೆ ಸಂಸತ್ ಸದಸ್ಯರು ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕು, ಚುನಾವಣಾ ಆಯೋಗವನ್ನು ನಿಜವಾಗಿಯೂ ಒಂದು ರಾಜಕೀಯೇತರ ಪ್ರಾಧಿಕಾರವನ್ನಾಗಿ ಮಾಡುವಂತೆ, ರಾಜಕೀಯ ಕಾರ್ಯಾಂಗದಿಂದ ಅದು ಸಂಪೂರ್ಣವಾಗಿ ಸ್ವತಂತ್ರವಾಗಿರುವಂತೆ, ಮುಕ್ತ ಮತ್ತು ನ್ಯಾಯಸಮ್ಮತವಾಗಿ ಚುನಾವಣೆಗಳನ್ನು ನಡೆಸಲು ಸಮರ್ಥವಾಗುವಂತೆ ಮಾಡಲು, ಆ ಮೂಲಕ ಎಲ್ಲಾ ರಾಜಕೀಯ ಪಕ್ಷಗಳ, ಮುಖ್ಯವಾಗಿ, ಭಾರತದ ಜನತೆಯ ವಿಶ್ವಾಸವನ್ನು ಹೊಂದಿರುವಂತೆ ಈ ಮಸೂದೆಯನ್ನು ಬದಲಿಸಬೇಕು ಎಂದು ಈ ಬಹಿರಂಗ ಪತ್ರ ಎಲ್ಲ ಸಂಸತ್ ಸದಸ್ಯರಿಗೆ ಮನವಿ ಮಾಡಿದೆ.

ಈ ಮಸೂದೆಯಲ್ಲಿನ ಅಂಶಗಳನ್ನು ಎಳೆಎ–ಎಳೆಯಾಗಿ ವಿಶ್ಲೇಷಿಸಿರುವ ಈ ಬಹಿರಂಗ ಪತ್ರ, ಒಟ್ಟಾರೆಯಾಗಿ ಹೇಳುವುದಾದರೆ, ಅವು ಈಗಿರುವಂತೆ "ಚುನಾವಣಾ ವ್ಯವಸ್ಥೆ ಕಾರ್ಯಾಂಗ ಸರ್ಕಾರದ ನಿಯಂತ್ರಣದಿಂದ ಹೊರಗಿರಬೇಕು" ಎಂಬ ಸಂವಿಧಾನದ ಸಭೆಯ ದೃಷ್ಟಿಕೋನಕ್ಕೆ ಸಾಕಷ್ಟು ನ್ಯಾಯವನ್ನು ಒದಗಿಸುವುದಿಲ್ಲ. ರಾಜಕೀಯ ಕಾರ್ಯಾಂಗಕ್ಕೆ ಬದ್ಧವಾಗಿರುವ ಚುನಾವಣಾ ಆಯೋಗವು ಭಾರತದ ಪ್ರಜಾಪ್ರಭುತ್ವದ ವಿಶ್ವಾಸಾರ್ಹತೆಯನ್ನು ಕುಗ್ಗಿಸುತ್ತದೆ ಎಂದು ಹೇಳುತ್ತ, ಚುನಾವಣಾ ಆಯೋಗದ ಸಮಗ್ರತೆಯನ್ನು ಎತ್ತಿಹಿಡಿಯಲು, ಈ ಕೆಳಗಿನ ಶಾಸಕಾಂಗ ಕ್ರಮಗಳನ್ನು ಪರಿಗಣಿಸಬೇಕಾಗಿದೆ ಎಂದು ಹೇಳಿದೆ:

ಸರ್ವೋನ್ನತ ನ್ಯಾಯಾಲಯ ಸೂಚಿಸಿದಂತೆ, ಭಾರತದ ಮುಖ್ಯ ನ್ಯಾಯಮೂರ್ತಿಯವರನ್ನು ಆಯ್ಕೆ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನಾಗಿ ಸೇರಿಸಲು ಅದರ ಸಂಯೋಜನೆಯನ್ನು ವಿಸ್ತರಿಸಲು ಮಸೂದೆಯ ಸೆಕ್ಷನ್ 7 ಅನ್ನು ಮಾರ್ಪಡಿಸಬೇಕು.

ಭಾರತದ ಚುನಾವಣಾ ಆಯೋಗದ ಸದಸ್ಯರ ಸ್ಥಾನಮಾನವನ್ನು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರ ಸ್ಥಾನಕ್ಕೆ ಏರಿಸಬೇಕು. ಇದಕ್ಕೆ ಮಸೂದೆಯ ಸೆಕ್ಷನ್ 10 ಅನ್ನು ಸೂಕ್ತವಾಗಿ ತಿದ್ದುಪಡಿ ಮಾಡಬೇಕು.

ಚುನಾವಣಾ ಆಯುಕ್ತರ ಪದಚ್ಯುತಿ ಪ್ರಕ್ರಿಯೆಯು ಮುಖ್ಯ ಚುನಾವಣಾ **ಪುಟ 10 ಕ್ಕೆ**

“ರೈತ ಚಳುವಳಿಯ ವಿರುದ್ಧ ಪ್ರತೀಕಾರಕ್ಕಿಳಿದಿರುವ ಮೋದಿ ಸರ್ಕಾರ: ಆಂದೋಲನವನ್ನು ಹತ್ತಿಕ್ಕುವ ಅಕ್ರಮ ತಂತ್ರ”

ಡಿಸೆಂಬರ್ 11ರಂದು ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಎಸ್‌ಕೆಎಂ ಕರೆ

ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)ದ ಕೌನ್ಸಿಲ್ ಸದಸ್ಯ ಮತ್ತು ರೈತ ನಾಯಕ ಯುಧವೀರ್ ಸಿಂಗ್ ಅಕ್ರಮ ಬಂಧನ ಮತ್ತು ಪ್ರಯಾಣ ನಿಷೇಧ ಮತ್ತು ಇತರ ಮುಖಂಡರನ್ನು ಕ್ರಿಮಿನಲ್ ಪ್ರಕರಣಗಳಲ್ಲಿ ಸಿಲುಕಿಸಿರುವುದು ಕೇಂದ್ರ ಸರ್ಕಾರ ನೀಡಿದ ಗಂಭೀರ ಭರವಸೆಗಳ ಉಲ್ಲಂಘನೆಯಾಗಿದೆ. ಎಸ್‌ಕೆಎಂ ಮತ್ತು ಕಾರ್ಮಿಕ ಸಂಘಟನೆಗಳ ರಾಷ್ಟ್ರವ್ಯಾಪಿ ಪ್ರತಿಭಟನೆಗಳ ಯಶಸ್ಸಿನಿಂದಾಗಿ ಮೋದಿ ಸರ್ಕಾರದ ಆತಂಕ ಹೆಚ್ಚಾಗಿದೆ. ಆದ್ದರಿಂದ ಅದು ರೈತ ನಾಯಕರ ವಿರುದ್ಧ ತನಿಖಾ ಸಂಸ್ಥೆಗಳು ಮತ್ತು ದೆಹಲಿ ಪೊಲೀಸರನ್ನು ಅಕ್ರಮವಾಗಿ ಬಳಸುತ್ತಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಡಿಸೆಂಬರ್ 2ರಂದು ದಿಲ್ಲಿಯಲ್ಲಿ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದರ ವಿರುದ್ಧ 11 ಡಿಸೆಂಬರ್ 2023 ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಯುತ್ತದೆ ಮತ್ತು ಜಿಲ್ಲಾಧಿಕಾರಿಗಳ ಮೂಲಕ ಭಾರತದ ರಾಷ್ಟ್ರಪತಿ ಮತ್ತು ಗೃಹ ಕಾರ್ಯದರ್ಶಿಗೆ ಜ್ಞಾಪಕ ಪತ್ರವನ್ನು ಸಲ್ಲಿಸಲಾಗುವುದು ಎಂದು ಅವರು ಪತ್ರಿಕಾ ಸಮ್ಮೇಳನದಲ್ಲಿ ಪ್ರಕಟಿಸಿದ್ದಾರೆ.

ರೈತರ ಚಳವಳಿಯ ವಿರುದ್ಧ ಯಾವುದೇ ಪ್ರತೀಕಾರದ ಕ್ರಮವನ್ನು ದೊಡ್ಡ ಪ್ರಮಾಣದ ಮತ್ತು ಶಾಂತಿಯುತ ಸಾಮೂಹಿಕ ಹೋರಾಟದ ಮೂಲಕ ಎದುರಿಸಲಾಗುವುದು ಎಂದು ಎಸ್‌ಕೆಎಂ ಹೇಳಿಕೆ ತಿಳಿಸಿದೆ.

ರೈತ ನಾಯಕರ ಮೇಲಿನ ದಮನದ ಈ ಕೆಳಗಿನ ಪ್ರಕರಣಗಳನ್ನು ಎಸ್‌ಕೆಎಂ ಗಮನಿಸಿದೆ:

1) ಎಸ್‌ಕೆಎಂ ನಾಯಕ ಮತ್ತು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಪ್ರಧಾನ ಕಾರ್ಯದರ್ಶಿ ಯುಧವೀರ್ ಸಿಂಗ್ ಅವರನ್ನು ನವೆಂಬರ್ 29, 2023 ರಂದು ಬೆಳಗಿನ ಜಾವ 2 ಗಂಟೆಗೆ ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 2020–21ರ ರೈತರ ಹೋರಾಟಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎಂಬ ಆಧಾರದ ಮೇಲೆ ಬಂಧಿಸಲಾಯಿತು. ಇದರಿಂದಾಗಿ ಅವರು ಅಂತರಾಷ್ಟ್ರೀಯ ರೈತರ ಸಮ್ಮೇಳನದಲ್ಲಿ ಭಾಗವಹಿಸಲು ಕೊಲಂಬಿಯಾಕ್ಕೆ ಪ್ರಯಾಣಿಸಲು ಸಾಧ್ಯವಾಗಲಿಲ್ಲ. ನಂತರ ರೈತರ ಚಳವಳಿಯ ತೀವ್ರ ವಿರೋಧದಿಂದಾಗಿ, ದೆಹಲಿ ಪೊಲೀಸರು ಅವರನ್ನು ಬಿಡುಗಡೆ ಮಾಡಬೇಕಾಗಿ ಬಂತು.
2) ಹರಿಯಾಣದ ರೋಹ್ತಕ್‌ನ ಬಿಕೆಯು ನಾಯಕ ವೀರೇಂದ್ರ ಸಿಂಗ್ ಹೂಡಾ ಅವರಿಗೆ 22 ನವೆಂಬರ್ 2023 ರಂದು ದಿಲ್ಲಿ ಪೊಲೀಸರಿಂದ ನೋಟಿಸ್ ಹೋಗಿದೆ, ದಿನಾಂಕ 26.11.2020 ರ ಎಫ್‌ಐಆರ್ ಸಂಖ್ಯೆ 522/2020 ಗೆ ಸಂಬಂಧಿಸಿದ ಪ್ರಕರಣದಲ್ಲಿ ಹಾಜರಾಗುವಂತೆ ಸೂಚಿಸಲಾಗಿತ್ತು. ಇಲ್ಲಿಯೂ ರೈತರ ದೃಢವಾದ ಪ್ರತಿಭಟನೆಯ ನಂತರ, ದಿಲ್ಲಿ ಪೊಲೀಸರು ನೋಟಿಸ್ ಹಿಂಪಡೆಯಲಾಗಿದೆ ಎಂದು ಸಾರ್ವಜನಿಕವಾಗಿ ಘೋಷಿಸಬೇಕಾಗಿ ಬಂತು.
3) 7 ಡಿಸೆಂಬರ್ 2022 ರಂದು, ಹೊಸ ದೆಹಲಿ ವಿಮಾನ ನಿಲ್ದಾಣದಲ್ಲಿ ಬಿಕೆಯು ನ ಅರ್ಜುನ್ ಬಲಿಯಾನ್ ನೇಪಾಳಕ್ಕೆ ಹೋಗುವುದನ್ನು ತಡೆಯಲಾಯಿತು.
4) ದಿಲ್ಲಿ ರೈತರ ಪ್ರತಿಭಟನೆಗೆ ಸಂಬಂಧಿಸಿದಂತೆ ಪಂಜಾಬ್‌ನ ಎಸ್‌ಕೆಎಂ ನಾಯಕರು, ಸತ್ನಾಮ್ ಸಿಂಗ್ ಬೆಹರು ಮತ್ತು ಹರಿಂದರ್ ಸಿಂಗ್ ಲೋಕೋವಾಲ್ ಅವರು ದೆಹಲಿಯ ಪಟಿಯಾಲಾ ಹೌಸ್ ಕೋರ್ಟ್‌ನಲ್ಲಿ ಕಾನೂನು ಪ್ರಕ್ರಿಯೆಗಳನ್ನು ಎದುರಿಸುತ್ತಿದ್ದಾರೆ.



ಕೇಂದ್ರ ಸರ್ಕಾರವು ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಅಗರ್ವಾಲ್ ಅವರು ಸಹಿ ಹಾಕಿದ್ದ 9 ಡಿಸೆಂಬರ್ 2021 ರ ಪತ್ರದ ಮೂಲಕ, ಉತ್ತರ ಪ್ರದೇಶ, ಉತ್ತರಾಖಂಡ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ ಮತ್ತು ಹರಿಯಾಣ ರಾಜ್ಯ ಸರ್ಕಾರಗಳು ರೈತ ಹೋರಾಟಕ್ಕೆ ಸಂಬಂಧಿಸಿದ ಎಲ್ಲ ಕೇಸುಗಳನ್ನು ಕೂಡಲೇ ಹಿಂತೆಗೆದುಕೊಳ್ಳಲು ಸಂಪೂರ್ಣವಾಗಿ ಒಪ್ಪಿರುವುದಾಗಿ ಹೇಳಿದ್ದರು. ಇದಲ್ಲದೆ, ಕೇಂದ್ರ ಸರ್ಕಾರ ಮತ್ತು ಅದರ ಸಂಸ್ಥೆಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳು ರೈತರ ಹೋರಾಟಕ್ಕೆ ಸಂಬಂಧಿಸಿದ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಲು ಸಹ ಒಪ್ಪಿಕೊಂಡಿದ್ದವು. ರೈತರ ಪ್ರತಿಭಟನೆ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರವು ಎಲ್ಲಾ ರಾಜ್ಯ ಸರ್ಕಾರಗಳಿಗೂ ಮನವಿ ಮಾಡಿತ್ತು.

ಎರಡನೆಯದಾಗಿ, ರಾಜ್ಯಸಭೆಯಲ್ಲಿ ಕೇಳಿದ 19 ಡಿಸೆಂಬರ್ 2022 ರ ಪ್ರಶ್ನೆ ಸಂಖ್ಯೆ 1158 ಗೆ ಉತ್ತರವಾಗಿ, ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಗೃಹ ಸಚಿವಾಲಯದಲ್ಲಿ ಸ್ವೀಕರಿಸಿದ ವರದಿಯ ಪ್ರಕಾರ ರೈತರ ವಿರುದ್ಧದ 86 ಪ್ರಕರಣಗಳನ್ನು ಹಿಂತೆಗೆದುಕೊಳ್ಳುವ ಪ್ರಸ್ತಾಪವಿದೆ ಎಂದು ಉತ್ತರಿಸಿದರು. ಹಾಗೆ ಮಾಡಲು ಗೃಹ ಸಚಿವಾಲಯ ಅನುಮತಿ ನೀಡಿದೆ. ಇದಲ್ಲದೇ ರೈತರ ಮೇಲೆ ರೈಲ್ವೇ ರಕ್ಷಣಾ ಪಡೆ ದಾಖಲಿಸಿರುವ ಎಲ್ಲಾ ಪ್ರಕರಣಗಳನ್ನು ಹಿಂಪಡೆಯುವಂತೆ ರೈಲ್ವೆ ಸಚಿವಾಲಯ ಸೂಚಿಸಿದೆ ಎಂದೂ ಹೇಳಿದ್ದರು.

ಸಂಸತ್ತಿನ ಮೂಲಕ ಎಸ್‌ಕೆಎಂ ಮತ್ತು ಇಡೀ ರಾಷ್ಟ್ರಕ್ಕೆ ಈ ಗಂಭೀರವಾದ ಲಿಖಿತ ಭರವಸೆಗಳನ್ನು ನೀಡಿದ್ದರೂ, ಮೋದಿ ಸರ್ಕಾರವು ರೈತ ಮುಖಂಡರ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆಯನ್ನು (ಎನ್‌ಐಎ) ನಿಯೋಜಿಸಿದೆ ಮತ್ತು ಎನ್‌ಐಎ ದೆಹಲಿಯಲ್ಲಿ ರೈತರನ್ನು ಬಂಧಿಸಿದೆ. ಸಂಘರ್ಷ ಸಂಬಂಧಿತ ಪ್ರಕರಣಗಳಲ್ಲಿ ಎಸ್‌ಕೆಎಂ ನಾಯಕರ ವಿರುದ್ಧ ಲುಕ್ ಔಟ್ ಸುತ್ತೋಲೆ (ಎಲ್‌ಒಸಿ) ಹೊರಡಿಸಲಾಗಿದೆ. ಈ ಬಗ್ಗೆ ಸರಕಾರ ಪಾರದರ್ಶಕವಾಗಿರಬೇಕು ಮತ್ತು ಎಲ್ಲಾ ಐಒಸಿ ಗಳನ್ನು ಸಾರ್ವಜನಿಕಗೊಳಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಎಸ್‌ಕೆಎಂ ಒತ್ತಾಯಿಸಿದೆ.

ರೈತ ಮುಖಂಡರನ್ನು ಕ್ರಿಮಿನಲ್ ಪ್ರಕರಣಗಳಲ್ಲಿ ಸಿಲುಕಿಸುವ ಪ್ರಸ್ತುತ ವಿಧಾನ ಮೋದಿ ಸರ್ಕಾರವು ನೀಡಿದ ಗಂಭೀರ ಭರವಸೆಯ ಸಂಪೂರ್ಣ ಉಲ್ಲಂಘನೆಯಾಗಿದೆ. ಇಂತಹ ಕ್ರಮವನ್ನು ಬಲವಾಗಿ ಖಂಡಿಸುವುದಾಗಿ ಹೇಳಿರುವ ಎಸ್‌ಕೆಎಂ ಮುಖಂಡರು ಕೇಂದ್ರ ಸರ್ಕಾರದ ಭರವಸೆಯನ್ನು ಉಲ್ಲಂಘಿಸಿ ಎನ್‌ಐಎ ಮತ್ತು ಇತರ ತನಿಖಾ ಸಂಸ್ಥೆಗಳನ್ನು ಏಕೆ ಬಳಸಲಾಗುತ್ತಿದೆ ಎಂಬುದನ್ನು ಗೃಹ ಸಚಿವ ಅಮಿತ್ ಶಾ ವಿವರಿಸಬೇಕು ಎಂದು ಒತ್ತಾಯಿಸಿದ್ದಾರೆ.

ದೆಹಲಿಯಲ್ಲಿ ನಡೆದ ರೈತರ ಹೋರಾಟವು ದೇಶೀಯ ಮತ್ತು ವಿದೇಶಿ ಕಾರ್ಪೊರೇಟ್ ಬಂಡವಾಳದ ಅಡಿಯಲ್ಲಿ ಕೃಷಿಯ ಕಾರ್ಪೊರೇಟೀಕರಣದ ಹೇರಿಕೆಯ ವಿರುದ್ಧ ರೈತರು ಮತ್ತು ಕೃಷಿ ಕಾರ್ಮಿಕರು ಮತ್ತು ಗ್ರಾಮೀಣ ಬಡವರ ಹಿತಾಸಕ್ತಿಗಳನ್ನು ರಕ್ಷಿಸಲು ನಡೆಸಿದ ಸಾಮೂಹಿಕ ಬಂಡಾಯವಾಗಿತ್ತು. ಇದು ಬ್ರಿಟಿಷ್ ವಸಾಹತುಶಾಹಿ ಆಡಳಿತದ ವಿರುದ್ಧ ಸ್ವಾತಂತ್ರ್ಯ ಹೋರಾಟದಂತೆಯೇ ದೇಶಭಕ್ತಿಯ ಚಳುವಳಿಯಾಗಿತ್ತು. ರೈತರ ಹೋರಾಟವನ್ನು ದೇಶವಿರೋಧಿ ಅಥವಾ ವಿದೇಶಿ ಹಣದ ಅಥವಾ ಭಯೋತ್ಪಾದಕ ಶಕ್ತಿಗಳಿಂದ ಬೆಂಬಲಿತವಾಗಿದೆ ಎಂದು ಬಿಂಬಿಸುವ ಮೋದಿ ಸರ್ಕಾರದ ಯಾವುದೇ ಪ್ರಯತ್ನವು ಜನವಿರೋಧಿ ಮತ್ತು ರಾಷ್ಟ್ರ ವಿರೋಧಿ ಕ್ರಮವಾಗಿದೆ, ಅದು ಯಶಸ್ವಿಯಾಗುವುದಿಲ್ಲ. ಭಾರತದ ರೈತರನ್ನು ಅವಮಾನಿಸುವ ಮತ್ತು ಅವರ ಚಳವಳಿಗಳನ್ನು ಅಪರಾಧೀಕರಿಸುವ ಇಂತಹ ನೀಚ ಪ್ರಯತ್ನವನ್ನು ಇಡೀ ದೇಶ ತಿರಸ್ಕರಿಸುತ್ತದೆ ಎಂದು ಎಸ್‌ಕೆಎಂ ಪುನರುಚ್ಚರಿಸಿದೆ.

ಎಸ್‌ಕೆಎಂ ಮತ್ತು ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಎಲ್ಲಾ ರಾಜಭವನಗಳ ಮುಂದೆ ಇತ್ತೀಚೆಗೆ ನಡೆಸಿದ ರಾಷ್ಟ್ರವ್ಯಾಪಿ ಪ್ರತಿಭಟನೆಗಳ ಗಮನಾರ್ಹ ಯಶಸ್ಸಿನಿಂದ ಮೋದಿ ಸರ್ಕಾರಕ್ಕೆ ಆತಂಕ ಉಂಟಾಗಿದೆ. ಎಂದಿರುವ ಎಸ್‌ಕೆಎಂ, ಅದರಿಂದಾಗಿ, ರೈತ ಮುಖಂಡರ ವಿರುದ್ಧ ತನಿಖಾ ಸಂಸ್ಥೆಗಳು ಮತ್ತು ದೆಹಲಿ ಪೊಲೀಸರನ್ನು ಅಕ್ರಮವಾಗಿ ಬಳಸಿಕೊಳ್ಳಲಾಗುತ್ತಿದೆ. ಅ2 + 50% ಆಧಾರದ ಮೇಲೆ ಕನಿಷ್ಠ ಬೆಂಬಲ ಬೆಲೆ, ಸಮಗ್ರ ಸಾಲ ಮನ್ನಾ, 4 ಕಾರ್ಮಿಕ ಸಂಹಿತೆ ರದ್ದತಿ, ವಿದ್ಯುತ್ ಬಿಲ್ 2022 ಹಿಂಪಡೆಯುವಿಕೆ ಮತ್ತು ಖಾಸಗೀಕರಣವನ್ನು ನಿಲ್ಲಿಸಬೇಕು ಎಂಬ ಹಕ್ಕೊತ್ತಾಯಗಳು ಸೇರಿದಂತೆ 21 ಅಂಶಗಳ ಹಕ್ಕೊತ್ತಾಯ ಪತ್ರದ ಮೇಲೆ ನಡೆಯುತ್ತಿರುವ ಹೋರಾಟವನ್ನು ಸಂಯುಕ್ತ ಕಿಸಾನ್ ಮೋರ್ಚಾ ತೀವ್ರಗೊಳಿಸುತ್ತದೆ ಮತ್ತು ಇದಕ್ಕಾಗಿ ಸಾಧ್ಯವಾದಷ್ಟು ವ್ಯಾಪಕವಾದ ಸಿದ್ಧತೆಗಳನ್ನು ಮಾಡಲು ರೈತರು, ಕೃಷಿ ಕಾರ್ಮಿಕರು ಮತ್ತು ಗ್ರಾಮೀಣ ಬಡವರಿಗೆ ಕರೆ ನೀಡಿರುವುದಾಗಿ ಹೇಳಿರುವ ಸಂಯುಕ್ತ ಕಿಸಾನ್ ಮೋರ್ಚಾ ರೈತರ ಆಂದೋಲನದ ವಿರುದ್ಧ ಸೇಡು ತೀರಿಸಿಕೊಳ್ಳಲು ಮುಂದಾಗಬಾರದು ಎಂದು ಮೋದಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಚುನಾವಣಾ ಆಯೋಗವನ್ನು ನೈಜ ರಾಜಕೀಯೇತರ ಪ್ರಾಧಿಕಾರವಾಗಿ..... ಪುಟ 9 ರಿಂದ


ಆಯುಕ್ತರಿಗೆ, ಅಂದರೆ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಿಗೆ ಅನ್ವಯವಾಗುವಂತೆಯೇ ಇರಬೇಕು. ಇದನ್ನು ವಿಭಾಗ 11(2) ರಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

ಶೋಧನಾ ಸಮಿತಿಯು, ಸೆಕ್ಷನ್ 6 ರಲ್ಲಿ ಒದಗಿಸಿದಂತೆ, ರಾಜಕೀಯ ಕಾರ್ಯಕಾರಿಣಿಯ ಆಡಳಿತಾತ್ಮಕ ನಿಯಂತ್ರಣದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳನ್ನು ಮಾತ್ರ ಒಳಗೊಂಡಿರುತ್ತದೆ. ಹುಡುಕಾಟ ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕವಾಗಿಸಲು, ಹುಡುಕಾಟ ಸಮಿತಿಯು ಪರಿಗಣಿಸುವ ಅಭ್ಯರ್ಥಿಗಳ ವಿವರಗಳನ್ನು ಮತ್ತು ಆಯ್ಕೆ ಪಟ್ಟಿಯಲ್ಲಿ ಸೇರ್ಪಡೆಗಾಗಿ ಮತ್ತು ಅವರ ಉಮೇದುವಾರಿಕೆಯನ್ನು ಗಣನೆಗೆ ತೆಗೆದುಕೊಂಡ ಅರ್ಹತೆಯ ಮಾನದಂಡಗಳನ್ನು ಆಯ್ಕೆ ಸಮಿತಿಯ ಮುಂದೆ ಇಡಬೇಕು ಮತ್ತು ರಾಜಕೀಯ ಪಕ್ಷಗಳು ಮತ್ತು ಸಾರ್ವಜನಿಕರು ನೋಡಲು ಸಾರ್ವಜನಿಕವಾಗಿ ಲಭ್ಯಗೊಳಿಸಬೇಕು. ಇದನ್ನು ಗಣನೆಗೆ ತೆಗೆದುಕೊಂಡು ಸೆಕ್ಷನ್ 6 ಅನ್ನು ತಿದ್ದುಪಡಿ ಮಾಡಬೇಕು.

ಪಟ್ಟಿಯಲ್ಲಿ ಒಳಗೊಂಡಿರುವ ವ್ಯಕ್ತಿಗಳನ್ನು ಹೊರತುಪಡಿಸಿ ಇತರರನ್ನು ಪರಿಗಣಿಸಲು ಆಯ್ಕೆ ಸಮಿತಿಗೆ ಅಧಿಕಾರ ನೀಡುವ ವಿಭಾಗ 8(2) ಅನ್ನು ಅಂತಹ ವ್ಯಕ್ತಿಗಳನ್ನು ಪರಿಗಣಿಸಲು ಕಾರಣಗಳನ್ನು ಆಯ್ಕೆ ಸಮಿತಿಯು ಉಲ್ಲೇಖಿಸಬೇಕು ಎನ್ನುವಂತೆ ವಿಧಿಸಲು ಸೂಕ್ತವಾಗಿ ತಿದ್ದುಪಡಿ ಮಾಡಬೇಕು. ಅಲ್ಲದೆ, ಆಯ್ಕೆ ಸಮಿತಿಯ ಪ್ರಕ್ರಿಯೆಗಳು ಸಾರ್ವಜನಿಕವಾಗಿ ಲಭ್ಯವಾಗುವಂತೆಯೂ ಸೆಕ್ಷನ್ 8(2) ನಲ್ಲಿ ತಿದ್ದುಪಡಿ ಮಾಡಬೇಕು. ನಡಾವಳಿಗಳು ನಿರ್ದಿಷ್ಟವಾಗಿ ಸದಸ್ಯರ ವೈಯಕ್ತಿಕ ಭಿನ್ನ ಮತದ ಅಭಿಪ್ರಾಯಗಳು, ಯಾವುದಾದರೂ ಇದ್ದರೆ, ಅವನ್ನು ಬಿಂಬಿಸಬೇಕು.

ತೆಗೆದುಕೊಂಡ ನಿರ್ಧಾರಗಳ ನಡಾವಳಿಗಳನ್ನು, ಸದಸ್ಯರ ವೈಯಕ್ತಿಕ ಭಿನ್ನಮತದ ಅಭಿಪ್ರಾಯಗಳು ಯಾವುದಾದರೂ ಇದ್ದರೆ, ಅವನ್ನೂ ಒಳಗೊಂಡಂತೆ, ಚುನಾವಣಾ ಆಯೋಗ ಸಾರ್ವಜನಿಕರಿಗೆ ಲಭ್ಯವಿರುವಂತೆ ಮಾಡಬೇಕು ಎಂದು ವಿಧಿಸುವಂತೆ ಸೆಕ್ಷನ್ 17(2) ಅನ್ನು ತಿದ್ದುಪಡಿ ಮಾಡಬೇಕು.

ಈ ಬಹಿರಂಗ ಪತ್ರಕ್ಕೆ ಭಾರತದ ಆಡಳಿತಾತ್ಮಕ ಸಿಬ್ಬಂದಿ ಮಹಾವಿದ್ಯಾಲಯ(ಎಎಸ್‌ಸಿಐ, ಹೈದರಾಬಾದ್)ದ ಮಾಜಿ ಪ್ರಿನ್ಸಿಪಾಲರಾದ ಇಎಎಸ್ ಶರ್ಮ, ಐಐಎಂ ಅಹ್ಮದಾಬಾದಿನ ನಿವೃತ್ತ ಪ್ರಾಧ್ಯಾಪಕ ಜಗದೀಪ್ ಎಸ್ ಛೊಕರ್, ಮಜ್ದೂರ್ ಕಿಸಾನ್ ಶಕ್ತಿ ಸಂಘಟನ್ ನ ಅರುಣಾ ರಾಯ್, ಜೆಎನ್‌ಯು ನ ಗೌರವ ಪ್ರಾಧ್ಯಾಪಕ ಪ್ರಭಾತ್ ಪಟ್ನಾಯಕ್, ಯೋಜನಾ ಆಯೋಗದ ಮಾಜಿ ಸದಸ್ಯ ಎಸ್ ಪಿ ಶುಕ್ಲ, ಮಾಧ್ಯಮ ವ್ಯಕ್ತಿ, ಡಾಕ್ಯುಮೆಂಟರಿ ಚಿತ್ರಗಳನ್ನು ನಿರ್ಮಿಸಿರುವ ಮತ್ತು ಸಾಮಾಜಿಕ ಕಾರ್ಯಕರ್ತರಾಗಿರುವ ಸುಹಾಸ್ ಬೊರ್ಕರ್, ನಿವೃತ್ತ ಸೇನಾಧಿಕಾರಿಗಳಾದ, ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ ಮತ್ತು ಅಡ್ಮಿರಲ್ ವಿಷ್ಣು ಭಾಗವತ್, ನಿವೃತ್ತ ಜೆಎನ್‌ಯು ಪ್ರಾಧ್ಯಾಪಕ ಅರುಣ್ ಕುಮಾರ್, ನಿವೃತ್ತ ಭಾರತೀಯ ರಾಯಭಾರಿ ಕೆ.ಪಿ. ಫೆಬಿಯನ್, ಸಾಹಿತ್ಯ ಅಕಾಡೆಮಿ ಪುಸ್ಕೃತ ಹಿಂದಿ ಕವಿ, ಸಾಂಸ್ಕೃತಿಕ ಕಾರ್ಯಕರ್ತ ಅಶೋಕ ವಾಜಪೇಯಿ, ಮಹಾರಾಷ್ಟ್ರದ ಪೊಲೀಸ್ ಮಹಾನಿರ್ದೇಶಕರಾಗಿದ್ದ ಮೀರನ್ ಚಢ ಬೊರ್ವಾಂಕರ್ ಮತ್ತು ಜೆಎನ್‌ಯುನ ನಿವೃತ್ತ ಪ್ರಾಧ್ಯಾಪಕ ಆನಂದ ಕುಮಾರ್ ಸಂಸತ್ ಸದಸ್ಯರಿಗೆ ಈ ಬಹಿರಂಗಕ್ಕೆ ಪತ್ರವನ್ನು ಬರೆದಿದ್ದಾರೆ.



ಕೋವಿಡ್-19 ರ ಸಾಂಕ್ರಾಮಿಕ ದಾಳಿಯ ಸಂದರ್ಭದಲ್ಲಿ ದೇಶದ ಜನತೆ ತೀವ್ರ ಆಹಾರದ ಬಿಕ್ಕಟ್ಟನ್ನು ಎದುರಿಸುತ್ತಿದ್ದಾಗ, ಜನರ ಹಸಿವು ನೀಗಿಸಲು ನೆರವಿಗೆ ಬಂದಿದ್ದೇ ಸರ್ಕಾರಿ ಗೋದಾಮುಗಳಲ್ಲಿ ಶೇಖರಿಸಿಟ್ಟಿದ್ದ ಲಕ್ಷಾಂತರ ಟನ್ ಆಹಾರ ಧಾನ್ಯಗಳು ಎಂಬುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಬಡತನ ರೇಖೆಯ ಕೆಳಗಿನ ಕುಟುಂಬಗಳಿಗೆ ನಿರ್ಧಿಷ್ಟ ಪ್ರಮಾಣದ ಧಾನ್ಯಗಳನ್ನು ಉಚಿತವಾಗಿ ವಿತರಣೆ ಮಾಡಲು ಈ ಸರ್ಕಾರಿ ಗೋದಾಮುಗಳ ಶೇಖರಣಾ ವ್ಯವಸ್ಥೆ ಕಾರಣ. ಆಹಾರ ಧಾನ್ಯಗಳ ಬೆಲೆ ಏರಿಕೆಗೆ ಕಡಿವಾಣ ಹಾಕಲೂ, ಬರ ಬಂದು ಆಹಾರ ಧಾನ್ಯಗಳ ಉತ್ಪನ್ನ ಕುಸಿತವಾದಗಲೂ ಜನರ ಹಸಿವು ನೀಗಿಸಲು ಇದು ನೆರವಿಗೆ ಬರುತ್ತದೆ. ಈ ಉದ್ದೇಶ ಇಟ್ಟುಕೊಂಡು ಮತ್ತು ಕೃಷಿ ವಲಯಕ್ಕೆ ಬೆಂಬಲ ಬೆಂಬಲವನ್ನು ಒದಗಿಸುವ ಗುರಿಯೊಂದಿಗೆ 1957 ರಲ್ಲಿ ಸ್ಥಾಪಿಸಲಾದ ಸರ್ಕಾರಿ ಗೋದಾಮುಗಳು ಮತ್ತು ವಿಶೇಷ ಕಾಯಿದೆಯ ಮೂಲಕ 1962 ರಲ್ಲಿ ಸ್ಥಾಪಿತವಾದ ಸೆಂಟ್ರಲ್ ವೇರ್‌ಹೌಸಿಂಗ್ ಕಾರ್ಪೊರೇಷನ್ (ಸಿಡಬ್ಲ್ಯೂಸಿ) ಸಂಸ್ಥೆಯನ್ನು ನಾಶಮಾಡಲು ಮೋದಿ ಸರ್ಕಾರ ಮುಂದಾಗಿದೆ. ಸರ್ಕಾರಿ ಗೋದಾಮುಗಳು ಸಂಪೂರ್ಣವಾಗಿ ಖಾಸಗಿಯವರ ತೆಕ್ಕೆಗೆ ಹೋದರೆ, ಖಾಸಗಿಯವರೇ ಆಹಾರ ಧಾನ್ಯಗಳ ಸಂಪೂರ್ಣ ದಾಸ್ತಾನು ಮಾಡಿದರೆ, ಕೊರೋನಾ ದಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಅಥವಾ ತೀವ್ರ ಬರಗಾಲ ಬಂದಾಗ ಜನರ ಹಸಿವು ನೀಗಿಸಲು, ಉಚಿತವಾಗಿ ಅಥವಾ ಜನರ ಕೈಗೆಟುವ ದರದಲ್ಲಿ ಧಾನ್ಯಗಳನ್ನು ಪೂರೈಸಲು ಸರ್ಕಾರದ ಬಳಿ ಏನೂ ಇರುವುದಿಲ್ಲ. ಪಡಿತರ ವ್ಯವಸ್ಥೆ ಎಂಬುದಂತೂ ಇರಲು ಸಾಧ್ಯವಿಲ್ಲ.

ಮೋದಿ-9 ವರ್ಷಗಳು-ಭಾಗ-29

ಸರ್ಕಾರಿ ಗೋದಾಮುಗಳ ಆಸ್ತಿ ಖಾಸಗಿಯವರಿಗೆ

ರೈತರಿಗೆ ಬೆಂಬಲ ಬೆಲೆ ಮತ್ತು ಪಡಿತರ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರಲಿದೆ

ಸಿ. ಸಿದ್ದಯ್ಯ

ಮೋದಿ ಅಧಿಕಾರಕ್ಕೆ ಬಂದ ನಂತರ ಲಾಭದಾಯಕವಾದ ಸಾರ್ವಜನಿಕ ಉದ್ಯಮಗಳನ್ನು ಖಾಸಗಿಯವರಿಗೆ ನಿಕೃಷ್ಟ ಬೆಲೆಗೆ ಮಾರಾಟ ಮಾಡುವ ಪ್ರಕ್ರಿಯೆ ವೇಗವಾಗಿ ನಡೆಯುತ್ತಿದೆ. ಇಂತಹ ಮಾರಾಟದ ಪ್ರಕ್ರಿಯೆಗೆ ಹಲವು ಆಕರ್ಷಕ ಹೆಸರುಗಳನ್ನು ಇಡತೊಡಗಿದ್ದಾರೆ. ಅಂತಹ ಹೆಸರುಗಳಲ್ಲಿ ಒಂದು 'ರಾಷ್ಟ್ರೀಯ ಆಸ್ತಿ ನಗದೀಕರಣದ ಯೋಜನೆ'. ಈ ಯೋಜನೆಯ ಒಳಗೆ ಸರ್ಕಾರಿ ಒಡೆತನದ ಗೋದಾಮುಗಳನ್ನೂ ಸೇರಿಸಿಬಿಟ್ಟಿದ್ದಾರೆ.

ರೂ. 2,400 ಕೋಟಿ ವಹಿವಾಟು ನಡೆಸುತ್ತಿರುವ ಕೇಂದ್ರ ಸರ್ಕಾರದ ಉದ್ಯಮವಾದ ಸೆಂಟ್ರಲ್ ವೇರ್‌ಹೌಸಿಂಗ್ ಕಾರ್ಪೊರೇಷನ್ (ಸಿಡಬ್ಲ್ಯೂಸಿ) ಮಿನಿ ರತ್ನ ವರ್ಗಕ್ಕೆ ಸೇರಿದೆ. CWC ಹೆಚ್ಚಾಗಿ FCI, NAFED, CCI, CMSS, ರಾಜ್ಯ ನಾಗರಿಕ ಸರಬರಾಜು ನಿಗಮಗಳು ಇತ್ಯಾದಿಗಳಿಗೆ ಆಹಾರ ಧಾನ್ಯಗಳ ಶೇಖರಣೆಯನ್ನು ಮಾಡುತ್ತಿದೆ.

ಕೇಂದ್ರ ಸರ್ಕಾರದ ಉದ್ಯಮವಾದ ಸೆಂಟ್ರಲ್ ವೇರ್‌ಹೌಸಿಂಗ್ ಕಾರ್ಪೊರೇಷನ್ ಅನ್ನು ಖಾಸಗೀಕರಣ ಮಾಡಲು ಮೋದಿ ಸರ್ಕಾರ ಮುಂದಾಗಿದೆ. ಕೇಂದ್ರದಲ್ಲಿ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ನಂತರ, ಸಾರ್ವಜನಿಕ ವಲಯದ ಸಂಸ್ಥೆಗಳ (ಪಿಎಸ್‌ಯು) ಆಸ್ತಿ ನಗದೀಕರಣದ ಯೋಜನೆಯನ್ನು ಸರ್ಕಾರ ತಂದಿದೆ. ಸರ್ಕಾರ ಆಸ್ತಿ ನಗದೀಕರಣ ಪೈಪ್ ಲೈನ್ ಯೋಜನೆಗಳನ್ನು ಒಂದೊಂದಾಗಿ ಜಾರಿಗೆ ತರುತ್ತಿದೆ. ಅದರ ಭಾಗವಾಗಿ ಸಿಡಬ್ಲ್ಯೂಸಿ ಗೋದಾಮುಗಳ ಖಾಸಗೀಕರಣ ಮಾಡಲು ಹೊರಟಿದೆ. ದೇಶಾದ್ಯಂತ 54 ಸಿಡಬ್ಲ್ಯೂಸಿ ಗೋದಾಮುಗಳಲ್ಲಿನ 344 ಎಕರೆ ಭೂಮಿಯನ್ನು ಖಾಸಗೀಕರಣಕ್ಕಾಗಿ ರಿಯಲ್ ಎಸ್ಟೇಟ್ ಸಲಹಾ ಸೇವಾ ಸಂಸ್ಥೆ 'ನೈಟ್ ಫ್ರಾಂಕ್' ಜೊತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಸಿಡಬ್ಲ್ಯೂಸಿ ಹೊಂದಿರುವ ಭೂಮಿಯಲ್ಲಿ ನೈಟ್ ಫ್ರಾಂಕ್ ಸುಮಾರು 2,152 ಕೋಟಿ ವೆಚ್ಚದಲ್ಲಿ ಸುಧಾರಿತ ಸೌಲಭ್ಯಗಳೊಂದಿಗೆ ಗೋಡೌನ್‌ಗಳನ್ನು ನಿರ್ಮಿಸುತ್ತದೆ. ಇದು 45 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಅವುಗಳನ್ನು ಸ್ವಾಧೀನಪಡಿಸಿಕೊಂಡು ವ್ಯವಹಾರ ಮಾಡುತ್ತದೆ.

ಸಿಡಬ್ಲ್ಯೂಸಿ ವಿವಿಧ ರಾಜ್ಯಗಳಲ್ಲಿ 572 ಎಕರೆ ಖಾಲಿ ಜಾಗವನ್ನು ಹೊಂದಿದೆ. ಸಾರ್ವಜನಿಕ ವಲಯದ ಸಂಸ್ಥೆಗಳಿಗೆ ದೇಶದಾದ್ಯಂತ ಇರುವ ಈ ಅತ್ಯಮೂಲ್ಯವಾದ ಭೂಮಿ ಮೇಲೆ ಕಾರ್ಪೊರೇಟ್ ಸಂಸ್ಥೆಗಳ ಕಣ್ಣು ಬಿದ್ದಿದೆ. ಸಾರ್ವಜನಿಕ ಒಡೆತನದ ಆಸ್ತಿಯನ್ನು ಖಾಸಗಿ ಬಂಡವಾಳಗಾರರಿಗೆ ನೇರವಾಗಿ ಮಾರಾಟ ಮಾಡಿದರೆ, ಅದು ಸಾರ್ವಜನಿಕರ ಆಸ್ತಿ ಮಾರಾಟ ಎಂಬ ಆರೋಪವನ್ನು ಸರ್ಕಾರ ಎದುರಿಸಬೇಕಾಗುತ್ತದೆ. ಇಂತಹ ಆರೋಪದಿಂದ ತಪ್ಪಿಸಿಕೊಳ್ಳಲು ಸರ್ಕಾರ ಹೊಸದೊಂದು ಮಾರ್ಗ ಕಂಡುಕೊಳ್ಳುತ್ತದೆ. ಅದೇ 'ರಾಷ್ಟ್ರೀಯ ಆಸ್ತಿ ನಗದೀಕರಣ ಪೈಪ್ ಲೈನ್'!! ಈ ಭೂಮಿ ಹೇಗೂ ಖಾಲಿಯಾಗಿ ಬಿದ್ದಿದೆ, ಇದನ್ನು ಒಂದು ನಿರ್ಧಿಷ್ಟ ವರ್ಷಗಳ ಅವಧಿಯವರೆಗೆ ಖಾಸಗಿ ಸಂಸ್ಥೆಗಳಿಗೆ ಕೊಡುತ್ತೇವೆ. ಆ ಸಂಸ್ಥೆಗಳು ಆ ಭೂಮಿಯಲ್ಲಿ ಸುಧಾರಿತ ಸೌಲಭ್ಯಗಳೊಂದಿಗೆ ಗೋದಾಮುಗಳನ್ನು ನಿರ್ಮಿಸುತ್ತದೆ. ಅದರಿಂದ ಬರುವ ಲಾಭದ ಶೇ. 5ರಷ್ಟನ್ನು ಸಿಡಬ್ಲ್ಯೂಸಿ ಗೆ ಕೊಡುತ್ತದೆ. "ನಾವು ಸಾರ್ವಜನಿಕರ ಆಸ್ತಿ ಮಾರಾಟ ಮಾಡುತ್ತಿಲ್ಲ, ಆ ಆಸ್ತಿಯಿಂದ ಹಣ ಗಳಿಸುತ್ತೇವೆ" ಎನ್ನುತ್ತದೆ ಸರ್ಕಾರ.



45 ವರ್ಷಗಳ ಗುತ್ತಿಗೆ!!

ರಾಷ್ಟ್ರೀಯ ಆಸ್ತಿ ನಗದೀಕರಣ ಪೈಪ್ ಲೈನ್ ಯೋಜನೆಯಡಿಯಲ್ಲಿ, ಸಿಡಬ್ಲ್ಯೂಸಿ ದೇಶಾದ್ಯಂತ ತನ್ನ ಗೋದಾಮುಗಳನ್ನು ಆಧುನೀಕರಿಸುತ್ತದಂತೆ. ಇದನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (PPP) ಮಾದರಿಯಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (DBFOT) ಮಾದರಿಯ ಅಡಿಯಲ್ಲಿ 45 ವರ್ಷಗಳ ರಿಯಾಯಿತಿ ಅವಧಿಗೆ ನೈಟ್ ಫ್ರಾಂಕ್ ಸಂಸ್ಥೆಗೆ ಕೊಟ್ಟಿದೆ. ಇದರ ನಿರ್ವಹಣೆಯಿಂದ ಬರುವ ಆದಾಯದ ಶೇ. 95 ರಷ್ಟು ಪಾಲು ಖಾಸಗಿ ಕಂಪನಿಗೆ, ಶೇ. 5ರಷ್ಟು ಪಾಲು ಮಾತ್ರ ಸರ್ಕಾರಿ ಸಂಸ್ಥೆಗೆ!!

"ದೇಶಾದ್ಯಂತ ಇರುವ ಸರ್ಕಾರಿ ಗೋದಾಮಿನ ಆಸ್ತಿಗಳು ದೊಡ್ಡ ಖಾಸಗಿ ಡೆವಲಪರ್‌ಗಳಿಗೆ ಆಕರ್ಷಕ ಹೂಡಿಕೆಯ ಮಾರ್ಗವಾಗಿವೆ. ಸಿಡಬ್ಲ್ಯೂಸಿ ಭೂಮಿ ಸಾಗಾಣಿಕೆಗೆ ಅನುಕೂಲಕರವಾದ ಆಯಕಟ್ಟಿನ ಸ್ಥಳಗಳಲ್ಲಿ ಲಭ್ಯವಿವೆ, ಇದು ಪ್ರೀಮಿಯಂ ಬೆಲೆ ಮೌಲ್ಯದಲ್ಲಿ ಲಭ್ಯವಿರುವ ಆಸ್ತಿ ವರ್ಗಕ್ಕೆ ಅದರ ಗುಣಲಕ್ಷಣದಿಂದಾಗಿ ಪರಿಣಾಮಕಾರಿ ಬೆಲೆ ಕಾರ್ಯಸಾಧ್ಯತೆಯನ್ನು ಒದಗಿಸುತ್ತದೆ. ಮತ್ತು ಡೆವಲಪರ್‌ಗಳಿಗೆ ತಮ್ಮ ವೇರ್‌ಹೌಸಿಂಗ್ ಬಂಡವಾಳವನ್ನು ದೇಶದ ಎಲ್ಲಾ ಭಾಗಗಳಲ್ಲಿಯೂ ವಿಸ್ತರಿಸಲು ಉತ್ತಮ ಅವಕಾಶವನ್ನು ಒದಗಿಸುತ್ತದೆ. ಒಟ್ಟು 572 ಎಕರೆ ಪ್ರದೇಶದಲ್ಲಿ 54 ಸ್ಥಳಗಳ ಅಭಿವೃದ್ಧಿಗೆ ಸುಮಾರು 2,152 ಕೋಟಿ ರೂ. ಬಂಡವಾಳ ಹೂಡಲಿದ್ದೇವೆ" ಎಂದು, ನೈಟ್ ಫ್ರಾಂಕ್ ಸಂಸ್ಥೆಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಗುಲಾಮ್ ಜಿಯಾ ಹೇಳಿದ್ದಾರೆ.

ಖಾಸಗಿ ಕಂಪನಿಗಳ ಸರಕು ಶೇಖರಣೆ

ಈ ಗೋದಾಮುಗಳಲ್ಲಿ ಆಹಾರ ಧಾನ್ಯಗಳ ಸಂಗ್ರಹಕ್ಕೆ ಮೊದಲ ಆದ್ಯತೆ ನೀಡಬೇಕು. ಅದರ ನಂತರ, ಸಾರ್ವಜನಿಕ ವಲಯದ ಕಂಪನಿಗಳ ಸರಕುಗಳನ್ನು ಸಂಗ್ರಹಿಸಲು ಅವಕಾಶ ನೀಡಬೇಕು. ಬಳಿಕ ಖಾಸಗಿ ಸಂಸ್ಥೆಗಳಿಗೆ ಬಾಡಿಗೆ ನೀಡಬೇಕು. ಸರ್ಕಾರಗಳು ಖಾಸಗೀಕರಣ ನೀತಿಗಳನ್ನು ಜಾರಿಗೆ ತಂದಾಗ ಈ ಆದ್ಯತೆಗಳು ಬದಲಾದವು. ಕೊನೆಗೆ ಪರಿಸ್ಥಿತಿ ಹದಗೆಟ್ಟಿದ್ದು, ಆಹಾರ ಧಾನ್ಯ ಸಂಗ್ರಹಕ್ಕೆ ಜಾಗವೇ ಇಲ್ಲ ಎನ್ನುವ ಸ್ಥಿತಿಗೆ ಬಂದು, ಖಾಸಗಿ ಕಂಪನಿಗಳು ಸರಕನ್ನು ಶೇಖರಿಸುತ್ತಿವೆ. ಮೋದಿ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಿಡಬ್ಲ್ಯೂಸಿ ಅನ್ನು ಹಣಗಳಿಕೆಯ ಪೈಪ್‌ಲೈನ್‌ನಲ್ಲಿ ಸೇರಿಸಿತು. ಅದರ ಭಾಗವಾಗಿ, ಸರ್ಕಾರವು ಗೋದಾಮುಗಳ ಖಾಸಗೀಕರಣದತ್ತ ಸಾಗುತ್ತಿದೆ, ಇದು ನೈಟ್ ಫ್ರಾಂಕ್ ಜೊತೆಗಿನ ಇತ್ತೀಚಿನ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಒಪ್ಪಂದದಿಂದ ದೃಢೀಕರಿಸಲ್ಪಟ್ಟಿದೆ.

ಆ ಭೂಮಿಯನ್ನು ಖಾಸಗಿ ಸಂಸ್ಥೆಗಳಿಗೆ ದಾನ ಮಾಡುವ ಮೋದಿ ಸರ್ಕಾರದ ಯೋಜನೆಯೇ ಹಣಗಳಿಕೆಯ ಪೈಪ್ ಲೈನ್ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅವುಗಳಲ್ಲಿ 344 ಎಕರೆಯನ್ನು ಮಾರಾಟ ಮಾಡಿ ಹಣ ಸಂಗ್ರಹಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಈ ಯೋಜನೆಯಲ್ಲಿ ನೈಟ್ ಫ್ರಾಂಕ್ ಎಂಬ ಖಾಸಗಿ ಸಂಸ್ಥೆ ಎರಡು ಸಾವಿರ ಕೋಟಿಗೂ ಹೆಚ್ಚು ಹೂಡಿಕೆ ಮಾಡಲಿದ್ದಾರೆ ಎನ್ನಲಾಗಿದೆ. ಹಿಂದೆ, CWC ಮತ್ತು ರಾಜ್ಯ ಉಗ್ರಾಣ ನಿಗಮ (SWC) ಗೋದಾಮಿನ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದ್ದವು. ಈಗ ಜಮೀನು, ಕಟ್ಟಡಗಳು ಮತ್ತು ಬಾಡಿಗೆ ನಿರ್ಧಾರ ಎಲ್ಲವೂ ಖಾಸಗಿ ಕಂಪನಿಗಳ ಪಾಲಾಗುತ್ತದೆ. ಕೇವಲ ನಾಮಮಾತ್ರದ ಗುತ್ತಿಗೆಯನ್ನು ತೆಗೆದುಕೊಳ್ಳುವ ಕೆಲಸ ಸಿಡಬ್ಲ್ಯೂಸಿ ಸಂಸ್ಥೆಯದಾಗಿದೆ.

ಖಾಸಗೀಕರಣಕ್ಕೆ 2015 ರಲ್ಲೇ ಸಿದ್ಧತೆ

ಲೋಕಸಭೆಯಲ್ಲಿ ಮಾರ್ಚ್ 2015 ರಲ್ಲಿ ಕೇಂದ್ರೀಯ ಉಗ್ರಾಣ ನಿಗಮಕ್ಕೆ ಸಂಬಂಧಿಸಿದ ಮಸೂದೆ ಅಂಗೀಕಾರವಾದಾಗಲೇ ಗೋದಾಮುಗಳ ಖಾಸಗೀಕರಣದ ವಾಸನೆ ಬಡಿಯಿತು. ಇದನ್ನು ವಿರೋಧ ಪಕ್ಷಗಳ ಸಂಸದರು ಪ್ರಶ್ನಿಸಿದರು. ಆದರೆ, ಈ ಶಾಸನವು ನಿಗಮಕ್ಕೆ ಹೆಚ್ಚಿನ ಆರ್ಥಿಕ ಸ್ವಾತಂತ್ರ್ಯವನ್ನು ನೀಡುವ ಗುರಿಯನ್ನು ಹೊಂದಿದೆ, ಇದು ಸರ್ಕಾರದ ಅನುಮೋದನೆಯನ್ನು ಪಡೆಯದೆಯೇ ರೂ. 500 ಕೋಟಿವರೆಗೆ ಖರ್ಚು ಮಾಡಲು ಮುಕ್ತವಾಗಿದೆ ಎನ್ನುತ್ತಾ, ಈ ಮಿನಿ ರತ್ನ ಕಂಪನಿಯನ್ನು ಖಾಸಗೀಕರಣಗೊಳಿಸುವ ಯಾವುದೇ ಕ್ರಮವನ್ನು ಗ್ರಾಹಕ ವ್ಯವಹಾರಗಳ ಸಚಿವ ರಾಮ್ ವಿಲಾಸ್ ಪಾಸ್ವಾನ್ ತಳ್ಳಿಹಾಕಿದರು.

ರೈತರಿಗೆ ಬೆಂಬಲ ಬೆಲೆ ಇರುವುದಿಲ್ಲ

ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಫ್‌ಸಿಐ), ಭಾರತ ಸರ್ಕಾರದ ನೋಡಲ್

ಪುಟ 14 ಕ್ಕೆ

ಆಸ್ತಿ ನಗದೀಕರಣದ ಪೈಪ್‌ಲೈನ್

ರಾಷ್ಟ್ರೀಯ ಆಸ್ತಿ ನಗದೀಕರಣದ ಪೈಪ್‌ಲೈನ್ (NMP) ಕುರಿತು ತಿಳಿಯೋಣ. ಕೇಂದ್ರ ಸಚಿವಾಲಯಗಳು ಮತ್ತು ಸಾರ್ವಜನಿಕ ವಲಯದ ಘಟಕಗಳ ಆಸ್ತಿ ನಗದೀಕರಣ ಪೈಪ್‌ಲೈನ್ ಅನ್ನು ಕೇಂದ್ರ ಸರ್ಕಾರ 2021 ರ ಆಗಸ್ಟ್ 23 ರಂದು ಪ್ರಾರಂಭಿಸಿತು. 2021-22 ರ ಕೇಂದ್ರ ಬಜೆಟ್ ನಲ್ಲಿ 'ಆಸ್ತಿ ನಗದೀಕರಣ' ವಿಷಯ ಪ್ರಸ್ತಾಪವಾಗಿತ್ತು.

ಈ ನಗದೀಕರಣ ಯೋಜನೆಯಲ್ಲಿ ರಸ್ತೆಗಳು, ಸಾರಿಗೆ ಮತ್ತು ಹೆದ್ದಾರಿಗಳು, ರೈಲ್ವೆ, ವಿದ್ಯುತ್, ಪೈಪ್‌ಲೈನ್ ಮತ್ತು ನೈಸರ್ಗಿಕ ಅನಿಲ, ನಾಗರಿಕ ವಿಮಾನಯಾನ, ಶಿಪ್ಪಿಂಗ್ ಬಂದರುಗಳು ಮತ್ತು ಜಲಮಾರ್ಗಗಳು, ದೂರಸಂಪರ್ಕ, ಆಹಾರ ಮತ್ತು ಸಾರ್ವಜನಿಕ ವಿತರಣೆ, ಗಣಿಗಾರಿಕೆ, ಕಲ್ಲಿದ್ದಲು ಮತ್ತು ವಸತಿ ಮತ್ತು ನಗರ ವ್ಯವಹಾರಗಳ ಆಸ್ತಿಗಳು ಸೇರಿವೆ. 2022 ರಿಂದ 2025 ರವರೆಗಿನ ನಾಲ್ಕು ಆರ್ಥಿಕ ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ಪ್ರಮುಖ ಆಸ್ತಿಗಳ ಮೂಲಕ 6 ಲಕ್ಷ ಕೋಟಿ ರೂಪಾಯಿಗಳ ಒಟ್ಟು ಹಣಗಳಿಕೆಯ ಸಾಮರ್ಥ್ಯವನ್ನು ಎಂಎನ್‌ಪಿ ಅಂದಾಜಿಸಿದೆ ಎಂದು ಅಂದು ಹೇಳಲಾಗಿದೆ.

2022-25 ರ ವರಗಿನ 4 ಆರ್ಥಿಕ ವರ್ಷಗಳಲ್ಲಿನ ಗುರಿ ರೂ.ಗಳಲ್ಲಿ ಹೀಗಿದೆ: ರಸ್ತೆ- 1,60,200 ಕೋಟಿ. ರೈಲ್ವೇ- 1,52,496 ಕೋಟಿ. ವಿದ್ಯುತ್ ಪ್ರಸರಣ- 45,200 ಕೋಟಿ. ವಿದ್ಯುತ್ ಉತ್ಪಾದನೆ- 39,832 ಕೋಟಿ. ನೈಸರ್ಗಿಕ ಅನಿಲ ಪೈಪ್‌ಲೈನ್- 24,462 ಕೋಟಿ. ದೂರಸಂಪರ್ಕ- 35,100 ಕೋಟಿ. ಉಗ್ರಾಣ- 28,900 ಕೋಟಿ. ಗಣಿಗಾರಿಕೆ- 28,747 ಕೋಟಿ. ನಾಗರಿಕ ವಿಮಾನಯಾನ- 20,782 ಕೋಟಿ. ಬಂದರುಗಳು- 12,828 ಕೋಟಿ. ಕ್ರೀಡಾಂಗಣ- 11,450 ಕೋಟಿ. ಹೀಗೆ 4 ವರ್ಷಗಳಲ್ಲಿ 6 ಲಕ್ಷ ಕೋಟಿ ರೂ ಆದಾಯ ಗಳಿಸುವ ಗುರಿ ಹೊಂದಲಾಗಿದೆ. ಸರ್ಕಾರದ ಮಾತಿನಲ್ಲಿ ಹೇಳುವುದಾದರೆ, ಆಸ್ತಿಯನ್ನು ಹಣವನ್ನಾಗಿ ಪರಿವರ್ತಿಸಲಾಗುತ್ತದೆ. ನೇರವಾಗಿ ಹೇಳುವುದಾದರೆ, 'ರಾಷ್ಟ್ರೀಯ ಆಸ್ತಿ ನಗದೀಕರಣದ ಪೈಪ್‌ಲೈನ್' ಎಂಬುದು, ಸಾರ್ವಜನಿಕ ಆಸ್ತಿಗಳ ಮಾರಾಟಕ್ಕೆ ಎಂಬುದಕ್ಕೆ ಬದಲಾಗಿ ಜನತೆಯನ್ನು ವಂಚಿಸಲು ಇಟ್ಟಿರುವ ಹೆಸರಾಗಿದೆ.

ಇದು ಅಮೃತ ಕಾಲ

ರೈಲ್ವೆಯ ನಂತರ ಈಗ ಯುಜಿಸಿ 'ಸೆಲ್ಫಿ ಪಾಯಿಂಟ್'ಗಳ 'ಸಂಭ್ರಮ'ವೂ

ದಲಿತ / ಒಬಿಸಿ ಡ್ರಾಪ್ ಔಟ್, ಮುಸ್ಲಿಂ ದಾಖಲಾತಿ ಇಳಿಕೆಯ 'ಹೆಮ್ಮೆ'ಯೂ



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಭಾರತದಲ್ಲಿ ಉನ್ನತ ಶಿಕ್ಷಣ ಸಂಸ್ಥೆಯ ನಿಯಂತ್ರಕ ಸಂಸ್ಥೆ ಕೇಂದ್ರ ಸರಕಾರದ ರೈಲ್ವೆ ಮತ್ತು ರಕ್ಷಣಾ ಇಲಾಖೆಯ ಮೇಲ್ಪಂಕ್ತಿಯನ್ನು ಅನುಕರಿಸ ಹೊರಟಿದೆ! ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ)ಯ ಕಾರ್ಯದರ್ಶಿಗಳು ಡಿಸೆಂಬರ್ 1ರಂದು ಎಲ್ಲ ಭಾರತೀಯ ವಿಶ್ವವಿದ್ಯಾಲಯಗಳ ಉಪಕುಲಪತಿಗಳಿಗೆ ವಿದ್ಯಾರ್ಥಿಗಳಲ್ಲಿ ಮತ್ತು ವಿದ್ಯಾಸಂಸ್ಥೆಗಳಿಗೆ ಭೇಟಿಕೊಡುವವರಲ್ಲಿ "ಸಾಮೂಹಿಕ ಹೆಮ್ಮೆ"ಯ ಭಾವನೆಯನ್ನು ಬಿತ್ತಲು ವಿ.ವಿ.ಗಳ ಪ್ರಮುಖ ಸ್ಥಳಗಳಲ್ಲಿ ಮೋದಿಯವರ ಭಾವಚಿತ್ರವಿರುವ 3-ಡಿ 'ಸೆಲ್ಫಿ ಪಾಯಿಂಟು'ಗಳನ್ನು ನಿರ್ಮಿಸಬೇಕು ಎಂದು ಪತ್ರ ಬರೆದಿರುವುದಾಗಿ ವರದಿಯಾಗಿದೆ.

"ನಿಮ್ಮ ಸಂಸ್ಥೆಯೊಳಗೆ ಒಂದು 'ಸೆಲ್ಫಿ ಪಾಯಿಂಟ'ನ್ನು ಸ್ಥಾಪಿಸಿ ನಮ್ಮ ದೇಶದ ವಿಸ್ಮಯಕಾರೀ ದಾಪು ಹೆಜ್ಜೆಗಳನ್ನು ಸಂಭ್ರಮಿಸೋಣ ಮತ್ತು ಪಸರಿಸೋಣ" ಎಂದಿರುವ ಈ ಪತ್ರ "ಯುವಜನರಲ್ಲಿ ವಿಭಿನ್ನ ರಂಗಗಳಲ್ಲಿ ಭಾರತದ ಸಾಧನೆಗಳ ಬಗ್ಗೆ, ವಿಶೇಷವಾಗಿ ರಾಷ್ಟ್ರೀಯ ಶಿಕ್ಷಣ ನೀತಿ 2020ರಡಿಯಲ್ಲಿ ಹೊಸ ಹೆಜ್ಜೆಗಳ ಬಗ್ಗೆ ಪರಿಜ್ಞಾನ ಮೂಡಿಸುತ್ತವೆ" ಎಂದಿದ್ದೆ.

ಮೊದಲಿಗೆ ಈ 3-ಡಿ ಸೆಲ್ಫಿ ಪಾಯಿಂಟುಗಳು ಹೇಗಿರಬೇಕು ಎಂಬ ಮಾದರಿಗಳನ್ನು ಕೂಡ ಕಳಿಸಲಾಗಿತ್ತು. ಆದರೆ ಇದು ಮುಂಬರುವ 2024ರ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ದೇಶದಲ್ಲಿನ ಎಲ್ಲ ಸಣ್ಣ-ದೊಡ್ಡ ಸಾಧನೆಗಳೂ ಒಬ್ಬ ಸರ್ವೋಚ್ಚ ವ್ಯಕ್ತಿಯಿಂದಾಗಿಯೇ, ಮುಂದೆಯೂ ಇವರೇ ಪ್ರಧಾನಿಗಳು ಎಂದು ಯುವಮಾನಸದಲ್ಲಿ ಬಿಂಬಿಸುವುದಕ್ಕಾಗಿ, ಇಲ್ಲವಾದರೆ ಇಂತಹ ವ್ಯಕ್ತಿಪೂಜೆಯ ಪ್ರಚಾರ ರೈಲ್ವೆ ಮತ್ತು ರಕ್ಷಣಾ ಇಲಾಖೆಯಂತಹ ಸಂಸ್ಥೆಗಳಂತೆ ಜ್ಞಾನಾರ್ಜನೆಯ, ಜ್ಞಾನವಿಸ್ತರಣೆಯ ಕೇಂದ್ರಗಳಾಗಬೇಕಿರುವ ವಿಶ್ವವಿದ್ಯಾಲಯಗಳಲ್ಲೂ ಏಕೆ ಎಂಬ ಟೀಕೆಗಳು ಬಂದ ನಂತರ ಮಾದರಿಗಳನ್ನು ವಾಪಾಸು ಪಡೆಯಲಾಗಿದೆ, ಆದರೆ ಸೆಲ್ಫಿ ಪಾಯಿಂಟುಗಳ ನಿರ್ದೇಶನ ಹಾಗೆಯೇ ಇದೆ ಎನ್ನಲಾಗಿದೆ.

13,000 ದಲಿತ/ಒಬಿಸಿ 'ಡ್ರಾಪ್‌ಔಟ್'ಗಳು!

ಇದರ ಬೆನ್ನಲ್ಲೇ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ವಿಶೇಷವಾಗಿ ಕೇಂದ್ರೀಯ ವಿವಿಗಳು, ಐಐಟಿಗಳು, ಐಐಎಂಗಳಲ್ಲಿ ವ್ಯಾಸಂಗ ಮಾಡುತ್ತಿದ್ದ 13 ಸಾವಿರಕ್ಕೂ ಹೆಚ್ಚು ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಮತ್ತು ಒಬಿಸಿ ವಿಭಾಗಗಳಿಗೆ ಸೇರಿದ ವಿದ್ಯಾರ್ಥಿಗಳು 'ಡ್ರಾಪ್‌ಔಟ್' ಆಗಿದ್ದಾರೆ, ಅಂದರೆ ಅರ್ಧದಲ್ಲೇ ಶಿಕ್ಷಣವನ್ನು ನಿಲ್ಲಿಸಿದ್ದಾರೆ ಎಂಬ ಸಂಗತಿಯನ್ನು ಸರಕಾರವೇ ಸಂಸತ್ತಿನಲ್ಲಿ ಒಪ್ಪಿಕೊಂಡಿದೆ. ನಿಜ, ಇದಕ್ಕೆ ಅಂತಹ ವಿದ್ಯಾರ್ಥಿಗಳಿಗೆ ಬೇರೆ ಶಿಸ್ತುಗಳಲ್ಲಿ ಪ್ರವೇಶಾತಿ ದೊರಕಿರುವುದು ಇತ್ಯಾದಿ ಕಾರಣ ಕೊಡಲಾಗಿದೆ. ಆದರೆ ಅದೇ ಉಸಿರಿನಲ್ಲಿ ಈ ಮಾಹಿತಿ ನೀಡಿದ ಮಂತ್ರಿಗಳು ಕಡಿಮೆ ಆದಾಯದ ಕುಟುಂಬಗಳ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರೆಸಲು ಸಹಾಯ ಮಾಡಲು, ಕ್ಯಾಂಪಸ್‌ಗಳಲ್ಲಿ ತಾರತಮ್ಯಗಳ ಪ್ರಶ್ನೆಗಳನ್ನು ಎದುರಿಸಲು ಸರಕಾರ ಏನೆಲ್ಲ ಮಾಡಿದೆ ಎಂದೂ ತಿಳಿಸ ಹೊರಟರು.

ಇತ್ತೀಚಿನ ವರ್ಷಗಳಲ್ಲಿ, ವಿಶೇಷವಾಗಿ 'ಅಚ್ಛೇ ದಿನ್' ಆಳ್ವಿಕೆ ಶುರುವಾದ ನಂತರ, ರೊಹಿತ್ ವೆಮುಲಾನಿಂದ ಹಿಡಿದು ಪಾಯಲ್ ತಡ್ವಿ ವರೆಗೆ ಐಐಟಿ, ಐಐಎಂ, ಕೇಂದ್ರೀಯ ವಿವಿಗಳಲ್ಲಿ ಜಾತಿವಾದಿ ಮತ್ತು ತಾರತಮ್ಯದ ಘಟನೆಗಳು, ಅದರಿಂದಾಗಿ ಆತ್ಮಹತ್ಯೆಗಳು ಸಂಭವಿಸುತ್ತಿರುವ ಬಹಳಷ್ಟು ವರದಿಗಳು ಬರುತ್ತಿವೆ. ಇವನ್ನೆಲ್ಲ ತಡೆಯಲು ರೊಹಿತ್ ವೆಮುಲಾ ಕಾಯ್ದೆಯನ್ನು ತರಬೇಕೆಂಬುದು ದೇಶದ ಪ್ರಮುಖ ವಿದ್ಯಾರ್ಥಿ ಸಂಘಟನೆಗಳ ಒಂದು ಪ್ರಮುಖ ಬೇಡಿಕೆ ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಮುಸ್ಲಿಂವಿದ್ಯಾರ್ಥಿಗಳ ದಾಖಲಾತಿಯಲ್ಲಿ 8.5% ಇಳಿಕೆ!

ಇದಕ್ಕೆ ಮೊದಲು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳ ದಾಖಲಾತಿಯಲ್ಲಿ 2021ರ ಒಂದೇ ವರ್ಷದಲ್ಲಿ 8.5% ಇಳಿಕೆಯಾಗಿದೆ ಎಂಬ ವರದಿ ಬಂದಿತ್ತು.

2019-20ರಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ಸಮುದಾಯದ 21ಲಕ್ಷ ವಿದ್ಯಾರ್ಥಿಗಳು ಪ್ರವೇಶ ಪಡೆದರೆ, 2020-21ರಲ್ಲಿ ಇದು 19.21ಲಕ್ಷಕ್ಕೆ ಇಳಿದಿದೆ. ಇತ್ತೀಚೆಗೆ ಪ್ರಕಟವಾಗಿರುವ "ಭಾರತದಲ್ಲಿ ಮುಸ್ಲಿಂ ಶಿಕ್ಷಣದ ಪರಿಸ್ಥಿತಿ" ಎಂಬ ವರದಿಯಲ್ಲಿ ಈ ಮಾಹಿತಿ ನೀಡಲಾಗಿದೆ. 'ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ'(ಎನ್‌ಐಇಪಿಎ) ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದ ಅರುಣ್ ಸಿ ಮೆಹ್ತ ಈ ವರದಿಯ ಲೇಖಕರು. ಅವರು ಯುಡಿಐಎಸ್‌ಇ+(ಶಿಕ್ಷಣ ಕುರಿತ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ) ಮತ್ತು ಅಖಿಲ ಭಾರತ ಉನ್ನತ ಶಿಕ್ಷಣ ಸರ್ವೆ ದತ್ತಾಂಶಗಳನ್ನು ಆಧರಿಸಿ ಈ ವರದಿಯನ್ನು ತಯಾರಿಸಿದ್ದಾರೆ.

ಇದು ಬಡತನದ ಪ್ರಮಾಣ ಹೆಚ್ಚಿರುವ ಮುಸ್ಲಿಂ, ದಲಿತ, ಒಬಿಸಿ ವಿಭಾಗಗಳಲ್ಲಿ ಮಾತ್ರವಲ್ಲ, ಇತರ ಬಡವಿಭಾಗಗಳಲ್ಲಿಯೂ, ಇಷ್ಟೊಂದು ತೀವ್ರವಾಗಿ ಅಲ್ಲದಿದ್ದರೂ, ಕಾಣಬರುವ ಸಂಗತಿ ಎಂದು ಬೇರೆ ಹೇಳಬೇಕಾಗಿಲ್ಲ. ಯುಜಿಸಿ ನಿರ್ದೇಶನ 'ಹೆಮ್ಮೆ' ಪಡಬೇಕು ಎನ್ನುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿ 2020 ಖಾಸಗೀಕರಣಕ್ಕೆ ಒತ್ತನ್ನು ಇನ್ನಷ್ಟು ಹೆಚ್ಚಿಸುವ ಮೂಲಕ ಇದನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ ಎಂಬುದು ಅದರ ಬಗ್ಗೆ ಇರುವ ಪ್ರಮುಖ ಆಕ್ಷೇಪಗಳಲ್ಲಿ ಒಂದು ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.

'ಸೆಲ್ಫಿ ಪಾಯಿಂಟು'ಗಳಲ್ಲಿ ಬಹುಶಃ ಆಳುವ ಮಂದಿಗಳ ಈ 'ಹೆಮ್ಮೆ'ಯನ್ನು ಸಂಭ್ರಮಿಸಬೇಕು ಎಂಬುದು ಯುಜಿಸಿಯ ನಿರ್ದೇಶನವಾಗಿರಬಹುದೇ?

2022-23 ರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಬ್ಯಾಂಕ್ ಸಾಲ ಮನ್ನಾಗಳು ದೊಡ್ಡ ಕಾರ್ಪೊರೇಟ್‌ಗಳದ್ದು

'ಅಚ್ಚೇದಿನ್'ಗಳ ಒಟ್ಟು ರೈಟ್-ಆಫ್ 15 ಲಕ್ಷ ಕೋಟಿ ರೂ.ಗಳು!

2022-23ರ ಹಣಕಾಸು ವರ್ಷದಲ್ಲಿ, ವಾಣಿಜ್ಯ ಬ್ಯಾಂಕ್‌ಗಳು ರೂ 2.09 ಲಕ್ಷ ಕೋಟಿ ಮೌಲ್ಯದ ಮರುಪಾವತಿಯಾಗುವ ನಿರೀಕ್ಷೆಯಿಲ್ಲದ ಸಾಲಗಳನ್ನು ರೈಟ್-ಆಫ್ ಮಾಡಿವೆ, ಅಂದರೆ ತಮ್ಮ ಲೆಕ್ಕ ಪುಸ್ತಕದಿಂದ ಹೊರಗಿಟ್ಟಿವೆ, ವಾಸ್ತವವಾಗಿ ಇದು ಆ ದೊಡ್ಡ ಕಾರ್ಪೊರೇಟ್‌ಗಳಿಗೆ ಮಾಡಿರುವ ಸಾಲಮನ್ನಾ ಎಂದು ಈ ರಂಗದ ತಜ್ಞರು ಹೇಳುತ್ತಾರೆ. ಅದರಲ್ಲಿ 52.3% ಅಥವಾ ರೂ 1.9 ಕೋಟಿ ದೊಡ್ಡ ಕೈಗಾರಿಕೆಗಳು ಮತ್ತು ಸೇವಾ ವಲಯಕ್ಕೆ ಸೇರಿದ ದೊಡ್ಡ ಸಂಸ್ಥೆಗಳದ್ದು ಎಂದು ಹಣಕಾಸು ರಾಜ್ಯ ಸಚಿವ ಭಾಗವತ್ ಕರದ್ ಲೋಕಸಭೆಗೆ ಡಿಸೆಂಬರ್ 4ರಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಕಳೆದ ಐದು ವರ್ಷಗಳಲ್ಲಿ, ಬ್ಯಾಂಕ್‌ಗಳು ಸುಮಾರು 10.6 ಲಕ್ಷ ಕೋಟಿ ರೂಪಾಯಿಗಳಷ್ಟು ಮನ್ನಾ ಮಾಡಿವೆ, ಅದರಲ್ಲಿ ಸುಮಾರು 50% ದೊಡ್ಡ ಕೈಗಾರಿಕಾ ಸಂಸ್ಥೆಗಳಿಗೆ ಸೇರಿದ್ದು. ಸುಮಾರು 2,300 ಸಾಲಗಾರರು, ತಲಾ 5 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಸಾಲವನ್ನು ಬಾಕಿಯಟ್ಟಿದ್ದು, ಅವರು ಉದ್ದೇಶಪೂರ್ವಕವಾಗಿ ಬಾಕಿಮಾಡಿರುವ ಸಾಲಗಳ ಮೊತ್ತ ಸುಮಾರು 2 ಲಕ್ಷ ಕೋಟಿ ರೂ.

ಅಂತಹ ಕಾರ್ಪೊರೇಟ್‌ಗಳ ಹೆಸರುಗಳನ್ನು ಕೇಳಿದಾಗ, ಸಚಿವರು ಸಾಲಮನ್ನಾ ಪಡೆದ ಕಂಪನಿಗಳ ಹೆಸರನ್ನು ಬಹಿರಂಗಪಡಿಸದಿರಲು ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಗಳನ್ನು ಉಲ್ಲೇಖಿಸಿದರು. "ಕಂಪನಿಗಳ ಹೆಸರಿಗೆ ಸಂಬಂಧಿಸಿದಂತೆ, ಆರ್‌ಬಿಐ ಕಾಯಿದೆ, 1934 ರ ಸೆಕ್ಷನ್ 45 ಇ ಅಡಿಯಲ್ಲಿ ಸಾಲಗಾರ-ವಾರು ಸಾಲ ಮಾಹಿತಿಯನ್ನು ಬಹಿರಂಗಪಡಿಸುವುದನ್ನು ನಿಷೇಧಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ" ಎಂದು ಸಚಿವರು ಹೇಳಿದರು.

2021-22 ರ ಹಣಕಾಸು ವರ್ಷದಲ್ಲಿ, ಒಟ್ಟು 1.75 ಲಕ್ಷ ಕೋಟಿ ರೂ.ಗೆ ಸಾಲಗಳ ರೈಟ್-ಆಫ್ ಆಗಿತ್ತು. ಅದರಲ್ಲಿ 39.8% ಅಥವಾ ರೂ. 69,533 ಕೋಟಿ ದೊಡ್ಡ ಕಾರ್ಪೊರೇಟ್ ವಲಯದ್ದು.

ಈ ರೀತಿಯ ಬ್ಯಾಂಕ್ ಸಾಲ ವಜಾಗಳಲ್ಲಿ ದೊಡ್ಡ ಕೈಗಾರಿಕೆಗಳು ಮತ್ತು ಸೇವೆಗಳ ಪಾಲು ಯಾವಾಗಲೂ ಅತ್ಯಧಿಕವಾಗಿದೆ ಎಂದು ಕಳೆದ ಐದು ವರ್ಷಗಳ ದತ್ತಾಂಶಗಳು ತೋರಿಸುತ್ತವೆ.

ಇಂಡಿಯನ್ ಎಕ್ಸ್‌ಪ್ರೆಸ್‌ನ ವರದಿ ಆರ್‌ಟಿಐ ಉತ್ತರದ ಭಾಗವಾಗಿ, ಆರ್‌ಬಿಐ ನಿಂದ ಪಡೆದಿರುವ ಅಂಕಿಅಂಶಗಳ ಪ್ರಕಾರ, ಹಣಕಾಸು ವರ್ಷ 2012-13 ರಿಂದ ಬ್ಯಾಂಕ್‌ಗಳು ರೈಟ್-ಆಫ್ ಮಾಡಿದ ಸಾಲಗಳ ಮೊತ್ತ 15,31,453 ಕೋಟಿ ರೂ. **ಇದು ಸಾಲಮನ್ನಾ ಅಲ್ಲ ಎನ್ನುತ್ತಾರೆ ಮಂತ್ರಿಗಳು. "ಬ್ಯಾಂಕ್‌ಗಳ ಪುಸ್ತಕಗಳಲ್ಲಿ ಮರುಪಾವತಿಯಾಗದ ಸಾಲಗಳಾಗಿ ಉಳಿಯುತ್ತವೆ, ಇವುಗಳ ವಸೂಲಿ ಪ್ರಯತ್ನ ಮುಂದುವರೆಯುತ್ತದೆ ಎನ್ನುತ್ತಾರೆ. ಆದರೆ ಆರ್‌ಬಿಐ ಒದಗಿಸಿರುವ ಮಾಹಿತಿಗಳ ಪ್ರಕಾರವೇ ಕಳೆದ ಮೂರು ವರ್ಷಗಳಲ್ಲಿ ಮನ್ನಾ ಮಾಡಿದ 5.87 ಲಕ್ಷ ರೂ.ಗಳಲ್ಲಿ ಕೇವಲ 1.09 ಲಕ್ಷ ಕೋಟಿ ರೂ.ಗಳನ್ನು ಬ್ಯಾಂಕ್‌ಗಳು ವಸೂಲಿ ಮಾಡಿದ್ದು, ಮೂರು ವರ್ಷಗಳ ಅವಧಿಯಲ್ಲಿ ಕೇವಲ ಶೇ.18.60ರಷ್ಟು ಸಾಲ ವಸೂಲಿ ಮಾಡಲು ಸಾಧ್ಯವಾಗಿದೆ.**

ಈ ನಡುವೆ, ಈ ವರ್ಷದ ಜೂನ್‌ನಲ್ಲಿ, ಆರ್‌ಬಿಐ ಬೇಕೆಂದೇ ಸುಸ್ತೀದಾರರಾಗುವವರೊಂದಿಗೆ "ರಾಜಿ ಇತ್ಯರ್ಥ" ದ ಸ್ಕೀಮನ್ನು ಪ್ರಸ್ತಾಪಿಸಿತ್ತು, ಇದನ್ನು ಬ್ಯಾಂಕ್ ನೌಕರರ ಸಂಘಟನೆಗಳು ತೀವ್ರವಾಗಿ ವಿರೋಧಿಸಿದವು.

ಇದು "ಕೇಂದ್ರ ಬ್ಯಾಂಕ್‌ನ ಹಾನಿಕಾರಕ ಹೆಜ್ಜೆ" ಎಂದು ಬಣ್ಣಿಸುತ್ತ, ಇದು ಇಡೀ ಬ್ಯಾಂಕಿಂಗ್‌ನ ಸಮಗ್ರತೆಗೆ ಧಕ್ಕೆ ತರುತ್ತದೆ, ಉದ್ದೇಶಪೂರ್ವಕವಾಗಿ ಸುಸ್ತೀದಾರರಾಗುವ ಅಪಾಯವನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಮಾಡುತ್ತಿರುವ ಪ್ರಯತ್ನಗಳನ್ನು ದುರ್ಬಲಗೊಳಿಸುತ್ತದೆ ಎಂದು ಅವು ಹೇಳಿದವು.

"ಉದ್ದೇಶಪೂರ್ವಕ ಸುಸ್ತಿದಾರರು ಬ್ಯಾಂಕ್‌ಗಳ ಆರ್ಥಿಕ ಸ್ಥಿರತೆ ಮತ್ತು ಒಟ್ಟಾರೆ ಆರ್ಥಿಕತೆಯ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರುತ್ತಾರೆ. ರಾಜಿ ಅಡಿಯಲ್ಲಿ ತಮ್ಮ ಸಾಲಗಳನ್ನು ಇತ್ಯರ್ಥಪಡಿಸಲು ಅವರಿಗೆ ಅವಕಾಶ ನೀಡುವ ಮೂಲಕ, ಆರ್‌ಬಿಐ ಮೂಲಭೂತವಾಗಿ ಅವರ ತಪ್ಪು ಕ್ರಮಗಳನ್ನು ಕ್ಷಮಿಸುತ್ತಿದೆ ಮತ್ತು ಅವರ ದುಷ್ಕೃತ್ಯಗಳ ಹೊರೆಯನ್ನು ಸಾಮಾನ್ಯ ನಾಗರಿಕರು ಮತ್ತು ಕಷ್ಟಪಟ್ಟು ಕೆಲಸ ಮಾಡುವ ಬ್ಯಾಂಕ್ ಉದ್ಯೋಗಿಗಳ ಹೆಗಲ ಮೇಲೆ ಹಾಕುತ್ತಿದೆ" ಎಂದು ನೌಕರರ ಸಂಘಟನೆಗಳು ಹೇಳಿದ್ದವು.


ಸಂಸತ್ತಿನ ಹಣಕಾಸು ಸ್ಥಾಯಿ ಸಮಿತಿಯು ಫೆಬ್ರವರಿ 2016 ರಲ್ಲಿ ಉದ್ದೇಶಪೂರ್ವಕ ಸುಸ್ತಿದಾರರ ಪ್ರಕರಣದಲ್ಲಿ, ನಾಮನಿರ್ದೇಶಿತ ಆರ್‌ಬಿಐ ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು ಮತ್ತು ಬ್ಯಾಂಕ್‌ಗಳ ಸಿಎಂಡಿಗಳ ಹೊಣೆಗಾರಿಕೆಯನ್ನು ಹೊಂದಿರಬೇಕು ಎಂದು ಶಿಫಾರಸು ಮಾಡಿತ್ತು ಎಂಬ ಸಂಗತಿಯತ್ತವೂ ಅವು ಗಮನ ಸೆಳೆದಿದ್ದವು.

"ಸ್ಥಾಯಿ ಸಮಿತಿಯು ಸೂಚಿಸಿದಂತೆ ಉದ್ದೇಶಪೂರ್ವಕ ಸುಸ್ತಿದಾರರ ಪಟ್ಟಿಯನ್ನು ಇನ್ನೂ ಪ್ರಕಟಿಸಲಾಗಿಲ್ಲ," ಎಂದಿರುವ ಸಂಘಟನೆಗಳು ಬ್ಯಾಕ್ ಆಡಳಿತ ಮಂಡಳಿಗಳಲ್ಲಿ ಕೆಲವು "ನಿರ್ಣಾಯಕ ಹುದ್ದೆಗಳು" ಇನ್ನೂ ಏಕೆ ಭರ್ತಿಯಾಗದೆ ಉಳಿದಿವೆ ಎಂದು ಆರ್‌ಬಿಐ ಅನ್ನು ಪ್ರಶ್ನಿಸಿದವು. ಇದರಿಂದಾಗಿ "ಮೊಟಕುಗೊಳಿಸಿದ ಬ್ಯಾಂಕ್ ಮಂಡಳಿಗಳು" ಯಾವುದೇ ವಿರೋಧವನ್ನು ಎದುರಿಸದೆ ತ್ವರಿತವಾಗಿ "ರಾಜಿ ಇತ್ಯರ್ಥ"ಗಳಿಗೆ ತಲುಪಲು ಕಾರಣವಾಗಬಹುದು" ಎಂದು ಎಚ್ಚರಿಸಿದವು ಕೂಡ.

ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ(ಎನ್‌ಸಿಆರ್‌ಬಿ) ಇತ್ತೀಚೆಗೆ ಪ್ರಕಟಿಸಿರುವ ದತ್ತಾಂಶಗಳ ಪ್ರಕಾರ 2022ರಲ್ಲಿ ಮಹಿಳೆಯರ ವಿರುದ್ಧ ಎಸಗಿದ ಅಪರಾಧಗಳ ಸಂಖ್ಯೆ 4,45,256 ಕಳೆದ ವರ್ಷ ಈ ಸಂಖ್ಯೆ 4,28,278 ಆಗಿತ್ತು. ಅಂದರೆ 4.% ಏರಿಕೆಯಾಗಿದೆ. 202)ರಲ್ಲಿ ಇದು 3,71,503.

ರಾಜ್ಯವಾರು ದತ್ತಾಂಶಗಳಲ್ಲಿ ಮೊದಲ ಸ್ಥಾನ ಪಡೆದಿರುವುದು ಒಂದು ಪ್ರಮುಖ ಡಬಲ್‌ಇಂಜಿನ್ ಸರಕಾರವಿರುವ ಉತ್ತರಪ್ರದೇಶ. ಅಲ್ಲಿ 65,743 ಪ್ರಕರಣಗಳು ದಾಖಲಾಗಿವೆ. ಈಗ ಮತ್ತೆ ಡಬಲ್ ಇಂಜಿನ್ ಆಗಿರುವ ರಾಜಸ್ತಾನದಲ್ಲಿ 45058, ಮಧ್ಯಪ್ರದೇಶದಲ್ಲಿ 32,765. ದಕ್ಷಿಣದ ಐದು ರಾಜ್ಯಗಳಲ್ಲಿ ಒಟ್ಟಾಗಿ ಇದು 89,802. ಇವು ದಾಖಲಾದ ಪ್ರಕರಣಗಳ ಸಂಖ್ಯೆಯಷ್ಟೇ ಎಂಬುದನ್ನು ಗಮನಿಸಬೇಕು.

ವ್ಯಂಗ್ಯಚಿತ್ರ ಕೃಪೆ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ





ಪಾಶ್ಚಾತ್ಯ ಉದಾರವಾದಿ ಚಿಂತನೆಯ ಇತಿಹಾಸದುದ್ದಕ್ಕೂ ಅದರ ಕೇಂದ್ರಸ್ಥಾನದಲ್ಲಿರುವುದು ಬಂಡವಾಳಶಾಹಿ ವ್ಯವಸ್ಥೆಯೇ. ಆದ್ದರಿಂದ ಅದು ಸಾಮ್ರಾಜ್ಯಶಾಹಿ ಯೋಜನೆಯಲ್ಲಿ ಸದಾ ಭಾಗಿಯಾಗಿತ್ತು ಮತ್ತು ಈಗಲೂ ಭಾಗಿಯಾಗಿದೆ. ಎರಡನೇ ಮಹಾಯುದ್ಧದ ನಂತರದ ಒಂದು ಸಣ್ಣ ಅವಧಿಯಲ್ಲಿ ಮಾತ್ರವೇ ಈ ಸಹಭಾಗಿತ್ವ ಇಲ್ಲವೆಂದೆನಿಸುತ್ತಿತ್ತು. ಕೀನ್ಸ್‌ವಾದದ ಅನುಸರಣೆಯ ಆ ಅವಧಿಯಲ್ಲಿ ಸಾಮ್ರಾಜ್ಯಶಾಹಿ ಯೋಜನೆಯೂ ಸ್ಥಗಿತವಾದಂತಿತ್ತು. ಹೀಗಿರುವಾಗ, ಈಗ ಇಸ್ರೇಲ್ ನಡೆಸುತ್ತಿರುವ ಜನಾಂಗೀಯ ಶುದ್ಧೀಕರಣ ಪ್ರಕ್ರಿಯೆಗೆ ಪಾಶ್ಚಾತ್ಯ ಉದಾರವಾದವು ನೀಡುತ್ತಿರುವ ಬೆಂಬಲದಲ್ಲಿ ಆಶ್ಚರ್ಯವಿಲ್ಲ. ಈ ಬೆಂಬಲದಲ್ಲಿರುವ ಹೊಸತನವೆಂದರೆ, ಈ ಬಾರಿ ಅದರಲ್ಲಿ ಬೂಟಾಟಿಕೆಯಿಲ್ಲ ಮತ್ತು ನೇರವಾಗಿದೆ, ಆಕ್ರಾಮಕವಾಗಿದೆ. ಆದರೆ ಈ ಬೆಂಬಲದ ಹಿಂದೆ ಯಹೂದಿಗಳಿಗೆ ಐತಿಹಾಸಿಕವಾಗಿ ಕೊಟ್ಟ ಉದಾರವಾದಿ ಕಿರುಕುಳದ ಬಗ್ಗೆ ಪಾಪ ಪ್ರಜ್ಞೆ ಇದ್ದಿರಲೂ ಬಹುದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಸಾಮ್ರಾಜ್ಯಶಾಹಿ ಯೋಜನೆಗೆ ಪಾಶ್ಚಾತ್ಯ ಉದಾರವಾದದ ಬೆಂಬಲ

ಗಾಝಾ ಪಟ್ಟಿಯಲ್ಲಿ ಇಸ್ರೇಲ್ ನಡೆಸುತ್ತಿರುವ ಜನಾಂಗೀಯ ಶುದ್ಧೀಕರಣದಲ್ಲಿ ಪಾಶ್ಚಾತ್ಯ ಉದಾರವಾದಿ ಬೂರ್ಜ್ವಾ ಸರ್ಕಾರಗಳ ಮತ್ತು ಪಾಶ್ಚಾತ್ಯ ಮಾಧ್ಯಮಗಳ ಪಾತ್ರವನ್ನು ಇತ್ತೀಚೆಗೆ ಪ್ರಸ್ತಾಪಿಸಿದ ಸ್ನೇಹಿತರೊಬ್ಬರು ಇದು ಪಾಶ್ಚಾತ್ಯ ಉದಾರವಾದದ ಅಂತ್ಯವನ್ನು ಸೂಚಿಸುತ್ತದೆ ಎಂದರು. ಇದಕ್ಕಿಂತ ದೊಡ್ಡ ತಪ್ಪು ಬೇರೆ ಇರಲಿಕ್ಕಿಲ್ಲ.. ವಿಶ್ವಾದ್ಯಂತ ಜರುಗಿದ ಸಾಮ್ರಾಜ್ಯಶಾಹಿಯ ಜನಾಂಗೀಯ ಶುದ್ಧೀಕರಣದ ಹಲವಾರು ಪ್ರಕರಣಗಳ ವಿರುದ್ಧ ಎಂದೂ ದನಿ ಎತ್ತದ ಪಾಶ್ಚಾತ್ಯ ಉದಾರವಾದವು ಸಾಮ್ರಾಜ್ಯಶಾಹಿ ಯೋಜನೆಗಳಲ್ಲಿ ಸದಾ ಭಾಗಿಯಾಗಿದೆ ಮತ್ತು ಅದರ ನಿಕಟ ಮಿತ್ರನಾದ ಇಸ್ರೇಲಿ ವಲಸಿಗ ವಸಾಹತುಶಾಹಿಯು ನಡೆಸುತ್ತಿರುವ ಜನಾಂಗೀಯ ಶುದ್ಧೀಕರಣದಲ್ಲಿ ಪಾಶ್ಚಾತ್ಯ ಉದಾರವಾದವು ವಹಿಸುತ್ತಿರುವ ಪಾತ್ರವು ಬಹುಮಟ್ಟಿಗೆ ಅದರ ಸ್ವಭಾವಕ್ಕನುಗುಣವಾಗಿದೆ. ನಿಜ, ಪಾಶ್ಚಾತ್ಯ ಉದಾರವಾದದ ಈ ಬೆಂಬಲ ಹೊಸದೇನಲ್ಲ. ಆದರೆ, ಈಗ ಅದರ ನಾಚಿಕೆಗೇಡಿತನ ಹೆಚ್ಚಿದೆ ಮತ್ತು ಅದನ್ನು ಹಳಸಲು ಬೂಟಾಟಿಕೆ ಮಾತುಗಳಲ್ಲಿ ಮರೆಮಾಚುವುದು ಕಮ್ಮಿಯಾಗಿದೆ. ಆದರೂ ಯಾವುದೇ ರೀತಿಯಲ್ಲೂ ಪಾಶ್ಚಾತ್ಯ ಸಉದಾರವಾದದ ಎಂದಿನ ನಿಲುವಿಗಿಂತ ಭಿನ್ನವಾಗಿಲ್ಲ.

ನಿಜ, ಬ್ರಿಟಿಷ್ ಸಾಮ್ರಾಜ್ಯಶಾಹಿಯು ಭಾರತವನ್ನು ದಾರಿದ್ರ್ಯಕ್ಕೆ ತಳ್ಳಿದ ಬಗ್ಗೆ ಅರಳು ಹುರಿದಂತೆ ಬರೆದ ಉದಾರವಾದಿ ಬರಹಗಾರ ವಿಲಿಯಂ ಡಿಗ್ಬಿಯಂಥ ಲೇಖಕರು ಅಲ್ಲೋ ಇಲ್ಲೋ ಕೆಲವರು ಇದಕ್ಕೆ ಅಪವಾದವಾಗಿದ್ದಾರೆ. ಅಂತವರ ಸಂಖ್ಯೆ ಬಹಳ ಕಡಿಮೆ. ಇದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ, ಉದಾರವಾದಿ ಚಿಂತನಾ ವಿಧಾನವು ಸಾಮ್ರಾಜ್ಯಶಾಹಿಯ ಸಮರ್ಥನೆಗೆ ನೆವಗಳನ್ನು ಒದಗಿಸುತ್ತದೆ. ಈ ಚಿಂತನೆಯ ಇತಿಹಾಸದುದ್ದಕ್ಕೂ ಅದರ ಕೇಂದ್ರಸ್ಥಾನದಲ್ಲಿರುವುದು ಬಂಡವಾಳಶಾಹಿ ವ್ಯವಸ್ಥೆಯೇ. ಕೀನ್ಸ್‌ವಾದ ಅನುಸರಣೆಯಲ್ಲಿದ್ದ ಒಂದು ಸಣ್ಣ ಕಾಲಾವಧಿಯನ್ನು ಹೊರತುಪಡಿಸಿ (ಈ ಬಗ್ಗೆ ನಂತರ ಚರ್ಚಿಸೋಣ), ಬಂಡವಾಳಶಾಹಿಯು ಒಂದು ಸ್ವಯಂಪೂರ್ಣ, ಸೌಮ್ಯ ಮತ್ತು ದಕ್ಷ ವ್ಯವಸ್ಥೆ ಮತ್ತು ಅದು ಸಾಮ್ರಾಜ್ಯಶಾಹಿಯನ್ನು ಅವಲಂಬಿಸಿಲ್ಲ ಎಂಬ ಗ್ರಹಿಕೆ. ಸಾಮ್ರಾಜ್ಯಶಾಹಿಯು ಒಂದು ವಾಸ್ತವ ಎಂದಾದರೆ, ಕೆಲವು ಆಕಸ್ಮಿಕ ಬೆಳವಣಿಗೆಗಳು ಕಾರಣವಾಗಿರುತ್ತವೆ ಅಥವಾ ವಸಾಹತುವಾಸಿಗಳನ್ನು ನಾಗರೀಕರನ್ನಾಗಿಸುವ ಒಂದು ನಿರ್ದಿಷ್ಟ ಗುರಿ ಇರುತ್ತದೆ. ಸಾಮ್ರಾಜ್ಯಶಾಹಿಯ ಆರಂಭವು ಒಂದು ವೇಳೆ ಕೇವಲ ಒಂದು ಆಕಸ್ಮಿಕವೇ ಆಗಿದ್ದರೂ, ನಾಗರೀಕರನ್ನಾಗಿಸುವ ಕೈಂಕರ್ಯವನ್ನು ಅದು ಕೈಗೆತ್ತಿಕೊಳ್ಳುತ್ತದೆ.

ಆದ್ದರಿಂದ ಜನಾಂಗೀಯ ಶುದ್ಧೀಕರಣದಂತಹ ಸಾಮ್ರಾಜ್ಯಶಾಹೀ ಹೀನ ಕೃತ್ಯಗಳು ಕೆಲವು ನಿರ್ದಿಷ್ಟ ವ್ಯಕ್ತಿಗಳು ಎಸಗಿದ ಅತಿರೇಕಗಳಾಗಿರುತ್ತವೆ ಅಥವಾ, ನಾಗರೀಕರನ್ನಾಗಿಸುವ ತನ್ನ ಪ್ರಧಾನ ಧ್ಯೇಯವನ್ನು ದಿನ ನಿತ್ಯದ ಕರ್ತವ್ಯ ಭಾರದಿಂದಾಗಿ ಮರೆತಾಗ ವ್ಯವಸ್ಥೆಯಲ್ಲಿ ಉಂಟಾಗುವ ಕೆಲವು ತಾತ್ಕಾಲಿಕ ಲೋಪಗಳಾಗಿರುತ್ತವೆ. ವ್ಯಕ್ತಿಗಳು ಎಸಗಿದ ಅತಿರೇಕದ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ವಾರನ್ ಹೇಸ್ಟಿಂಗ್ಸ್ ಬಂಗಾಳದಲ್ಲಿ ಎಸಗಿದ ದೌರ್ಜನ್ಯದ ಆರೋಪಗಳ ಮೇಲೆ ಆತ ಎಡ್ಮಂಡ್ ಬರ್ಕ್ ವಿಚಾರಣೆಗೆ ಗುರಿಯಾಗಿದ್ದ. ಮೇಲಾಗಿ, ಬಂಡವಾಳಶಾಹಿ ಸ್ವಭಾವವೇ ಸೌಮ್ಯವಾಗಿರುವುದರಿಂದ, ಬಂಡವಾಳಶಾಹಿ ಸಾಮ್ರಾಜ್ಯಶಾಹಿಯೂ ಸ್ವಭಾವತಃ ಸೌಮ್ಯವಾಗಿರದೆ ಇರಲು ಸಾಧ್ಯವಿಲ್ಲ ಎಂಬುದೇ ಉದಾರವಾದಿಗಳ ಗ್ರಹಿಕೆ.

ಇಂಥಹ ಅಭಿಪ್ರಾಯವನ್ನು ಪ್ರಖ್ಯಾತ ಅರ್ಥಶಾಸ್ತ್ರಜ್ಞ ಆಡಮ್ ಸ್ಮಿತ್ ಕೂಡ ಹೊಂದಿದ್ದರು. ಪ್ಲಾಸಿ ಕದನದ ನಂತರ ಬಂಗಾಳದಲ್ಲಿ ಜರುಗಿದ ಕೆಲವು ಅತಿರೇಕದ ವಿದ್ಯಮಾನಗಳನ್ನು ಉಗ್ರವಾಗಿ ಖಂಡಿಸಿದರು. ಮತ್ತು ಈ ವಿದ್ಯಮಾನಗಳನ್ನು ಅಂದಿನ ಅಮೆರಿಕದಲ್ಲಿ ಸಂಭವಿಸುತ್ತಿದ್ದ ಅದೇ ರೀತಿಯ ವಿದ್ಯಮಾನಗಳೊಂದಿಗೆ ಹೋಲಿಸಿ, ಅವುಗಳ ನಡುವೆ ಒಂದು ವ್ಯತ್ಯಾಸವನ್ನು ಆಡಮ್ ಸ್ಮಿತ್ ಗುರುತಿಸಿದರು. ಅದೇನೆಂದರೆ, ಅಮೆರಿಕವನ್ನು ಬ್ರಿಟಿಷ್ ದೊರೆ ಆಳುತ್ತಿದ್ದರು, ಬಂಗಾಳವನ್ನು ಈಸ್ಟ್ ಇಂಡಿಯಾ ಕಂಪನಿ ಎಂಬ ಒಂದು ವ್ಯಾಪಾರಿ ಸಂಸ್ಥೆಯು ಆಳುತ್ತಿತ್ತು ಎಂಬುದು. ಆದರೆ, ಅವರು ಅಮೆರಿಂಡಿಯನ್ನರ ಸ್ಥಿತಿ–ಗತಿಗಳನ್ನು ಗಮನಿಸಲಿಲ್ಲ. ಆದ್ದರಿಂದ, ವಲಸಿಗ ವಸಾಹತುಶಾಹಿ ಹೇರಿಕೆಯ ಪ್ರಕರಣವನ್ನು ವಸಾಹತುಶಾಹಿಯ ಬಲಿಪಶುಗಳಾದ ಜನರ ಮತ್ತೊಂದು ಪ್ರಕರಣದೊಂದಿಗಿನ ವ್ಯತ್ಯಾಸವನ್ನು ಅವರು ಗುರುತಿಸಿದ ವಿಧಾನವು ನ್ಯಾಯಯುತವಾದುದಲ್ಲ. ಯುರೋಪಿಯನ್ ವಸಾಹತುಗಾರರ ಪಾಡನ್ನು ಶೋಷಿತ ಸ್ಥಳೀಯ ಜನರ ಪಾಡಿನೊಂದಿಗೆ ಅವರು ಹೋಲಿಕೆ ಮಾಡಿದರು. ಈ ಹೋಲಿಕೆಯಿಂದ ಕಂಡು ಬಂದ ವ್ಯತ್ಯಾಸವು ಬ್ರಿಟಿಷ್ ರಾಜನ ಆಳ್ವಿಕೆಯಿಂದಾಗಿತ್ತೇ ಅಥವಾ ವ್ಯಾಪಾರೀ ಕಂಪೆನಿಯ ಕಂಪನಿ ಆಳ್ವಿಕೆಯಿಂದಾಗಿತ್ತೇ ಎಂಬುದು ಅವರಿಗೆ ಮುಖ್ಯವಾಗಿತ್ತು. ಒಂದು ವೇಳೆ ಬ್ರಿಟಿಷ್ ದೊರೆಯೇ ಬಂಗಾಳವನ್ನು ಆಳಿದ್ದರೆ ಸ್ಥಳೀಯ ಜನರು ಅದರಿಂದ ಪ್ರಯೋಜನ ಪಡೆಯುತ್ತಿದ್ದರು ಎಂಬುದು ಅವರ ಊಹೆಯಾಗಿತ್ತು. ಅವರ ಈ ಊಹೆಯು ತಪ್ಪಾಗಿತ್ತು ಎಂಬುದನ್ನು 1857ರ ನಂತರ ಭಾರತದ ಆಳ್ವಿಕೆಯನ್ನು ವಹಿಸಿಕೊಂಡ ಬ್ರಿಟಿಷ್ ದೊರೆಯ ದಬ್ಬಾಳಿಕೆಯ ಆಡಳಿತವೇ ಸಾಬೀತುಪಡಿಸಿತು.


ಬ್ರಿಟನ್ನಿನ ಟೋನಿ ಬ್ಲೇರ್ ಮತ್ತು ಮಾರ್ಗರೇಟ್ ಥ್ಯಾಚರ್

ಸಾಮ್ರಾಜ್ಯಶಾಹೀ ಯೋಜನೆಯಲ್ಲಿ ಸದಾ ಭಾಗಿ

ವಸಾಹತುವಾಸಿಗಳನ್ನು ನಾಗರೀಕರನ್ನಾಗಿಸುವುದು ವಸಾಹತುಶಾಹಿಯ ಉದ್ದೇಶವಾಗಿತ್ತು ಎಂಬ ಅಭಿಪ್ರಾಯವನ್ನು ಜೇಮ್ಸ್ ಮಿಲ್ ಅವರು ತಮ್ಮ 'ದಿ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ'ದಲ್ಲಿ ಚಿತ್ರಿಸಿದ್ದಾರೆ. ಉದಾರವಾದಿ ಚಿಂತನೆಯು ಸಾಮ್ರಾಜ್ಯಶಾಹಿಯನ್ನು ಶೋಷಕನೆಂದು ಗುರುತಿಸಲಿಲ್ಲ. ಸಾಮ್ರಾಜ್ಯಶಾಹಿಯು ಮುಖ್ಯವಾಗಿ ಯುರೋಪಿಯನ್ ಅಲ್ಲದ ಜನರಿಗೆ "ಆಧುನಿಕತೆ" ಮತ್ತು ನಾಗರಿಕತೆಯನ್ನು ಪರಿಚಯಿಸುತ್ತದೆ ಎಂಬುದು ಅದರ ಚಿಂತನೆಯಾಗಿತ್ತು. ವಸಾಹತುಶಾಹಿ ನೀತಿಯಿಂದಾಗಿ ಲಕ್ಷಾಂತರ ಜನರು ಕ್ಷಾಮಗಳಲ್ಲಿ ಸತ್ತರು. 1943ರ ಬಂಗಾಳದ ಕ್ಷಾಮದ ಸಂದರ್ಭದಲ್ಲಿ ಹಸಿವಿನಿಂದ ಬಳಲುತ್ತಿದ್ದವರಿಗೆ ಒಂದು ಗುಟುಕು ಗಂಜಿಯನ್ನೂ ಒದಗಿಸದ ಕಾರಣದಿಂದಾಗಿ ಮೂವತ್ತು ಲಕ್ಷಕ್ಕೂ ಹೆಚ್ಚು ಮಂದಿ ಸಾವಿಗೀಡಾದರು ಎಂಬ ಅಂಶವನ್ನು ಉದಾರವಾದಿ ಚಿಂತನೆಯು ನಿರ್ಲಕ್ಷಿಸಿತು.

ಎರಡನೇ ಮಹಾಯುದ್ಧದ ಪರಿಸ್ಥಿತಿಯಲ್ಲಿ, ಪೂರ್ವ ಭಾಗದ ರಣಾಂಗಣದಲ್ಲಿ ತನ್ನ ಪರವಾಗಿ ಹೋರಾಡಲು, ವಸಾಹತುಶಾಹಿ ಸರ್ಕಾರವು ಭಾರತದಲ್ಲಿ ಯಾರನ್ನೂ ಕೇಳದೆ ಭಾರತವನ್ನು ಯುದ್ಧದಲ್ಲಿ ಭಾಗವಹಿಸುವಂತೆ ಮಾಡಿತು. ಬ್ರಿಟಿಷ್ ಸರ್ಕಾರವು ಭಾರತದ ಜನರಿಗೆ ಶಾಸನಬದ್ಧ ಪಡಿತರವೂ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆಯನ್ನು ನಿರ್ವಹಿಸಲಿಲ್ಲ ಮತ್ತು ಅದೂ ಸಾಲದೆಂಬಂತೆ ಒಂದು ಬೃಹತ್ ವಿತ್ತೀಯ ಕೊರತೆಯನ್ನು ಭಾರತದ ಮೇಲೆ ಹೇರಿತು. ಪರಿಣಾಮವಾಗಿ, ಭಾರತದಲ್ಲಿ ಹಣದುಬ್ಬರ ಸ್ಫೋಟಗೊಂಡಿತು. ಬಹುಪಾಲು ದುಡಿಯುವ ಜನರ ಆದಾಯವು ನಿಗದಿತವಾಗಿದ್ದ ಪರಿಸ್ಥಿತಿಯಲ್ಲಿ, ಆಹಾರ ಧಾನ್ಯಗಳೂ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿದವು. ಪರಿಣಾಮವಾಗಿ, ತುತ್ತು ಅನ್ನಕ್ಕೂ ತತ್ವಾರವಾಯಿತು. ಆಗ ಬಂಗಾಳದಲ್ಲಿ ತಲೆದೋರಿದ ಒಂದು ಭೀಕರ ಕ್ಷಾಮದಲ್ಲಿ ಮೂವತ್ತು ಲಕ್ಷ ಮಂದಿ ಸಾವಿಗೀಡಾದರು. ಇವರೂ ಸಹ, ಲಂಡನ್ ಮೇಲಿನ ಬಾಂಬ್ ದಾಳಿಯಲ್ಲಿ ಸತ್ತವರನ್ನು ಕರೆಯುವ ಹಾಗೆ, ಯುದ್ಧದಲ್ಲಿ ಮಡಿದವರೇ. ಹಾಗೆ ನೋಡಿದರೆ, ಬಂಗಾಳದ ಕ್ಷಾಮದಲ್ಲಿ ಜೀವ ತೆತ್ತವರ ಸಂಖ್ಯೆಯು ಇಡೀ ಎರಡನೇ ಮಹಾಯುದ್ಧದಲ್ಲಿ ಮಡಿದ ಒಟ್ಟು ಬ್ರಿಟಿಷರ ಸಂಖ್ಯೆಗಿಂತ ಆರು ಪಟ್ಟು ಹೆಚ್ಚಿಗೆ ಇದೆ. ಆದರೆ, ಅವರ ಸಾವುಗಳನ್ನು ಯುದ್ಧದಲ್ಲಿ ಮಡಿದವರೆಂದು ಉಲ್ಲೇಖ ಮಾಡಲೇ ಇಲ್ಲ. ಮಾತ್ರವಲ್ಲ, ಬಂಗಾಳದ ಕ್ಷಾಮವು ಆ ಸಮಯದಲ್ಲಿ ಬ್ರಿಟನ್ನಲ್ಲಿ ಹೆಚ್ಚು ಗಮನ ಸೆಳೆಯಲಿಲ್ಲ ಮತ್ತು ಅದನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡಲಾಯಿತು ಎಂದು ನಂಬಲು ಕಾರಣಗಳಿವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಉದಾರವಾದವು ಸಾಮ್ರಾಜ್ಯಶಾಹಿ ಯೋಜನೆಯಲ್ಲಿ ಸದಾ ಭಾಗಿಯಾಗಿದೆ: ಸಾಮ್ರಾಜ್ಯಶಾಹಿ ಕಾರ್ಯಾಚರಣೆಯನ್ನು ವಸಾಹತುವಾಸಿಗಳ "ನಾಗರೀಕರಣ" ಎಂಬಂತೆ ವ್ಯಾಖ್ಯಾನಿಸಿದ ಉದಾರವಾದವು ಸಾಮ್ರಾಜ್ಯವಾದವನ್ನು ಸಮರ್ಥಿಸಿಲ್ಲ ಎಂದು ಹೇಳುವುದು ಮೂರ್ಖತನವಾಗುತ್ತದೆ. ಯಹೂದಿಗಳು ಸಹಸ್ರಮಾನಗಳಿಂದ ಕಿರುಕುಳಕ್ಕೊಳಗಾಗಿದ್ದಾರೆ ಮತ್ತು ಹತ್ಯಾಕಾಂಡದ ಬಲಿಪಶುಗಳಾಗಿದ್ದಾರೆ ಎಂಬ ನೆಲೆಯಲ್ಲಿ, ಪ್ಯಾಲೆಸ್ತೀನಿಯರನ್ನು ತುಳಿದು ಇಸ್ರೇಲ್ ಎಂಬ ಯಹೂದಿ ರಾಷ್ಟ್ರದ ನಿರ್ಮಾಣವು ಸಾಮ್ರಾಜ್ಯಶಾಹಿ ಯೋಜನೆಯೇ. ಅದನ್ನು ಉದಾರವಾದಿಗಳು ಬೆಂಬಲಿಸುತ್ತಾರೆ. ಆದರೆ, ಈ ಯೆಹೂದಿ ಪ್ರಭುತ್ವವು ವಸಾಹತುಶಾಹಿಯ ಎಲ್ಲ ಗುಣಲಕ್ಷಣಗಳನ್ನೂ ತಾನೂ ಹೊಂದಿದ್ದೇನೆ ಎಂದು ತೋರಿಸಿಕೊಂಡರೂ, ಪಾಶ್ಚಾತ್ಯ ಉದಾರವಾದೀ ಅಭಿಪ್ರಾಯವು ಇಸ್ರೇಲಿನ ಪರವಾಗಿಯೇ ಇದೆ. ಎಲ್ಲೋ ಒಂದು ಅಪವಾದವನ್ನು ಕಾಣಬಹುದು. ಉದಾಹರಣೆಗೆ, 1967ರ ಅರಬ್–ಇಸ್ರೇಲಿ ಯುದ್ಧದ ಹೊಣೆಯನ್ನು ಫ್ರಾನ್ಸಿನ ಅಧ್ಯಕ್ಷ ಡಿ ಗಾಲ್, ಇಸ್ರೇಲಿನ ಮೇಲೆ ಹೊರಿಸಿದ ಆಪಾದನೆಯನ್ನು ಬೇರೆ ಯಾವುದೇ ಪಾಶ್ಚಾತ್ಯ ದೇಶವು ಬೆಂಬಲಿಸಲಿಲ್ಲ. ಈ ದೇಶಗಳ ಉದಾರವಾದಿ ಅಭಿಪ್ರಾಯವು ಸಾಮಾನ್ಯವಾಗಿ ಸರ್ಕಾರಗಳೊಂದಿಗೇ ಇತ್ತು.

ಪುಟ 14 ಕ್ಕೆ



ಪಾಶ್ಚಾತ್ಯ ಉದಾರವಾದಿಗಳಿಗೆ ಕಾಣುವುದೇ ಬೇರೆ, ಪ್ಯಾಲೆಸ್ತೀನಿಯರ ಅನುಭವವೇ ಬೇರೆ
ಕೃಪೆ: ಪ್ರಖ್ಯಾತ ಬ್ರೆಜಿಲಿಯನ್ ವ್ಯಂಗ್ಯಚಿತ್ರಕಾರ ಕಾರ್ಲೋಸ್ ಲತುಫ್

ಸಾಮ್ರಾಜ್ಯಶಾಹಿ ಯೋಜನೆಗೆ ಪಾಶ್ಚಾತ್ಯ ಉದಾರವಾದದ ಬೆಂಬಲ......

ಪುಟ 13 ರಿಂದ

ಎರಡನೇ ಮಹಾಯುದ್ಧಾನಂತರದ ಸಣ್ಣ ಅವಧಿಯಲ್ಲಿ ಮಾತ್ರ

ಎರಡನೆಯ ಮಹಾ ಯುದ್ಧದ ನಂತರ, ಮೆಟ್ರೋಪಾಲಿಟನ್ ಬಂಡವಾಳಶಾಹಿಯಲ್ಲಿ ಹಲವಾರು ಬದಲಾವಣೆಗಳು ಸಂಭವಿಸಿದವು. ಮಹಾ ಯುದ್ಧದಿಂದಾಗಿ ಬಂಡವಾಳಶಾಹಿಯು ಹೈರಾಣಾಗಿತ್ತು. ಆದ್ದರಿಂದ, ಜನರಿಗೆ ಕೆಲವು ರಿಯಾಯಿತಿಗಳನ್ನು ನೀಡುವ ಒತ್ತಾಯಕ್ಕೆ ಅದು ಒಳಗಾಯಿತು. ಈ ರಿಯಾಯ್ತಿಗಳಲ್ಲಿ ಮೊದಲನೆಯದು, ವಸಾಹತುಗಳ ರಾಜಕೀಯ ವಿಮೋಚನೆ. ಎರಡನೆಯದು, ಸಾರ್ವತ್ರಿಕ ವಯಸ್ಕ ಮತದಾನದ ಜಾರಿ. ಮೂರನೆಯದು, ಹೆಚ್ಚಿನ ಉದ್ಯೋಗಾವಕಾಶಗಳ ಸೃಷ್ಟಿಯನ್ನು ಮತ್ತು ಆರ್ಥಿಕ ಚಟುವಟಿಕೆಗಳು ಹುರುಪುಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು, ಬೇಡಿಕೆ ನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪ. ಈ ಹಸ್ತಕ್ಷೇಪವು, ಜಾನ್ ಮೇನಾರ್ಡ್ ಕೀನ್ಸ್ ಅವರು ಪ್ರತಿಪಾದಿಸಿದ ಆರ್ಥಿಕ ಸಿದ್ಧಾಂತವನ್ನು ಆಧರಿಸಿತ್ತು. ಕೀನ್ಸ್ ಅವರು ಸ್ವತಃ ಒಬ್ಬ ಉದಾರವಾದಿಯಾಗಿದ್ದರೂ ಸಹ, ಸಾಮಾನ್ಯವಾಗಿ ಬಂಡವಾಳಶಾಹಿಯು ಬೃಹತ್ ನಿರುದ್ಯೋಗದಿಂದ ಕೂಡಿದೆ, ಮತ್ತು, ಅದು ಉದಾರವಾದಿಗಳು ಹೇಳುವ ರೀತಿಯ ಒಂದು ಸ್ವಯಂಪೂರ್ಣ, ಸೌಮ್ಯ ಮತ್ತು ದಕ್ಷ ವ್ಯವಸ್ಥೆಯಲ್ಲ ಎಂಬುದನ್ನು ತೋರಿಸಿಕೊಟ್ಟರು.

ಬಂಡವಾಳಶಾಹಿ ವ್ಯವಸ್ಥೆಯಲ್ಲಾದ ಈ ಬದಲಾವಣೆಗಳನ್ನು, ಉದಾರವಾದಿಗಳು ಮತ್ತು ಸೋಶಿಯಲ್ ಡೆಮೊಕ್ರಾಟರ ನಡುವಿನ ಮೈತ್ರಿ ರೂಪದ ಒಂದು ರಾಜಕೀಯ ಏರ್ಪಾಟು ಆಗುಮಾಡಿತು. ಈ ಬದಲಾವಣೆಗಳ ಹಿಂದಿನ ಪ್ರೇರಣೆಯೆಂದರೆ, ವಸಾಹತುಗಳ ಜನತೆಯ ಹೋರಾಟ ಮತ್ತು ದೇಶ ದೇಶಗಳ ಕಾರ್ಮಿಕ ವರ್ಗದ ಹೋರಾಟಗಳು ಮತ್ತು ಅವುಗಳ ಜೊತೆಯಲ್ಲಿ, ಸೋವಿಯತ್ ಒಕ್ಕೂಟದ ಸಮಾಜವಾದಿ ವ್ಯವಸ್ಥೆಯು ಬಂಡವಾಳಶಾಹಿ ವ್ಯವಸ್ಥೆಗೆ ಒಡ್ಡಿದ ಸವಾಲು. ಸಮಾಜವಾದಿ ಸವಾಲಿನ ಕಾರಣದಿಂದಾಗಿ, ಯುರೋಪಿನ ದೇಶಗಳ ಅರ್ಥವ್ಯವಸ್ಥೆಗಳಲ್ಲಿ ಸರ್ಕಾರದ ಹಸ್ತಕ್ಷೇಪವು ಪ್ರಭುತ್ವದ ಕಲ್ಯಾಣ ಕ್ರಮಗಳ ರೂಪವನ್ನು ತೆಗೆದುಕೊಂಡಿತು.

ಉದಾರವಾದವು ಈಗ ಏನಾದರೂ ಒಂದು ಆರೋಗ್ಯಕರ ಖ್ಯಾತಿಯನ್ನು ಹೊಂದಿದ್ದರೆ, ಅದು ಬಂಡವಾಳಶಾಹಿ ವ್ಯವಸ್ಥೆಯಲ್ಲಾದ ಈ ಬದಲಾವಣೆಗಳಿಂದಾಗಿ ಸಾಧ್ಯವಾಯಿತು. ಸಾಮ್ರಾಜ್ಯಶಾಹಿ ಯೋಜನೆಯೇ ಔಪಚಾರಿಕವಾಗಿ ಸ್ಥಗಿತಗೊಳ್ಳುತ್ತಿದ್ದಾಗ(ಅಂದರೆ, ವಸಾಹತುಗಳು ವಿಮೋಚನೆಗೊಳ್ಳುತ್ತಿದ್ದಾಗ), ಸಾಮ್ರಾಜ್ಯಶಾಹಿ ಯೋಜನೆಯಲ್ಲಿ ಉದಾರವಾದ ಸಹಭಾಗಿತ್ವವು ಗತಕಾಲದ ವಿಷಯವಾಗಿ ತೋರಿತ್ತು.

ಆದರೆ, ಬಂಡವಾಳದ ಕೇಂದ್ರೀಕರಣದೊಂದಿಗೆ ಹೊರಹೊಮ್ಮಿದ ಅಂತರರಾಷ್ಟ್ರೀಯ ಹಣಕಾಸು ಬಂಡವಾಳವು, ಯುದ್ಧಾನಂತರದಲ್ಲಿ ಬಂಡವಾಳಶಾಹಿಯಲ್ಲಾದ ಅನೇಕ ಬದಲಾವಣೆಗಳನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸಿತು. ಅದೇ ಸಮಯದಲ್ಲಿ, ಈ ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರಾಬಲ್ಯದಿಂದಾಗಿ ವಿಶ್ವಾದ್ಯಂತ ಹೇರಲ್ಪಟ್ಟ ನವ–ಉದಾರವಾದಿ ಆಳ್ವಿಕೆಗಳು, ವಸಾಹತು ವಿಮೋಚನೆಯಿಂದಾಗಿ ತಾತ್ಕಾಲಿಕವಾಗಿ ಅಡ್ಡಿಯಾಗಿದ್ದ, ಮುಂದುವರೆದ ಬಂಡವಾಳಶಾಹಿ ದೇಶಗಳು ಮತ್ತು ಮೂರನೇ ಜಗತ್ತಿನ ದೇಶಗಳ ನಡುವಿನ ಸಾಮ್ರಾಜ್ಯಶಾಹಿ ಏರ್ಪಾಟನ್ನು ಮತ್ತೊಮ್ಮೆ ಪುನರುಜ್ಜೀವನಗೊಳಿಸಿದವು.

ಮತ್ತೆ ಹಳೆಯ ಸಹಭಾಗಿತ್ವ

ಈ ಬದಲಾವಣೆಯೊಂದಿಗೆ ಸೋಷಿಯಲ್ ಡೆಮಾಕ್ರಸಿಯ ಸ್ವರೂಪದಲ್ಲಿ ಮತ್ತು ಉದಾರವಾದದ ಸ್ವರೂಪದಲ್ಲಿಯೂ ಬದಲಾವಣೆಗಳಾದವು. ಸೋಷಿಯಲ್ ಡೆಮಾಕ್ರಸಿಯನ್ನು ಬ್ಲೇರಿಸಂ ಕಬ್ಜಾ ಮಾಡಿಕೊಂಡಿತು. (ಬ್ಲೇರಿಸಂ ಅಂದರೆ, ಇರಾಕ್ ವಿರುದ್ಧದ ಸಾಮ್ರಾಜ್ಯಶಾಹಿ ಯುದ್ಧಕ್ಕೆ ಅತ್ಯಂತ ಹೆಚ್ಚು ಕಾರಣೀಭೂತರಾದ ಬ್ರಿಟನ್ನಿನ ಮಾಜಿ ಪ್ರಧಾನಿ ಮತ್ತು ಲೇಬರ್ ಪಕ್ಷದ ಮಾಜಿ ನಾಯಕ ಟೋನಿ ಬ್ಲೇರ್ ಪ್ರತಿಪಾದಿಸಿದ ಸಿದ್ಧಾಂತ). ಬ್ಲೇರ್ ಅವರಿಗೂ ತನಗೂ ಆತ್ಮದ ನಂಟು ಎಂದೊಮ್ಮೆ ಬ್ರಿಟನ್ನಿನ ಮಾಜಿ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ಹೊಗಳಿದ್ದರು. ಈ ಬದಲಾವಣೆಗಳೊಂದಿಗೆ ಉದಾರವಾದವು ಹೊಸ ಅವತಾರ ತಳೆದ ಸಾಮ್ರಾಜ್ಯಶಾಹಿಯೊಂದಿಗೆ ತನ್ನ ಹಳೆಯ ಸಹಭಾಗಿತ್ವಕ್ಕೆ ಮರಳಿತು. ಮತ್ತು, ಬಂಡವಾಳಶಾಹಿ ಸೌಮ್ಯವಾಗಿದೆ ಹಾಗೂ ಸ್ವಯಂಪೂರ್ಣವಾಗಿದೆ ಎಂಬ ತನ್ನ ಸಮರ್ಥನೆಗೂ ಮರಳಿತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಮಹಾಯುದ್ಧಾನಂತರದ ಅವಧಿಯಲ್ಲಿ, ಸೋಷಿಯಲ್ ಡೆಮಾಕ್ರಸಿಯ ಹೆಚ್ಚು ತೀವ್ರಗಾಮಿ ರೂಪದೊಂದಿಗೆ ಮೈತ್ರಿ ಮಾಡಿಕೊಂಡ ಪಾಶ್ಚಾತ್ಯ ಉದಾರವಾದವು, ಆ ಸಣ್ಣ ಅವಧಿಯಲ್ಲಿ ಒಂದು ಭಿನ್ನ ಸ್ವರೂಪವನ್ನು ಪಡೆದುಕೊಂಡಿತ್ತು. ಆದರೆ, ಬಹಳ ಬೇಗ ಅದು ಸಾಮ್ರಾಜ್ಯಶಾಹಿಯ ಹೊಸ ಯೋಜನೆಯಲ್ಲಿ ಮತ್ತೊಮ್ಮೆ ಕೈಜೋಡಿಸಿತು, ಅದರ ಆರ್ಥಿಕ ರೂಪವಾದ ನವ–ಉದಾರವಾದದಲ್ಲಿ ಮಾತ್ರವಲ್ಲದೆ ಅದರ ಆಕ್ರಮಣಕಾರೀ "ನವ–ಸಂಪ್ರದಾಯಶರಣತೆ"ಯ ರಾಜಕೀಯ ರೂಪದಲ್ಲಿಯೂ.

ಯುದ್ಧೋತ್ತರ–ತಕ್ಷಣದ ಅವಧಿಗೆ ಹೋಲಿಸಿದರೆ, ಉದಾರವಾದ ಮತ್ತು ಸೋಷಿಯಲ್ ಡೆಮಾಕ್ರಸಿ ಇವೆರಡೂ ತಮ್ಮ ಅವತಾರಗಳನ್ನು ಬದಲಿಸಿಕೊಂಡಿವೆ. ತಮ್ಮ ನಡುವೆ ಹೊಸದೊಂದು ಮೈತ್ರಿ ಮಾಡಿಕೊಂಡಿವೆ ಮತ್ತು ಬಲಪಂಥದ ಹಿಂದೆ ನಿಂತಿವೆ. ಸಾಮಾನ್ಯ ಜನರಿಂದ ದೂರವಾಗಿವೆ ಮತ್ತು ಫ್ಯಾಸಿಸಂ ಒಂದು ಉತ್ತುಂಗವನ್ನು ತಲುಪುವ ಪರಿಸ್ಥಿತಿಯನ್ನು ಸೃಷ್ಟಿಸಿವೆ. ಫ್ಯಾಸಿಸ್ಟ್ ಪಕ್ಷಗಳು, ಜನ ಬೆಂಬಲ ಗಳಿಸುವ ಸಲುವಾಗಿ ಉಕ್ರೇನ್ ಯುದ್ಧವನ್ನು ಮತ್ತು ರಷ್ಯಾದ ವಿರುದ್ಧದ ನಿರ್ಬಂಧಗಳನ್ನು ಹೇರಿದ ಸಾಮ್ರಾಜ್ಯಶಾಹಿಯ ಆಕ್ರಮಣಕಾರಿ ನಡೆಗಳನ್ನು ವಿರೋಧಿಸುತ್ತವೆ ಮತ್ತು ಅದೇ ನೆಲೆಯಲ್ಲಿ ತಮ್ಮ ಸರ್ಕಾರಗಳಿಗೆ ವಿರೋಧವನ್ನೂ ಘೋಷಿಸುತ್ತವೆ. ಆದರೆ, ಅಧಿಕಾರಕ್ಕೆ ಬಂದ ಕೂಡಲೇ, ಅದೇ ಆಕ್ರಮಣಕಾರಿ ನಿಲುವನ್ನು ಈ ಫ್ಯಾಸಿಸ್ಟ್ ಪಕ್ಷಗಳೂ ತಳೆಯುತ್ತವೆ. ಇಟಲಿಯ ಮೆಲೋನಿ ಇದಕ್ಕೊಂದು ಉತ್ತಮ ಉದಾಹರಣೆಯಾಗುತ್ತಾರೆ.

ಪಾಶ್ಚಾತ್ಯ ಉದಾರವಾದವು ಸಾಮ್ರಾಜ್ಯಶಾಹಿ ಯೋಜನೆಯಲ್ಲಿ ಸದಾ ಭಾಗಿಯಾಗಿತ್ತು ಮತ್ತು ಈಗಲೂ ಭಾಗಿಯಾಗಿದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ಇಸ್ರೇಲ್ ನಡೆಸುತ್ತಿರುವ ಜನಾಂಗೀಯ ಶುದ್ಧೀಕರಣ ಪ್ರಕ್ರಿಯೆಗೆ ಉದಾರವಾದವು ನೀಡುತ್ತಿರುವ ಬೆಂಬಲದಲ್ಲಿ ಆಶ್ಚರ್ಯವಿಲ್ಲ. ಈ ಬೆಂಬಲದಲ್ಲಿರುವ ಹೊಸತನವೆಂದರೆ, ಅದರಲ್ಲಿ ಬೂಟಾಟಿಕೆಯಿಲ್ಲ ಮತ್ತು ಆಕ್ರಮಣಕಾರೀ ನೇರ ನಡೆಯಿದೆ. ಆದರೆ ಈ ಬೆಂಬಲದ ಹಿಂದೆ ಯಹೂದಿಗಳಿಗೆ ಐತಿಹಾಸಿಕವಾಗಿ ಕೊಟ್ಟ ಉದಾರವಾದಿ ಕಿರುಕುಳದ ಪಾಪ ಪ್ರಜ್ಞೆ ಇದ್ದಿರಬಹುದು. ■

ಸುಮಾರು 10,000 ಕ್ಕೂ ಹೆಚ್ಚು ಪತ್ರಕರ್ತರನ್ನು ಪ್ರತಿನಿಧಿಸುತ್ತಿರುವ, ಪತ್ರಕರ್ತರ ರಾಷ್ಟ್ರೀಯ ಮೈತ್ರಿಕೂಟ (ಎನ್‌ಎಜೆ), ದೆಹಲಿ ಪತ್ರಕರ್ತರ ಸಂಘ (ಡಿಯುಜೆ), ಕೇರಳದ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಮತ್ತು ಆಂಧ್ರಪ್ರದೇಶ ಕಾರ್ಯನಿರತ ಪತ್ರಕರ್ತರ ಒಕ್ಕೂಟ (ಎಪಿಡಬ್ಲ್ಯುಎಫ್‌ಜೆ) ರಾಷ್ಟ್ರದಾದ್ಯಂತದ ಸಂಬಂಧಿತ ಸದಸ್ಯರೊಂದಿಗೆ ಜೊತೆಗೂಡಿ ಭಾರತದಲ್ಲಿ ಮಾಧ್ಯಮ ಬಂಧುಗಳು ಎದುರಿಸುತ್ತಿರುವ ಸವಾಲುಗಳನ್ನು ಎದುರಿಸಲು ಜಂಟಿ ಪ್ರಯತ್ನದಲ್ಲಿ ವಿವಿಧ ಪಕ್ಷಗಳ ಸಂಸತ್ ಸದಸ್ಯರ ಮುಂದೆ 14 ಅಂಶಗಳ ಚಾರ್ಟರ್ ಅನ್ನು ಇಟ್ಟಿದೆ. ಪತ್ರಿಕಾ ಸ್ವಾತಂತ್ರ್ಯ ಮತ್ತು ಪತ್ರಕರ್ತರ ಹಕ್ಕುಗಳು ಮತ್ತು ಘನತೆಗೆ ಹೆಚ್ಚುತ್ತಿರುವ ಬೆದರಿಕೆಗಳನ್ನು ಗಮನದಲ್ಲಿಟ್ಟುಕೊಂಡು ಪತ್ರಿಕಾರಂಗವನ್ನು ರಕ್ಷಿಸಲು ಮತ್ತು ಪುನಶ್ಚೇತನಗೊಳಿಸಲು ತಕ್ಷಣದ ಕ್ರಮಗಳನ್ನು ಇದು ಹೊಂದಿದೆ ಎಂದು ಅವು ಹೇಳಿವೆ.

ಮೊದಲ ಮತ್ತು ಎರಡನೆಯ ಪತ್ರಿಕಾ ಆಯೋಗಗಳಿಂದ ಸ್ಫೂರ್ತಿ ಪಡೆದು ಭಾರತೀಯ ಮಾಧ್ಯಮ ಆಯೋಗವನ್ನು ಸ್ಥಾಪಿಸಲು ಈ ಸಂಘಟನೆಗಳು ನಿರ್ದಿಷ್ಟವಾಗಿ ಒತ್ತಾಯಿಸಿವೆ. ಚಾಲ್ತಿಯಲ್ಲಿರುವ ಕಾರ್ಮಿಕ ಸಂಹಿತೆಗಳು ಮತ್ತು ಮಾಧ್ಯಮದ ಧ್ವನಿಗಳನ್ನು ನಿಗ್ರಹಿಸಲು ನಡೆಯುತ್ತಿರುವ ಪ್ರಯತ್ನಗಳನ್ನು ಚಾರ್ಟರ್ ಬಲವಾಗಿ ಖಂಡಿಸುತ್ತದೆ. ಸರ್ಕಾರಿ ಕ್ರಮಗಳು ಮತ್ತು ನಿಯಂತ್ರಣ ಪಡೆಗಳ ಕೃತ್ಯಗಳನ್ನು ಬಯಲಿಗೆ ತಂದದಕ್ಕಾಗಿ ಹಲವಾರು ಪತ್ರಕರ್ತರು ಸರ್ಕಾರವು ಹಿಂದೇಟು ಹಾಕುತ್ತಿದೆ ಎಂದಿರುವ ಈ ಪತ್ರಕರ್ತರ ಸಂಘಟನೆಗಳು, ಈಗ ನಡೆಯುತ್ತಿರುವ ಸಂಸತ್ತಿನ ಅಧಿವೇಶನದ ಸಮಯದಲ್ಲಿ, ತಮ್ಮ ಚಾರ್ಟರ್‌ನತ್ತ ಗಮನ ಸೆಳೆಯಲು ಮತ್ತು ಪತ್ರಕರ್ತ ಸಮುದಾಯವು ಎದುರಿಸುತ್ತಿರುವ ನಿರ್ಣಾಯಕ ಸವಾಲುಗಳನ್ನು ಪರಿಹರಿಸುವಲ್ಲಿ ಬೆಂಬಲವನ್ನು ಪಡೆಯಲು ಪ್ರಯತ್ನಿಸುವುದಾಗಿ ಹೇಳಿವೆ. ಈ ಚಾರ್ಟರ್ ಸ್ವತಂತ್ರ ಪತ್ರಿಕೋದ್ಯಮದ ಭವಿಷ್ಯವನ್ನು ಭದ್ರಪಡಿಸುವ ಸಮಗ್ರ ಪ್ರಯತ್ನವಾಗಿದೆ, ದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸಲು ಸಾಮೂಹಿಕ ಕ್ರಮದ ಅಗತ್ಯವನ್ನು ಒತ್ತಿಹೇಳುತ್ತದೆ.

ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕವು ಕುಸಿಯುತ್ತಿರುವುದನ್ನು ಉಲ್ಲೇಖಿಸಿ, ಬೇಡಿಕೆ ಪತ್ರದ ರೂಪದಲ್ಲಿ ಪ್ರಸ್ತುತಪಡಿಸಿರುವ ಈ ಚಾರ್ಟರ್, ಪ್ರಜಾಪ್ರಭುತ್ವ ಸಮಾಜದಲ್ಲಿ ಮಾಧ್ಯಮದ ನಿರ್ಣಾಯಕ ಪಾತ್ರವನ್ನು ಒತ್ತಿಹೇಳುತ್ತದೆ.

ಶಾಸಕಾಂಗ ಸುಧಾರಣೆಗಳ ಅಗತ್ಯವನ್ನು ಎತ್ತಿ ತೋರಿಸುತ್ತಾ, ಪತ್ರಕರ್ತರನ್ನು ಬೇಕಾಬಿಟ್ಟಿ ಬಂಧನಗಳು ಮತ್ತು ದುರುದ್ದೇಶಪೂರಿತ ಕಾನೂನು ಕ್ರಮಗಳಿಂದ ರಕ್ಷಿಸಲು ಒಂದು ಕಾನೂನು ರೂಪಿಸಬೇಕು ಎಂದಿರುವ ಈ ಚಾರ್ಟರ್ ಪತ್ರಕರ್ತರನ್ನು ಭಯೋತ್ಪಾದಕರೆಂದು ಪರಿಗಣಿಸಬಾರದು ಎಂದು ಒತ್ತಿಹೇಳುತ್ತವೆ. ಸ್ವತಂತ್ರ ಡಿಜಿಟಲ್ ಮಾಧ್ಯಮವನ್ನು ಸೆನ್ಸಾರ್ ಮಾಡುವ ಗುರಿಯನ್ನು ಹೊಂದಿರುವ ಐಟಿ ನಿಯಮಗಳು, 2021 ಗೆ ಇತ್ತೀಚಿನ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕು ಎಂದೂ ಅದು ಆಗ್ರಹಿಸುತ್ತದೆ.

“ಪತ್ರಕರ್ತರನ್ನು ಭಯೋತ್ಪಾದಕರಂತೆ ಪರಿಗಣಿಸಬಾರದು”

ಪತ್ರಿಕಾರಂಗವನ್ನು ರಕ್ಷಿಸಲು, ಪುನಶ್ಚೇತನಗೊಳಿಸಲು ಪತ್ರಕರ್ತರ ಸಂಘಟನೆಗಳ 14 ಅಂಶಗಳ ಚಾರ್ಟರ್

ಸೆರೆವಾಸದಲ್ಲಿದ್ದಾರೆ ಎಂಬ ಕಠೋರ ವಾಸ್ತವವನ್ನು ಇದು ಎತ್ತಿ ತೋರಿಸುತ್ತದೆ. ಹಲವು ಪತ್ರಕರ್ತರು ಯುಎಪಿಎ ಆರೋಪಗಳು ಸೇರಿದಂತೆ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತ ವರ್ಷಗಳಿಂದ ಜೈಲುವಾಸವನ್ನು ಅನುಭವಿಸುತ್ತಿರುವುದನ್ನು ಈ ದಸ್ತಾವೇಜು ನೆನಪಿಸಿದೆ.

ಕಾಶ್ಮೀರದಲ್ಲಿ ಫಹಾದ್ ಷಾ, ಸಜಾದ್ ಗುಲ್, ಇರ್ಫಾನ್ ಮೆಹರಾಜ್, ಆಸಿಫ್ ಸುಲ್ತಾನ್ ಮತ್ತು ಮಜೀದ್ ಹೈದರಿಯಂತಹ ಪತ್ರಕರ್ತರು ಬಂಧನವನ್ನು ಎದುರಿಸಿದ್ದಾರೆ ಮತ್ತು ಅವರ ಸಹೋದ್ಯೋಗಿಗಳಲ್ಲಿ ಭಯವನ್ನು ಹುಟ್ಟುಹಾಕಲಾಗಿದೆ. 2010 ರಿಂದ, 15 ಪತ್ರಕರ್ತರು ಮತ್ತು ಇಬ್ಬರು ಮಾಧ್ಯಮ ನಿರ್ವಾಹಕರ ಮೇಲೆ ಯುಎಪಿಎ ಅಡಿಯಲ್ಲಿ ಆರೋಪ ಹೊರಿಸಲಗಿದೆ, ಏಳು ಮಂದಿ ಇನ್ನೂ ಕಂಬಿಯ ಹಿಂದೆ ಇದ್ದಾರೆ. ಪ್ರಮುಖ ಪತ್ರಕರ್ತರಾದ ವಿನೋದ್ ದುವಾ, ಮೃಣಾಲ್ ಪಾಂಡೆ, ರಾಜ್‌ದೀಪ್ ಸರ್ದೇಸಾಯಿ ಮತ್ತು ಇತರರ ವಿರುದ್ಧ ದೇಶದ್ರೋಹದ ಆರೋಪಗಳನ್ನು ಹೊರಿಸಲಾಗಿದೆ, ಪರಂಜಯ್ ಗುಹಾ ಠಾಕುರ್ತಾ ಮತ್ತು ರವಿ ನಾಯರ್ ಅವರಂತಹ ಮಾನನಷ್ಟ ಆರೋಪಗಳನ್ನು ಗುರಿಪಡಿಸಲಾಗಿದೆ. ಚಾರ್ಟರ್ ಮಾಧ್ಯಮಗಳ ಮೇಲಿನ ದಾಳಿಗಳು, ಎಲೆಕ್ಟ್ರಾನಿಕ್ ಸಾಧನಗಳನ್ನು ವಶಪಡಿಸಿಕೊಳ್ಳುವುದು ಮತ್ತು ಮಾಧ್ಯಮ ಉದ್ಯೋಗಿಗಳಿಗೆ ಕಿರುಕುಳ ನೀಡುವ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿದೆ.

ಕಳೆದ 13 ವರ್ಷಗಳಿಂದ ವೇತನ ಮಂಡಳಿಗಳು ಇಲ್ಲವಾಗಿವೆ, ಮತ್ತು ಹೊಸದನ್ನು ರಚಿಸಲು ಅಥವಾ ಮಧ್ಯಂತರ ಪರಿಹಾರವನ್ನು ನೀಡಲು ಹಿಂತೆಗೆದುಕೊಳ್ಳಬಬೇಕು ಎಂದೂ ಅದು ಆಗ್ರಹಿಸುತ್ತದೆ.

ಮುದ್ರಣ, ವಿದ್ಯುನ್ಮಾನ ಮತ್ತು ಡಿಜಿಟಲ್ ಮಾಧ್ಯಮಕ್ಕಾಗಿ ಸಾಮಾನ್ಯ ಮಾಧ್ಯಮ ಮಂಡಳಿಯನ್ನು ಸ್ಥಾಪಿಸಬೇಕೆಂದು ಚಾರ್ಟರ್ ಪ್ರತಿಪಾದಿಸಿದೆ, ಜೊತೆಗೆ ಸಂಪೂರ್ಣ ಮಾಧ್ಯಮ ಭೂದೃಶ್ಯವನ್ನು ಅಧ್ಯಯನ ಮಾಡಲು ಒಂದು ಸಮಗ್ರ ಮಾಧ್ಯಮ ಆಯೋಗವನ್ನು ಸ್ಥಾಪಿಸಬೇಕು ಎಂದೂ ಅದು ಹೇಳಿದೆ. ಇತರ ಬೇಡಿಕೆಗಳಲ್ಲಿ ಮೀಡಿಯ ಮಾಲೀಕತ್ವದ ಮೇಲೆ ನಿಯಂತ್ರಣ, ರಾಷ್ಟ್ರೀಯ ಭಾಷಾ ಸುದ್ದಿ ಸಂಸ್ಥೆಗಳಿಗೆ ಬೆಂಬಲ ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳ ರದ್ದತಿ ಸೇರಿವೆ.

ಇಂಟರ್ನೆಟ್ ಸ್ಥಗಿತ, ಪತ್ರಕರ್ತರ ವಿರುದ್ಧ ದೇಶದ್ರೋಹ ಮತ್ತು ಮಾನನಷ್ಟದಂತಹ ಕಾನೂನುಗಳ ದುರುಪಯೋಗ ಮತ್ತು ಸ್ವತಂತ್ರ ಪತ್ರಕರ್ತರು, ಸ್ಟ್ರಿಂಗರ್‌ಗಳು ಮತ್ತು ಸಲಹೆಗಾರರಿಗೆ ಕಾನೂನು ನಿಬಂಧನೆಗಳ ಅಗತ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚಾರ್ಟರ್ ಉಲ್ಲೇಖೀಸಿದೆ. ಬೇಕಾಬಿಟ್ಟಿಯಾಗಿ ಬಂಧಿಸಲ್ಪಟ್ಟಿರುವ ಎಲ್ಲಾ ಪತ್ರಕರ್ತರು, ಶಿಕ್ಷಣ ತಜ್ಞರು ಮತ್ತು ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿರುವ ಪತ್ರಕರ್ತರ ಸಂಘಟನೆಗಳ ಈ ಚಾರ್ಟರ್ ಸ್ವತಂತ್ರ ಪತ್ರಿಕೋದ್ಯಮವನ್ನು ಉಳಿಸಲು ಮತ್ತು ಮುದ್ರಣ, ಪ್ರಸಾರ ಮತ್ತು ಡಿಜಿಟಲ್ ಮಾಧ್ಯಮಗಳು ಸಹಬಾಳ್ವೆಯೊಂದಿಗೆ, ಜವಾಬ್ದಾರಿಯುತವಾಗಿ ಬೆಳೆಯಲು ಅನುವು ಮಾಡಿಕೊಡುವ ತಕ್ಷಣದ ಕ್ರಮಗಳು ಅತ್ಯಗತ್ಯ ಎಂದು ಹೇಳಿದೆ. ■

‘ಸೌಹಾರ್ದ ಕರ್ನಾಟಕ’ ಸರಣಿ ಉಪನ್ಯಾಸ ಮಾಲಿಕೆ..... ಪುಟ 16 ರಿಂದ

ಬಹಿಷ್ಕರಿಸಬೇಕು ಎಂಬ ಕರೆಯನ್ನು ಹಿಂದೂಗಳು ಒಪ್ಪದೇ ಅಂತಹ ಪ್ರಯತ್ನವನ್ನು ವಿಫಲಗೊಳಿಸಿದರು. ದ್ವೇಷ ಆಧಾರಿತವಾದ ಇಂತಹ ಕರೆಗಳಿಗೆ ಜನರು ಸೊಪ್ಪು ಹಾಕಲಿಲ್ಲ. ಇಂತಹ ಘಟನೆಗಳನ್ನು ನೋಡಿದಾಗ ಕೊಂಚ ಆಶಾವಾದ ಮೂಡುತ್ತದೆ ಎಂದ ಬನ್ನಾಡಿಯವರು, ಆಟೋ ಚಾಲಕರೊಂದಿಗೆ ಚರ್ಚಿಸಿದಾಗಲೂ ಹೀಗೆ ಅವರಿಗೆ ತಾವು ನಂಬಿರುವ ಸುಳ್ಳಿನ ಬಗೆಗೆ ಅರಿವಾಯಿತು ಎಂದೂ ತಿಳಿಸಿದರು. ಇನ್ನು ಗಾಂಧಿ ಕತೆ ಮುಗಿಯಿತು. ಇನ್ನೇನಿದ್ದರೂ ಗೋಡ್ಸೆ ಕತೆ ಎಂದು ಹೇಳಿದವರ ಮಾತನ್ನು ನಂಬಿದ್ದ ಆಟೋ ಚಾಲಕ, ಚರ್ಚೆಯ ನಂತರ ಈ ಎಷ್ಟೋ ವಿಷಯಗಳು ನನಗೆ ಗೊತ್ತೇ ಇರಲಿಲ್ಲ ಎಂದು ಹೇಳಿದ್ದನ್ನು ಸಬಿತಾ ಅವರು ಉಲ್ಲೇಖಿಸಿದರು.

ನಮ್ಮ ಸಮಾಜವು ಏಕಧರ್ಮ, ಏಕ ಸಂಸ್ಕೃತಿಯದ್ದು ಎಂಬುದು ಸುಳ್ಳು. ನಮ್ಮಲ್ಲಿ ಸಾಕಷ್ಟು ಜಾತಿಗಳಿವೆ. ಶೇ.90 ರಷ್ಟು ಜನರಿಗೆ ಹಿಂದೂ ಎಂದರೇನು ಎಂಬುದೇ ಗೊತ್ತಿಲ್ಲ. ಜಾತಿಗಳು ಮಾತ್ರ ಗೊತ್ತು. ನಮ್ಮ ಹಳ್ಳಿಗಳಲ್ಲಿ ಸಾವಿರಾರು ಗ್ರಾಮ ದೇವತೆಗಳಿವೆ.

ಡಾ. ಜಿ.ಎಸ್. ಶಿವರುದ್ರಪ್ಪನವರು ಹೇಳಿದಂತೆ ಹಣತೆ ಹಚ್ಚಬೇಕು. ಬಿರುಕು ಮೂಡಿಸುವವರು, ದ್ವೇಷ ಹರಡುವವರು ‘ತಂತ್ರಜ್ಞಾನ’ವನ್ನು ಬಳಕೆ ಮಾಡುತ್ತಿದ್ದಾರೆ. ನಾವು ‘ಜ್ಞಾನ ತಂತ್ರ’ವನ್ನು ಬಳಕೆ ಮಾಡಬೇಕು. ಜನರು ಇರುವಲ್ಲಿಗೆ ಹೋಗಬೇಕು. ಜನರನ್ನು ನೇರವಾಗಿ ತಲುಪಬೇಕು. ಹಣ್ಣಿನ ತೊಳೆ ಬಿಡಿಸಿ ಇಟ್ಟಂತೆ ಜನರಿಗೆ ನೋಡಿ ಇದು ಹೀಗೆ ಎಂದು ವಿವರಿಸಿ ಹೇಳಬೇಕು. ಮುನ್ನಡೆಯುವ ದಾರಿಯನ್ನು ಹುಡುಕಬೇಕು ಎಂದು ಪ್ರೊ. ಸಬಿತಾ ಬನ್ನಾಡಿ ಹೇಳಿದರು.

ಬಹುತ್ವದ ಪರಂಪರೆ

ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಡಾ.ಕೆ. ಮರುಳಸಿದ್ದಪ್ಪನವರು ಮಾತನಾಡಿ, ಕರ್ನಾಟಕದ ಪರಂಪರೆಯಲ್ಲಿ ಸಂಘರ್ಷ ಮತ್ತು ಸೌಹಾರ್ದತೆ ಎರಡೂ ಇವೆ. ಸೌಹಾರ್ದ ಪರಂಪರೆ ಎನ್ನುವುದುದಕ್ಕಿಂತ ಬಹುತ್ವದ ಪರಂಪರೆ ಎಂದು ಕರೆಯುವುದು ಹೆಚ್ಚು ಸೂಕ್ತ. ಭಾರತವು ಏಕ ಸಂಸ್ಕೃತಿಯ ಆಧಾರದಲ್ಲಿ ಬೆಳೆದು ಬಂದಿದೆ ಎಂಬ ಸುಳ್ಳು ಸಿದ್ಧಾಂತವನ್ನು ಹರಡಲಾಗಿದೆ. ಭಾರತವೇ ಇರಲಿ ಕರ್ನಾಟಕವೇ ಇರಲಿ ಎಂದೂ ಸಹ ಅವು ಏಕಸಂಸ್ಕೃತಿಯವಾಗಿರಲಿಲ್ಲ. ಜನರಿಗೆ ಮರೆತು ಹೋಗಿರುವ ಬಹುಸಂಸ್ಕೃತಿಯ ವಿಚಾರಗಳನ್ನು ನೆನಪಿಸಿಕೊಡಬೇಕಿದೆ. ನೆಹರು ಅವರು ಭಾರತವು ಬಹುತ್ವದಲ್ಲಿ ಏಕತೆ ಇರುವ ದೇಶ ಎಂದು ಸರಿಯಾಗಿಯೇ ಹೇಳಿದ್ದಾರೆ. ಕರ್ನಾಟಕವು ಎಂದೂ ಏಕ ಸಂಸ್ಕೃತಿ, ಏಕ ಧರ್ಮದ ನಾಡು ಆಗಿರಲಿಲ್ಲ. ಕರ್ನಾಟಕದಲ್ಲಿ ಮೊದಲಿಗೆ ಬೌದ್ಧಧರ್ಮವೇ ವ್ಯಾಪಕವಾಗಿ ಹರಡಿತ್ತು. ನಂತರ ಜೈನ ಧರ್ಮ ಹರಡಿತು. 9 ರಿಂದ 12 ನೇ ಶತಮಾನದವರೆಗೆ ಜೈನ ಸಾಹಿತಿಗಳೇ ಕನ್ನಡ ಸಾಹಿತ್ಯದಲ್ಲಿ ಎದ್ದು ಕಾಣುತ್ತಾರೆ. 12 ನೇ ಶತಮಾನದ ನಂತರ ಶರಣ ಪರಂಪರೆಯನ್ನು ನೋಡುತ್ತೇವೆ. ಅ ನಂತರದಲ್ಲಿ ವೈದಿಕ ಪರಂಪರೆ, ಇಸ್ಲಾಂ, ಕ್ರೈಸ್ತ ಪರಂಪರೆಗಳನ್ನು ಸಹ ನೋಡುತ್ತೇವೆ. ಭಾರತದಲ್ಲಿಯೂ ಬಹುತೇಕ ಹೀಗೆಯೇ ಆಗಿದೆ. ದೇಶದ ಇಂತಹ ಬಹುತ್ವದ ಪರಂಪರೆಗೆ ನಾವೇ ಸೂಕ್ತರಾದ ವಾರಸುದಾರರು.

ನಮ್ಮ ಸಮಾಜವು ಏಕಧರ್ಮ, ಏಕ ಸಂಸ್ಕೃತಿಯದ್ದು ಎಂಬುದು ಸುಳ್ಳು. ನಮ್ಮಲ್ಲಿ ಸಾಕಷ್ಟು ಜಾತಿಗಳಿವೆ. ಶೇ. 90 ರಷ್ಟು ಜನರಿಗೆ ಹಿಂದೂ ಎಂದರೇನು ಎಂಬುದೇ ಗೊತ್ತಿಲ್ಲ. ಜಾತಿಗಳು ಮಾತ್ರ ಗೊತ್ತು. ನಮ್ಮ ಹಳ್ಳಿಗಳಲ್ಲಿ ಸಾವಿರಾರು ಗ್ರಾಮ ದೇವತೆಗಳಿವೆ. ಹಳ್ಳಿಯವರನ್ನು ಆಕರ್ಷಿಸಿರುವುದು ಈ ಗ್ರಾಮ ದೇವತೆಗಳೇ ಹೊರತು ವೈದಿಕ ದೇವರುಗಳಲ್ಲ ಎಂದು ಪ್ರೊ. ಕೆ. ಮರುಳಸಿದ್ದಪ್ಪ ಹೇಳಿದರು.

ಭಾಷಿಕವಾಗಿಯೂ ವೈವಿಧ್ಯಮಯ

ಭಾಷಿಕವಾಗಿಯೂ ಕರ್ನಾಟಕವು ವೈವಿಧ್ಯಮಯವಾದುದು. ಇಲ್ಲಿ ಕನ್ನಡಕ್ಕಿಂತಲೂ ಪ್ರಾಚೀನವಾದ ತುಳು, ಹಾಗೆಯೇ, ಕೊಡವ, ಹವ್ಯಕ, ಉರ್ದು, ತೆಲುಗು, ಮರಾಠಿ ಮುಂತಾದ ಭಾಷೆಗಳಿವೆ. ಭಾಷಿಕವಾಗಿಯೂ ಬಹುತ್ವದ ನಾಡು ಕರ್ನಾಟಕ.

‘ಮನುಜ ಕುಲ ತಾನೊಂದೆ ವಲಂ’ ಎಂದು ಪಂಪನು ಹೇಳಿದ. ‘ಸಕಲ ಜೀವಾತ್ಮರಿಗೆ ಲೇಸನೇ ಬಯಸುವ’ ಶರಣರು ಇಲ್ಲಿಯವರು, ‘ಸರ್ವ ಜನಾಂಗದ ಶಾಂತಿಯ ತೋಟ’ ಎಂದು ಕುವೆಂಪು ಸಾರಿದ್ದಾರೆ. ಉಕ್ರೇನ್‌ನಲ್ಲಿ ಹಾಗೂ ಪಾಲೆಸ್ಟೇನ್‌ನಲ್ಲಿ ಇಂದು ಸಾವಿರಾರು ಮಕ್ಕಳು, ಜನರನ್ನು ಮರುಕ, ಕರುಣೆ ಇಲ್ಲದೇ ಕೊಲ್ಲಲಾಗುತ್ತಿದೆ. ಇದು ತಲ್ಲಣದ ಕಾಲ, ನಾವು ಬಹುತ್ವದ ಪರಂಪರೆಯನ್ನು ನೆನಪಿಸಿಕೊಂಡು ಸ್ಪಂದಿಸಿಬೇಕಿದೆ. ತಲ್ಲಣಗಳಿಗೆ ಉತ್ತರ ಕೊಡಬೇಕಿದೆ.

ಸಮಾಜದಲ್ಲಿ ತಾರತಮ್ಯ ಮಾಡುವವರು ದೇಶದ ವೈರಿಗಳು, ಶ್ರೀಮಂತರಿಗೆ ಅನುಕೂಲ ಮಾಡಿಕೊಡುವ ಅಜೆಂಡಾ ಅವರದು. ಆದರೆ ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು ಎಂಬ ನೀತಿಯ ಆಧಾರದಲ್ಲಿ ನಾವು ಮುಂದೆ ಹೋಗಬೇಕಿದೆ ಎಂದು ಡಾ. ಕೆ. ಮರುಳ ಸಿದ್ದಪ್ಪ ತಿಳಿಸಿದರು.

ಉಪನ್ಯಾಸದ ಆರಂಭದಲ್ಲಿ ಸೌಹಾರ್ದ ಕರ್ನಾಟಕದ ಸಂಚಾಲಕರುಗಳಲ್ಲಿ ಒಬ್ಬರಾದ ಡಾ.ಎಸ್.ವೈ.ಗುರುಶಾಂತ್ ಪ್ರಸ್ತಾವಿಕ ಮಾತುಗಳನ್ನಾಡಿದರು. ಬಿ.ರಾಜಶೇಖರ ಮೂರ್ತಿಯವರು ಕಾರ್ಯಕ್ರಮ ನಿರೂಪಿಸಿದರು. ಆರ್. ರಾಮಕೃಷ್ಣ ವಂದಿಸಿದರು. ●

ಆದಿವಾಸಿ ಕ್ರೈಸ್ತರ ವಿರುದ್ಧ ಗುರಿಯಿಡುವ ಹುನ್ನಾರ –ವಿಫಲಗೊಳಿಸಲು ಎಎಆರ್‌ಎಂ ಕರೆ

ಜನಜಾಗೃತಿ ಸುರಕ್ಷಾ ಮಂಚ್ (ಜೆಎಸ್‌ಎಂ) ಎಂಬ ಸಂಘಟನೆ ದೇಶದ ಕ್ರಿಶ್ಚಿಯನ್ ಆದಿವಾಸಿ ಸಮುದಾಯಗಳನ್ನು ಗುರಿಯಾಗಿಸಿ ನಡೆಸುತ್ತಿರುವ ದ್ವೇಷ ಪ್ರಚಾದ ಬಗ್ಗೆ ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ (ಎಎಆರ್‌ಎಂ) ತೀವ್ರ ಕಳವಳ ವ್ಯಕ್ತಪಡಿಸಿದೆ.

ಬೇರೆ ಬೇರೆ ರಾಜ್ಯಗಳಲ್ಲಿ ಇದರ ದ್ವೇಷ ಪ್ರಚಾರಕ್ಕೆ ಆರ್‌ಎಸ್‌ಎಸ್ ಮತ್ತು ಅನೇಕ ಬಿಜೆಪಿ ನಾಯಕರ ಬೆಂಬಲ ಇದೆ. ಇವರು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿರುವ ಆದಿವಾಸಿ ಪಂಗಡಗಳನ್ನು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯಿಂದ ತೆಗೆದು ಹಾಕಬೇಕೆಂದು ಆಗ್ರಹಿಸುತ್ತಿದ್ದಾರೆ. ಇದು ಸಂವಿಧಾನ–ವಿರೋಧಿ ಮತ್ತು ವಿಭಜನಕಾರಿ ನಿಲುವು ಎಂದು ಎಎಆರ್‌ಎಂ ಟೀಕಿಸಿದೆ.

ಯಾವುದೇ ಸಮುದಾಯವನ್ನು ಪರಿಶಿಷ್ಟ ಬುಡಕಟ್ಟು ಪಟ್ಟಿಯಲ್ಲಿ ಸೇರಿಸಲು ಕಾನೂನಿನಲ್ಲಾಗಲೀ, ಸಂವಿಧಾನದಲ್ಲಾಗಲೀ ಧರ್ಮವನ್ನು ಆಧಾರವಾಗಿ ತಗೊಂಡಿಲ್ಲ. ನಿಜ ಹೇಳಬೇಕೆಂದರೆ ಮೋದಿ ಆಳ್ವಿಕೆಯಲ್ಲಿ ಪರಿಶಿಷ್ಟ ಬುಡಕಟ್ಟುಗಳ ಭೂಮಿ ಹಕ್ಕಿಗಿರುವ ರಕ್ಷಣೆಯ ಕಾನೂನಾತ್ಮಕ ಗ್ಯಾರಂಟಿಗಳನ್ನು ಮತ್ತು ಆದಿವಾಸಿ ಪ್ರದೇಶದಲ್ಲಿ ಯಾವುದೇ ಪ್ರಾಜೆಕ್ಟ್ ಕುರಿತಂತೆ ಗ್ರಾಮಸಭೆಯ ಹಕ್ಕುಗಳನ್ನು ರಾಜಾರೋಷವಾಗಿ ಉಲ್ಲಂಘಿಸಲಾಗಿದೆ, ಬುಡಮೇಲು ಮಾಡಲಾಗಿದೆ, ಇಲ್ಲವೇ ಆದಿವಾಸಿಗಳ ಹಿತಾಸಕ್ತಿಗಳ ವಿರುದ್ಧ ತಿದ್ದುಪಡಿ ಮಾಡಲಾಗಿದೆ. ಜೆಎಸ್‌ಎಂ ಇದರ ವಿರುದ್ಧ, ಅರಣ್ಯ ಹಕ್ಕುಗಳ ಕಾಯ್ದೆಯನ್ನು ದುರ್ಬಲಗೊಳಿಸುವುದು, ಅರಣ್ಯ ಸಂರಕ್ಷಣಾ ಕಾಯ್ದೆಗೆ ಆದಿವಾಸಿ–ವಿರೋಧಿ ತಿದ್ದುಪಡಿಗಳು, ಪಿಇಎಸ್‌ಎ ಉಲ್ಲಂಘನೆ ಇತ್ಯಾದಿಗಳ ವಿರುದ್ಧ ಎಂದೂ ಚಕಾರ ಎತ್ತಿಲ್ಲ. ಈ ಮೂಲಕ ಅದು, ದೇಶಾದ್ಯಂತ ಆಧೀವಾಸಿಗಳು ಜಲ್–ಜಂಗಲ್–ಜಮೀನ್ ರಕ್ಷಣೆಗೆ ಅಣಿನೆರಯುತ್ತಿರುವಾಗ, ಆದಿವಾಸಿ–ವಿರೋಧಿ ಕಾರ್ಪೊರೇಟ್–ಪರ ಧೋರಣೆಗಳಿಗೆ ರಕ್ಷಣೆ ಒದಗಿಸಿದೆ ಎಂದು ಎಎಆರ್‌ಎಂ ಆಪಾದಿಸಿದೆ.

ಕ್ರಿಸ್ಮಸ್ ಸಮಯದಲ್ಲಿ ತ್ರಿಪುರ, ಜಾರ್ಖಂಡ್ ಮುಂತಾದ ರಾಜ್ಯಗಳಲ್ಲಿ ಕ್ರೈಸ್ತ ಆದಿವಾಸಿಗಳ ವಿರುದ್ಧ, ಅವರನ್ನು ಬುಡಕಟ್ಟು ಪಟ್ಟಿಯಿಂದ ತೆಗೆಯಬೇಕು ಎಂದು ಪ್ರಚೋದನಕಾರಿ ಕಾರ್ಯಕ್ರಮಗಳನ್ನು ನಡೆಸಲು ಜೆಎಸ್‌ಎಂ ಕರೆ ನೀಡಿರುವುದಾಗಿ ವರದಿಯಾಗಿದೆ.

ಇತ್ತೀಚೆಗೆ ನಡೆದ ಎಎಆರ್‌ಎಂ ನ ರಾಷ್ಟ್ರೀಯ ಕಾರ್ಯಕಾರಿ ಮಂಡಳಿ ಮತಪ್ರದರ್ಶನಗಳು ಮತ್ತು ಧರಣಿಗಳ ಮೂಲಕ ಜೆಎಸ್‌ಎಂನ ವಿಭಜನಕಾರೀ ಕರೆಯನ್ನು ಎದುರಿಸಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ. ಈ ಜೆಎಸ್‌ಎಂ ಮರೆಯಲ್ಲಿ ಆರ್‌ಎಸ್‌ಎಸ್–ಬಿಜೆಪಿಯ ದುಷ್ಟ ಹುನ್ನಾರದ ವಿರುದ್ಧ ದನಿಯೆತ್ತುವಂತೆ ದೇಶದ ಎಲ್ಲ ಜಾತ್ಯತೀತ ಪ್ರಜಾಪ್ರಭುತ್ವಾದಿ ಶಕ್ತಿಗಳಿಗೂ ಎಎಆರ್‌ಎಂ ಕರೆ ನೀಡಿದೆ.

ಕೇಂದ್ರ ಸರಕಾರದ ಆದಿವಾಸಿ–ವಿರೋಧಿ ಧೋರಣೆಗಳ ವಿರುದ್ಧ ಆದಿವಾಸಿಗಳ ಐಕ್ಯತೆಗೆ ಹೋರಾಡುತ್ತಿರುವ ಎಎಆರ್‌ಎಂ ಕ್ರಿಸ್ಮಸ್ ಸಮಯದಲ್ಲಿ ಜೆಎಸ್‌ಎಂನ ಇಂತಹ ವಿಭಜನಕಾರೀ ಮತ್ತು ಪ್ರಚೋದನಾಕಾರಿ ಕಾರ್ಯಕ್ರಮಗಳಿಗೆ ಅನುಮತಿ ನೀಡಬಾರದು ಎಂದು ರಾಜ್ಯಸರಕಾರಗಳಿಗೂ ಕರೆ ನೀಡಿದೆ.

ಸರ್ಕಾರಿ ಗೋದಾಮುಗಳ ಆಸ್ತಿ ಖಾಸಗಿಯವರಿಗೆ... ಪುಟ 11 ರಿಂದ

ಕೇಂದ್ರ ಸಂಸ್ಥೆ. ಇತರ ರಾಜ್ಯ ಏಜೆನ್ಸಿಗಳೊಂದಿಗೆ ಬೆಂಬಲ ಬೆಲೆಯಡಿಯಲ್ಲಿ ಗೋಧಿ ಮತ್ತು ಭತ್ತದ ಸಂಗ್ರಹಣೆಯನ್ನು ಕೈಗೊಳ್ಳುತ್ತದೆ. ಕಾಲಕಾಲಕ್ಕೆ ಭಾರತ ಸರ್ಕಾರ ಹೊರಡಿಸಿದ ನಿರ್ದೇಶನದಂತೆ ಒರಟಾದ ಧಾನ್ಯಗಳನ್ನು ರಾಜ್ಯ ಸರ್ಕಾರದ ಏಜೆನ್ಸಿಗಳು ಖರೀದಿಸುತ್ತವೆ. ರೈತರಿಗೆ ಲಾಭದಾಯಕ ಬೆಲೆಗಳನ್ನು ಖಚಿತಪಡಿಸಿಕೊಳ್ಳಲು ಬೆಂಬಲ ಬೆಲೆ ಅಡಿಯಲ್ಲಿ ಸಂಗ್ರಹಣೆ ಮಾಡಲಾಗುತ್ತದೆ. ಇವು ಖಾಸಗಿಯವರ ಕೈಗೆ ಹೋದರೆ, ರೈತರಿಂದ ಈಗಿನ ಕನಿಷ್ಟ ಬೆಂಬಲ ಬೆಲೆಗೆ ಖರೀದಿ ಮಾಡಲೂ ಸರ್ಕಾರ ಮುಂದಾಗುವುದಿಲ್ಲ. ಇಂತಹ ದುರುದ್ದೇಶದಿಂದಲೇ ಮೋದಿ ಸರ್ಕಾರ ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ಜಾರಿಗೆ ತಂದಿತ್ತು. ರೈತರು ದಿಟ್ಟ ಹೋರಾಟದಿಂದ ಈ ಕರಾಳ ಕಾಯ್ದೆಗಳನ್ನು ಹಿಂಪಡೆಯುವಂತೆ ಮಾಡಿದರೂ, ಸರ್ಕಾರ ಹಿಂಬಾಗಿಲಿನಿಂದ ಇವುಗಳನ್ನು ಜಾರಿಮಾಡಲು ಹೊರಟಿದೆ.

ಆಹಾರ ಭದ್ರತೆಗೆ ಅಪಾಯ

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸರ್ಕಾರಿ ಉಗ್ರಾಣಗಳಲ್ಲಿ ಆಹಾರ ಧಾನ್ಯಗಳ ಸಂಗ್ರಹ ಕಡಿಮೆಯಾಗುತ್ತಿದೆ. ಸಾರ್ವಜನಿಕ ಪಡಿತರ ವ್ಯವಸ್ಥೆಯು ಕಡಿತವನ್ನು ಎದುರಿಸುತ್ತಿದೆ. ಇದರಿಂದ ರೈತರಿಗೆ ಕನಿಷ್ಠ ಬೆಂಬಲ ಬೆಲೆ ಸಿಗುತ್ತಿಲ್ಲ, ಗ್ರಾಹಕರು ಖರೀದಿಸುವ ಧಾನ್ಯಗಳ ಬೆಲೆಯೂ ಹೆಚ್ಚುತ್ತಿದೆ. ಸರ್ಕಾರದ ಗೋದಾಮುಗಳು ಹಲವು ಕಾರ್ಪೊರೇಟ್‌ಗಳ ಕೈಗೆ ಹೋದರೆ, ಭವಿಷ್ಯದಲ್ಲಿ ಆಹಾರ ಭದ್ರತೆ ಪ್ರಶ್ನಾರ್ಹವಾಗುತ್ತದೆ. ಇದಲ್ಲದೆ, ಗೋದಾಮುಗಳ ಆನ್‌ಲೈನ್ ನಿರ್ವಹಣೆಗಾಗಿ ಕೇಂದ್ರವು ಡಿಜಿಟಲೀಕರಣವನ್ನು ಪ್ರಾರಂಭಿಸಿದೆ. ಕಾರ್ಪೊರೇಟ್‌ಗಳಿಗೆ ಮತ್ತು ಗೋದಾಮುಗಳ ಮಾರಾಟಕ್ಕಾಗಿ ಮೋದಿ ಸರ್ಕಾರ ರೂಪಿಸಿರುವ ಹಣಗಳಿಸುವ ಕಾರ್ಯಕ್ರಮವನ್ನು ಎಲ್ಲ ಜನರು ವಿರೋಧಿಸಬೇಕಿದೆ. ●

ಬೆಳಗಾವಿಯಲ್ಲಿ ಅಧಿವೇಶನ: ಘೋಷಿತ.... ಪುಟ 3 ರಿಂದ

ಕೃಷಿ ಮತ್ತು ಕೈಗಾರಿಕೆ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಆ ಮೂಲಕ ಸಾಮಾಜಿಕ ರಂಗದಲ್ಲಿ ಮೂಲಭೂತ ಬದಲಾವಣೆಗಳನ್ನು ತರುವಂತಹ ಯಾವ ಕ್ರಮಗಳನ್ನು ವಹಿಸದೆ ಕೇವಲ ಅಷ್ಟಿಷ್ಟು ಹಣವನ್ನು ಮೀಸಲಿಡುವುದು ಬಿಟ್ಟರೆ ಮತ್ತೇನನ್ನು ಮಾಡಲಾಗಿಲ್ಲ. ಪ್ರಾದೇಶಿಕ ಅಸಮಾನತೆಯನ್ನ ತೊಲಗಿಸಲು ಮಂಡಳಿಯನ್ನ ರಚಿಸಿರುವುದು ಮತ್ತು ಅದಕ್ಕೆ ಬಜೆಟ್ಟಿನಲ್ಲಿ ಹತ್ತಾರು ಸಾವಿರ ಕೋಟಿ ರೂ.ಗಳ ಹಣವನ್ನು ಹಂಚಿಕೆ ಮಾಡಿರುವುದು ಈಗಾಗಲೇ ಅಂತಹ ಹಣ ಆಗಿರುವ ಖರ್ಚು ಏನಾದರೂ ನಿಜವಾದ ಫಲವನ್ನ ತಂದಿದೆಯೇ? ಉದ್ದೇಶದ ಗುರಿಯನ್ನು ಸಾಧಿಸಿದೆಯೇ ಎನ್ನುವ ಬಗ್ಗೆ ಸೂಕ್ತ ಮೌಲ್ಯಮಾಪನವೇ ಇಲ್ಲವಾಗಿದೆ. ಈಗಲೂ ಮೀಸಲಿಟ್ಟ ಹಣದಲ್ಲಿ ಸುಮಾರು 3533 ಕೋಟಿ ರೂಪಾಯಿಗಳ ಹಣ ಬಳಕೆಯೇ ಆಗಿಲ್ಲ ಎನ್ನುವ ಸಂಗತಿಯು ಹೊರ ಬಂದಿದೆ. ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸಲು ರಸ್ತೆಗಳ ನಿರ್ಮಾಣ, ಸೇತುವೆಗಳ ನಿರ್ಮಾಣ, ಕೆಲವು ಕಟ್ಟಡಗಳ ನಿರ್ಮಾಣ ದಂತಹ ಯೋಜನೆಗಳನ್ನೇ ಹಾಕಿಕೊಳ್ಳುವುದರಿಂದ ಗುತ್ತಿಗೆದಾರರಿಗೆ ಮತ್ತು ಅಧಿಕಾರಸ್ತರಿಗೆ ಕಮಿಷನ್ ಸಿಗಬಹುದೇ ಹೊರತು ಈ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ರಂಗದಲ್ಲಿ ಬದಲಾವಣೆಗಳನ್ನು ತರಲು ಸಾಧ್ಯವೇ ಇಲ್ಲ. ಅಭಿವೃದ್ಧಿಗಾಗಿ ಹರಿಸಲಾದ ಸಾವಿರಾರು ಕೋಟಿ ರೂಪಾಯಿಗಳ ಹಣ ಯಾರ ಜೇಬಿನಕೆ ಹರಿದಿದೆ ಎನ್ನುವುದು ತನಿಖೆಯಾಗಬೇಕಾದ ವಿಷಯ. ಬಹು ನಿರೀಕ್ಷಿತ ಮತ್ತು ಘೋಷಿತವಾದ 371 (ಜೆ) ಕಲಮಿನ ತಿದ್ದುಪಡಿ ಯಿಂದ ವಾಸ್ತವದಲ್ಲಿ ಈ ಪ್ರದೇಶದ ಜನತೆಗೆ ಆಗಿರುವ ಅನುಕೂಲವಾದರೂ ಏನು ಎನ್ನುವುದರ ಮೌಲ್ಯಮಾಪನವಿಲ್ಲ. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಜಾರಿಗೊಳಿಸುವಲ್ಲಿ ಮತ್ತು ಅ ಮೂಲಕ ಈ ಭಾಗದ ಜನರಿಗೆ ನ್ಯಾಯವನ್ನು ದೊರಕಿಸಿ ಕೊಡುವಲ್ಲಿ ವ್ಯತಿರಿಕ್ತವಾಗಿ ಅತ್ಯಂತ ಪಕ್ಷಪಾತ ಮತ್ತು ತಾರತಮ್ಯಗಳು ರಾಜಧಾನಿ ಕೇಂದ್ರದಿಂದ ನಡೆಯುತ್ತಿವೆ ಎನ್ನುವ ಅಂಶದ ಕಡೆಗೆ ಜನಪ್ರತಿನಿಧಿಗಳು ಮತ್ತು ಸರ್ಕಾರ ಕಿಂಚಿತ್ತೂ ತಲೆಯನ್ನೇ ಕೆಡಿಸಿಕೊಂಡಿಲ್ಲ. ವಿಧಾನಸಭೆಯಲ್ಲಿರುವ 371 ಜೆ ಜಾರಿ ಕೋಶವು ಮಾಹಿತಿಗಳ ಕೊರತೆ ಮತ್ತು ಮಾರ್ಗದರ್ಶನ ಹೀನತೆಯಿಂದ ನರಳುತ್ತಿದೆ. ಹೀಗೆ ಈ ಭಾಗದ ಜನರಿಗೆ ವಂಚಿಸುವ ರೀತಿ ನೀತಿಯ ಭಾಗ ಅದು ಎನ್ನುವುದು ನಿರಾತಂಕವಾಗಿ ನಡೆದಿರುವುದು ವೇದ್ಯವಾಗುತ್ತದೆ.

ಒಟ್ಟಾರೆ ಬೆಳಗಾವಿಯಲ್ಲಿ ಆರಂಭಗೊಂಡಿರುವ ಚಳಿಗಾಲದ ಅಧಿವೇಶನವು ಹಿಂದಿನಂತೆಯೇ ಸದ್ದು ಗದ್ದಲಗಳು ನಡುವೆ ಹಾಗೇ ಸಾಗಿ ಹೋಗುವ ಎಲ್ಲಾ ಸೂಚನೆಗಳು ಇವೆ. ಸರ್ಕಾರ ಘೋಷಿತ ಉದ್ದೇಶಕ್ಕೆ ಬದ್ಧವಾಗಿ ಕಲಾಪಗಳನ್ನು ಈಗಲಾದರೂ ಸರಿದಾರಿಗೆ ತರಬೇಕು ಮತ್ತು ಅರ್ಥಪೂರ್ಣ ಗೊಳಿಸಬೇಕು.

ಹಲವಾರು ಪ್ರಶ್ನೆಗಳನ್ನೆತ್ತಿ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಪ್ರತಿಭಟನೆ, ಧರಣಿಗಳನ್ನು ನಡೆಸುವ ಜನ ಸಂಘಟನೆಗಳು ಕೂಡ ಈ ದೆಸೆಯಲ್ಲಿ ಯೋಚಿಸಬೇಕು. ಈ ಅಧಿವೇಶನದ ಕಲಾಪ ಒಟ್ಟಾರೆಯಾಗಿ ಒಂದು ಜಾತ್ರೆ ಜಂಗುಳಿಯಾಗದಂತೆ ನೋಡಿಕೊಳ್ಳುವ ಹೊಣೆ ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ಜನಪ್ರತಿನಿಧಿಗಳಿಗೆ ಇರುವಂತೆ ಜನರ ಮೇಲೆ ಸಹ ಇದೆ ಎನ್ನುವುದು ಕೂಡ ಮರೆಯಬಾರದು. ●

NEW No. MAG(3)/NPP/205/2021-2022
JANASHAKTHI KANNADA VARA PATRIKE December 11-17, 2023 Price: Rs. 10/- Date of Publication: 8 December 2023 RNI No. KARKAN /2006/17926 Posted on 09-12-2023
Posted at BG PSO, BG - 560026 **Posted at Periodical Rate -** Rs. 2

‘ಸೌಹಾರ್ದ ಕರ್ನಾಟಕ’ ಸರಣಿ ಉಪನ್ಯಾಸ ಮಾಲಿಕೆ ಉದ್ಘಾಟನೆ

ಬಹುತ್ವವೇ ನಮ್ಮ ನಾಡಿನ ಹೆಗ್ಗುರುತು

ನಮ್ಮ ಸಮಾಜವು ಏಕಧರ್ಮ, ಏಕ ಸಂಸ್ಕೃತಿಯದ್ದು ಎಂಬುದು ಸುಳ್ಳು...

ಪ್ರೊ. ಕೆ. ಮರುಳಸಿದ್ದಪ್ಪ

‘ಸೌಹಾರ್ದ ಕರ್ನಾಟಕ’ವು ಯೋಜಿಸಿರುವ ಸರಣಿ ಕಾರ್ಯಕ್ರಮಗಳಲ್ಲಿ ‘ಕರ್ನಾಟಕದ ಸೌಹಾರ್ದ ಪರಂಪರೆಯ ಕುರಿತ ಮೊದಲ ಆನ್‌ಲೈನ್ ಉಪನ್ಯಾಸವು ನವೆಂಬರ್ 30. 2023 ರಂದು ನಡೆಯಿತು. ಸೌಹಾರ್ದತೆ ಎಂಬ ವಿಷಯದ ನಾನಾ ಮಗ್ಗಲುಗಳನ್ನು ಪರಿಶೋಧಿಸಿದ ಕಾರ್ಯಕ್ರಮದ ವರದಿ ನಿಮಗಾಗಿ.

ಆರ್. ರಾಮಕೃಷ್ಣ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರು, ಸಾಹಿತಿಗಳೂ ಆದ ಪ್ರೊ. ಅರವಿಂದ ಮಾಲಗತ್ತಿಯವರು ಈ ಉಪನ್ಯಾಸ ಸರಣಿಯನ್ನು ಉದ್ಘಾಟಿಸಿದರು. ಸಾಹಿತಿ ಪ್ರಾಧ್ಯಾಪಕಿ ಪ್ರೊ. ಸಬಿತಾ ಬನ್ನಾಡಿಯವರು ವಿಚಾರ ಮಂಡಿಸಿದರು. ಹಿರಿಯ ಚಿಂತಕರು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಆದ ಡಾ.ಕೆ. ಮರುಳ ಸಿದ್ದಪ್ಪನವರು ಅಧ್ಯಕ್ಷತೆ ವಹಿಸಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ರೋಟಿ, ಲೋಟ, ಬೇಟಿ

ಹಿಂದೂ ಸಮಾಜವು ಒಡೆದ ಮನೆ, ಅದು ತನ್ನ ವಿರುದ್ಧ ತಾನೇ ಸೆಣೆಸುತ್ತಿದೆ ಎಂಬ ಬಾಬಾಸಾಹೇಬ ಅಂಬೇಡ್ಕರರ ಮಾತನ್ನು ನೆನಪಿಸಿಕೊಳ್ಳುವ ಮೂಲಕ ಮಾತು ಆರಂಭಿಸಿದ ಅರವಿಂದ ಮಾಲಗತ್ತಿಯವರು ಸಮಾಜದಲ್ಲಿ ಸೌಹಾರ್ದತೆ ಸಾಧಿಸುವ ನಿಟ್ಟಿನಲ್ಲಿ ಮಹಾತ್ಮ ಗಾಂಧಿಯವರು ಪ್ರತಿಪಾದಿಸಿರುವ ರೋಟಿ, ಲೋಟ, ಬೇಟಿ ಎಂಬ ಮೂರು ವಿಷಯಗಳ ಕುರಿತು ವಿವರಿಸಿದರು.



ಉದ್ಘಾಟಿಸಿದ ಪ್ರೊ.ಅರವಿಂದ ಮಾಲಗತ್ತಿ

ರೋಟಿ ಎಂದರೆ ಆಹಾರ ಅಂದರೆ ಸಹಬೋಜನದ ಮೂಲಕ, ಲೋಟ ಎಂದರೆ ನೀರು ಕುಡಿಯುವ ಮೂಲಕ, ಮತ್ತು ಬೇಟಿ ಎಂದರೆ ಜಾತಿ ಬೇಧವಿಲ್ಲದೇ ಮನೆಯ ಹೆಣ್ಣನ್ನು ಮದುವೆ ಮಾಡಿ ಕೊಡುವ ಮೂಲಕ ಸಮಾಜದಲ್ಲಿ ಸೌಹಾರ್ದತೆ ಸಾಧಿಸಬಹುದು ಎಂಬುದು ಗಾಂಧೀಜಿಯವರ ಪ್ರತಿಪಾದನೆಯಾಗಿತ್ತು. ಡಾ. ಬಿ.ಆರ್. ಅಂಬೇಡ್ಕರ್ ಅವರು ಈ ನೀತಿಯನ್ನು ಟೀಕಿಸಿದ್ದಾರೆ. ಜಾತಿ ಬೇಧವಿಲ್ಲದೇ ಹೆಣ್ಣಿಗೆ ಮದುವೆ ಮಾಡಿಕೊಡುವ ಮೂಲಕ ಮೇಲೆ ಹೇಳಲಾದ ಮೂರೂ ಅಂಶಗಳನ್ನು ಸಾಧಿಸಬಹುದು ಎಂಬುದು ಅಂಬೇಡ್ಕರ್ ಅವರ ವಿಚಾರ ಎಂದು ಅರವಿಂದ ಮಾಲಗತ್ತಿಯವರು ಹೇಳಿದರು.

ಶಾಲೆ, ಕಾಲೇಜು, ವಿ.ವಿ.ಗಳು
ಸೌಹಾರ್ದತೆ ರೂಪಿಸುವ ತಾಣಗಳು

ಮಕ್ಕಳು ಒಟ್ಟಿಗೆ ಸೇರಿಕೊಂಡು ಚರ್ಚೆ ಮಾಡುವ ಕಾರಣಕ್ಕಾಗಿ ನಮ್ಮ ಸಮಾಜದಲ್ಲಿ ಶಾಲೆ, ಕಾಲೇಜುಗಳು, ವಿಶ್ವ ವಿದ್ಯಾಲಯಗಳು ಸೌಹಾರ್ದತೆಯನ್ನು ರೂಪಿಸುವ ಮಹತ್ವದ ತಾಣಗಳು. ಹೋಟೇಲು, ಖಾನಾವಳಿಗಳು ವ್ಯಾಪಾರಿ ತಾಣಗಳಾದರೂ ಸೌಹಾರ್ದತೆಯನ್ನು ರೂಪಿಸುವಲ್ಲಿ ಪ್ರಮುಖ ತಾಣಗಳು. ಜಾತ್ರೆ ಮತ್ತು ಸಂತೆ ಸಹ ಹಾಗೆಯೇ ಎಂದು ಪ್ರೊ. ಮಾಲಗತ್ತಿಯವರು ತಿಳಿಸಿದರು.

ಮಕ್ಕಳು ಒಟ್ಟಿಗೆ ಸೇರಿಕೊಂಡು ಚರ್ಚೆ ಮಾಡುವ ಕಾರಣಕ್ಕಾಗಿ ನಮ್ಮ ಸಮಾಜದಲ್ಲಿ ಶಾಲೆ, ಕಾಲೇಜುಗಳು, ವಿಶ್ವ ವಿದ್ಯಾಲಯಗಳು ಸೌಹಾರ್ದತೆಯನ್ನು ರೂಪಿಸುವ ಮಹತ್ವದ ತಾಣಗಳು.

‘ನಾಮಾಂತರ ಚಳುವಳಿ’

ಜಾತಿ–ಧರ್ಮ ಸೂಚಕ ಹೆಸರುಗಳನ್ನು ಕೈಬಿಟ್ಟು ಹೆಸರುಗಳಲ್ಲಿ ಸಾರ್ವತ್ರೀಕರಣ ಸಾಧಿಸುವ ಪ್ರವೃತ್ತಿ ನವೋದಯ ಕಾಲದಲ್ಲಿ ಇತ್ತು. ಪುನಃ ಈಗ ಇಂತಹ ನಾಮಾಂತರ ಚಳುವಳಿಯ ಪ್ರಯೋಗ ಮಾಡಬಹುದು. ಎರಡನೆಯದು ಜಾತಿ–ಧರ್ಮಕ್ಕೆ ಬೇರೆ ಬೇರೆ ಸ್ಮಶಾನಗಳ ವಿಷಯ. ಇಂದು ಅಂತರ್ ಜಾತೀಯ ವಿವಾಹಗಳನ್ನು ಮಾಡಿಕೊಂಡು, ನಂತರ ಸತ್ತಾಗ ಜಾತಿ ಸ್ಮಶಾನದಲ್ಲಿ ಹೂಳುವಂತಹ ಕೆಲಸ ಆಗುತ್ತಿದೆ. ಈ ನಿಟ್ಟಿನಲ್ಲಿ ಸರ್ವಧರ್ಮ ಸ್ಮಶಾನಗಳನ್ನು ರೂಪಿಸಬೇಕು. ಹಾಗೆಯೇ ವಾಸಸ್ಥಾನದ ವಿಷಯ. ನಗರಗಳಲ್ಲಿ ಎಲ್ಲ ಜಾತಿ, ಧರ್ಮಗಳ ಜನರು ಒಂದೇ ಕಡೆ ವಾಸಿಸುವಂತಹ ಪ್ರವೃತ್ತಿ ಗ್ರಾಮಗಳಲ್ಲೂ ಬರಬೇಕು. ನಾಲ್ಕನೆಯದು ಜಾತಿ–ಧರ್ಮಗಳ ಸಂಕೇತಗಳ ವಿಷಯ. ವಿಭೂತಿ, ನಾಮ, ಜನಿವಾರ, ಬುರ್ಖಾ, ದಾಡಿ ಬಿಡುವುದು, ಜುಟ್ಟು ಬಿಡುವುದು ಮುಂತಾದವುಗಳಿಂದಾಗಿ ಸಮಾಜವು ಒಡೆದ ಮನೆಯಂತಾಗಿದ್ದು ಅಂಬೇಡ್ಕರರು ಹೇಳಿದಂತೆ ನಮ್ಮ ವಿರುದ್ಧ ನಾವೇ ಸೆಣೆಸುವುದಕ್ಕೆ ಉದಾಹಣೆಯಾಗಿದೆ ಎಂದು ಪ್ರೊ. ಅರವಿಂದ ಮಾಲಗತ್ತಿಯವರು ವಿವರಿಸಿದರು.



ಡಾ.ಕೆ.ಮರುಳಸಿದ್ದಪ್ಪ

‘ದೀನ್ ಎ ಇಲಾಹಿ’ ಪ್ರಯೋಗ

ಮೊಘಲ್ ದೊರೆ ಅಕ್ಬರ್ ಜೈನ, ಬೌದ್ಧ, ಹಿಂದೂ, ಇಸ್ಲಾಂ ಎಲ್ಲ ಮತಧರ್ಮಗಳಿಂದ ವಿಚಾರಗಳನ್ನು ಒಳಗೊಂಡು ‘ದೀನ್ ಎ ಇಲಾಹಿ’ ಎಂಬ ಹೊಸ ಧರ್ಮವನ್ನೇ ಹುಟ್ಟು ಹಾಕಿದನು. ರಾಮಾಯಣ, ಮಹಾಭಾರತ, ಅಥರ್ವ ವೇದ, ಗೀತೆ ಮುಂತಾದವುಗಳನ್ನು ಉರ್ದುವಿಗೆ ಭಾಷಾಂತರ ಮಾಡಿದನು. ಸೌಹಾರ್ದತೆಯನ್ನು ಸಾಧಿಸುವ ಈ ವಿಚಾರ ಮೆಚ್ಚುವಂಥದ್ದು ಎಂದ ಮಾಲಗತ್ತಿಯವರು, ಅಂಬೇಡ್ಕರರು ಹೊಸ ಧರ್ಮ ಹುಟ್ಟು ಹಾಕುವ ಬದಲಿಗೆ ಬೌದ್ಧಧರ್ಮದ ಕಡೆಗೆ ಮುಖ ಮಾಡಿದರು ಎಂದು ತಿಳಿಸಿದರು.

ಈಗ ಪ್ರಜೆಗಳ ಪಾಲಿಗೆ ಧರ್ಮಕ್ಕಾಗಿ ಹೋರಾಡಿ ಸಾಯುವುದು ಮತ್ತು ಗಲಭೆಗಳ ಬಲಿಪಶುವಾಗಿ ಸಾಯುವುದು ಇಂತಹ ಪರಿಸ್ಥಿತಿ ಬಂದಿದೆ. ಆರ್ಥಿಕವಾಗಿ ಮತ್ತು ಜಾತಿ ಶ್ರೇಣೀಕರಣದಲ್ಲಿ ಕೆಳಗಿರುವ ಕೂಲಿಯಾಳುಗಳೇ ಇಂದು ಕೋಮು ಸಂಘರ್ಷಗಳಲ್ಲಿ ಬಲಿಯಾಗುತ್ತಿದ್ದಾರೆ.

ಸಮಾಜದಲ್ಲಿ ಸೌಹಾರ್ದತೆಗೆ ಧಕ್ಕೆ ಬರುವಲ್ಲಿ ಮೌಢ್ಯವೇ ಮೂಲಭೂತ ಕಾರಣ. ಮೌಢ್ಯವನ್ನು ತೆಗೆದು ಹಾಕಿದರೆ ಹಿಂಸೆಯು ತಾನೇ ತಾನಾಗಿ ಹೋಗುತ್ತದೆ ಎಂದ ಮಾಲಗತ್ತಿಯವರು ಮತಾಂಧತೆಯು ಸುಳ್ಳುಗಳ ಗೋಡೆ ಎಂದರು. ಜನರು ಒಂದಾಗದ ಹಾಗೆ ಸುಳ್ಳುಗಳ ಗೋಡೆ ಕಟ್ಟುತ್ತಾರೆ, ಈ ಗೋಡೆಗಳನ್ನು ಒಡೆಯಬೇಕು. ಸಾಮರಸ್ಯಕ್ಕೆ ಬಹುತ್ವ ಮೂಲಮಂತ್ರ. ಬಹುತ್ವವನ್ನು ಹೆಚ್ಚು ಹೆಚ್ಚು ಜನ ಮನುಷ್ಯತ್ವದ ನೆಲೆಯಲ್ಲಿ ಮಾತನಾಡುವಂತಾದರೆ ಸರ್ವಜನಾಂಗದ ಶಾಂತಿಯ ತೋಟವನ್ನು ನಿರ್ಮಿಸುವಲ್ಲಿ ಯಶಸ್ವಿಯಾಗುತ್ತೇವೆ ಎಂದರು.

ಜಾತಿ ಶ್ರೇಣೀಕರಣ ಅನುಭವಿಸಿದ್ದು,
ಕೋಮು ಸಂಘರ್ಷ ಕೇಳಿದ್ದದ್ದು...



ಡಾ.ಸಬಿತಾ ಬನ್ನಾಡಿ

ವಿಚಾರ ಮಂಡಿಸಿ ಮಾತನಾಡಿದ ಪ್ರೊ. ಸಬಿತಾ ಬನ್ನಾಡಿಯವರು, ತಮ್ಮ ಬಾಲ್ಯ ಕಾಲದಲ್ಲಿ ಹಿಂದೂ ಧರ್ಮದಲ್ಲಿನ ಜಾತಿ ಶ್ರೇಣೀಕರಣ, ಅಸ್ಪೃಶ್ಯತೆಗಳು ನೋಡಿ ಅನುಭವಿಸಿದ ವಿಷಯಗಳಾಗಿದ್ದವು. ಆದರೆ ಕೋಮು ಸಂಘರ್ಷ ಎಂಬುದು ಬರಿ ಕೇಳಿದ ಮತ್ತು ಓದಿದ ವಿಷಯಗಳಾಗಿದ್ದವು. ಸೌಹಾರ್ದ ಪರಂಪರೆ ನಮ್ಮೊಳಗೆ ಇತ್ತು ಎಂದು ನೆನಪಿಕೊಳ್ಳುವ ಪರಿಸ್ಥಿತಿ ಇಂದು ಬಂದಿದೆ. ಕೋಮು ಸಂಘರ್ಷ ಹಿಂದೆ ಇರಲಿಲ್ಲ ಎಂದಲ್ಲ. ಹನ್ನೆರಡನೇ ಶತಮಾನದ ಪ್ರಗತಿಪರವಾದ ಶರಣ ಪರಂಪರೆಯ ನಂತರ ಸುಮಾರು ನೂರು ವರ್ಷ ಕಳೆದ ಮೇಲೆ ಹರಿಹರ ರಗಳೆಯಲ್ಲಿ ಜೈನ ಬಸದಿಗಳ ನಾಶವನ್ನು ಸಂಭ್ರಮಿಸಿರುವ ಉದಾಹರಣೆಗಳು ದೊರೆಯುತ್ತವೆ. ಕನ್ನಡ ಸಾಹಿತ್ಯವು ಸೌಹಾರ್ದತೆ ಸಂಘರ್ಷ, ಶಕ್ತಿ–ಮಿತಿ ಎರಡನ್ನೂ ಹೇಳುತ್ತಲೇ ಬಂದಿದೆ, ಇದರಲ್ಲಿ ವಿಮರ್ಶೆ ಸ್ವ ವಿಮರ್ಶೆ ಎರಡೂ ಇದೆ ಎಂದರು.

‘ಗಂಡಸರಿಗೆ ತಲೆ ಕೆಟ್ಟಿದೆ’

ಹಿಂದೆ ಮುಸ್ಲಿಂ ಲೇಖಕರ ಸಾಹಿತ್ಯದಲ್ಲಿ ಒಳ ವಿಮರ್ಶೆ ಇತ್ತು. ಈಗ ನಾವು ಆಗ ಎಷ್ಟು ಚೆನ್ನಾಗಿತ್ತು ಎಂದು ಹೇಳುವ ಪರಿಸ್ಥಿತಿ ಬಂದಿದೆ. ನಾಗವೇಣಿಯವರ ಸಾಹಿತ್ಯದಲ್ಲಿ ಹೆಂಗಸರು ಕೋಮುದ್ವೇಷವನ್ನು ಧಿಕ್ಕರಿಸುತ್ತಾರೆ. ತುರ್ತಾಗಿ ಒಂದು ಹೆರಿಗೆ ಆಗಬೇಕಾಗಿರುತ್ತದೆ. ಕೋಮುಗಲಭೆಗಳಿಂದಾಗಿ ಗಂಡಸರು ಊರುಬಿಟ್ಟು ಓಡಿಹೋಗಿರುತ್ತಾರೆ. ಹೆಂಗಸರು, ಗಂಡಸರಿಗೆ ತಲೆ ಕೆಟ್ಟಿದೆ ಎಂದು ಹೇಳಿ, ದ್ವೇಷ ಬಿಟ್ಟು ಸಹಕಾರದಿಂದ ಹೆರಿಗೆ ಮಾಡಿಸುತ್ತಾರೆ ಎಂದು ಬನ್ನಾಡಿಯವರು ವಿವರಿಸಿದರು.

‘ನೆಂಟನೊಬ್ಬನ ಬಿಕ್ಕಳಿಕೆ’

ಜಿ.ಎನ್. ಮೋಹನ್ ಅವರ ‘ನೆಂಟನೊಬ್ಬನ ಬಿಕ್ಕಳಿಕೆ’ – ಬರಹವನ್ನು ಪ್ರಸ್ತಾಪಿಸಿದ ಸಬಿತಾ ಅವರು ನಲವತ್ತು ವರ್ಷಗಳ ಕೆಳಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಬೇಕೆಂದು ಬಯಸಿ ಅಲ್ಲಿಗೆ ಹೋದ ಪತ್ರಕರ್ತ ಮೋಹನ್ ಅಲ್ಲಿಯ ಸೌಹಾರ್ದ, ಸಂಭ್ರಮದ ಮಾದರಿಯನ್ನು ಕಟ್ಟಿಕೊಡುತ್ತಾರೆ. ಕೆಲ ವರ್ಷಗಳ ನಂತರ ಮತ್ತೆ ಗುಲ್ಬರ್ಗಾದಿಂದ ಮಂಗಳೂರಿಗೆ ಬಂದಾಗ ಕರಾವಳಿಯ ಸೌಹಾರ್ದ ವಾತಾವರಣ ಕೆಟ್ಟು ಅಲ್ಲಿಗೆ ತಾನು ಹೊರಗಿನವನು ಎಂಬ ಭಾವನೆ ಬಂದದ್ದರ ಕುರಿತು ಬರೆದಿರುವುದನ್ನು ಬನ್ನಾಡಿಯವರು ವಿಷಾದದಿಂದ ವಿವರಿಸಿದರು. ಸಮಾಜದಲ್ಲಿ ಈ ರೀತಿಯ ಬಿರುಕು ಈಗ ಉತ್ತರ ಕರ್ನಾಟಕ್ಕೂ ಹಬ್ಬಿದೆ ಎಂದೂ ಅವರು ವಿಷಾದಿಸಿದರು.

ಸುಳ್ಳುಗಳ ಮೂಲಕ ಬಿರುಕು

ಹಿಂದೆ ಪ್ರಭುತ್ವದಿಂದ ಧರ್ಮದ ಹೇರಿಕೆ ಕಾರಣಕ್ಕೆ ಸಂಘರ್ಷವಿತ್ತು. ಈಗ ಪ್ರಜೆಗಳು ಹುಸಿ ಪ್ರಭುತ್ವದ ಅವಾಹನೆ ಮಾಡಿಕೊಂಡಿದ್ದಾರೆ. ಸುಳ್ಳುಗಳ ಮೂಲಕ ಸಮಾಜದಲ್ಲಿ ಬಿರುಕುಗಳನ್ನು ಮೂಡಿಸಲಾಗುತ್ತಿದೆ. ಈಗ ಪ್ರಜೆಗಳ ಪಾಲಿಗೆ ಧರ್ಮಕ್ಕಾಗಿ ಹೋರಾಡಿ ಸಾಯುವುದು ಮತ್ತು ಗಲಭೆಗಳ ಬಲಿಪಶುವಾಗಿ ಸಾಯುವುದು ಇಂತಹ ಪರಿಸ್ಥಿತಿ ಬಂದಿದೆ. ಆರ್ಥಿಕವಾಗಿ ಮತ್ತು ಜಾತಿ ಶ್ರೇಣೀಕರಣದಲ್ಲಿ ಕೆಳಗಿರುವ ಕೂಲಿಯಾಳುಗಳೇ ಇಂದು ಕೋಮು ಸಂಘರ್ಷಗಳಲ್ಲಿ ಬಲಿಯಾಗುತ್ತಿದ್ದಾರೆ. ಜನರು ತಾವು ‘ವ್ಯಾಟ್ಸ್ ಆಪ್’ನಲ್ಲಿ ಓದಿದ್ದೇವೆ ಎನ್ನುತ್ತಾರೆ. ಜ್ಞಾನದ ಆಳವನ್ನು ನಿರಾಕರಿಸಲಾಗುತ್ತಿದೆ. ವೈಯುಕ್ತಿಕವಾಗಿ ಮಾನವೀಯವಾಗಿ ಮಿಡಿಯುವ ಗುಣ ಇರುವ ವಿದ್ಯಾರ್ಥಿಗಳನ್ನು ಕೂಡ ವ್ಯಾಟ್ಸ್ ಆಪ್ ಸುಳ್ಳುಗಳ ಮೂಲಕ ದಿಕ್ಕು ತಪ್ಪಿಸಿರುವುದು ಅವರೊಂದಿಗೆ ಚರ್ಚೆ ಮಾಡಿದಾಗ ಗೊತ್ತಾಗುತ್ತಿದೆ. ನಾವು ವಿದ್ಯಾರ್ಥಿಗಳೊಂದಿಗೆ ಹೆಚ್ಚು ಹೆಚ್ಚು ಮಾತನಾಡಬೇಕಿದೆ. ಆಟೋ ಚಾಲಕರೊಂದಿಗೆ ಮಾತನಾಡಿದಾಗಲೂ ಇಂತಹದ್ದೇ ಅನುಭವವಾಗಿದೆ ಎಂದ ಪ್ರೊ. ಸಬಿತಾ ಅವರು ತಿಳಿಸಿದರು.

ಸಂವಿಧಾನದ ಫಲಾನುಭವಿಗಳೇ ಬಲಿಪಶುಗಳು

ಗಾಂಧಿ ಮತ್ತು ಅಂಬೇಡ್ಕರರ ನಡುವೆ ಇದ್ದದ್ದು ವೈಚಾರಿಕ ಸಂಘರ್ಷ. ದ್ವೇಷವಲ್ಲ. ಆದರೆ ಈಗ ಗೋಡ್ಸೆ ಅಭಿಮಾನಿಗಳು ಕೇರಿಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ ಎಂದ ಸಬಿತಾ ಅವರು ಗೋಡ್ಸೆ ಅಭಿಮಾನಿಗಳು ಭಾರತದ ಸಂವಿಧಾನವನ್ನು ನಾಶ ಮಾಡುತ್ತಾರೆ. ಸಂವಿಧಾನದ ಫಲಾನುಭವಿಗಳೇ ಇದರ ಬಲಿಪಶುಗಳು ಎಂದು ವಿವರಿಸಿದರು. ರಾಮ ಮತ್ತು ಗೀತೆ ಈ ಎರಡೂ ಕೂಡ ಇಂದು ಗಾಂಧಿ ವಿರೋಧಿಗಳ ಕೈಗೆ ಸಿಕ್ಕಿವೆ ಎಂದರು.

ದ್ವೇಷದ ಕರೆಗೆ ಸೊಪ್ಪು ಹಾಕಲಿಲ್ಲ!!

ಇತ್ತೀಚೆಗೆ ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳನ್ನು **ಪುಟ 15 ಕ್ಕೆ**

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**